೬ ಪ್ರತಿ ಒಬ್ಬ ಕಂಟ್ರಾಕ್ಟ್ಟುದಾರನು ರೋಜೀನ ಟೋಲ್ ಗೇ ಟುಗಳ ಮುಖಾಂತರ ಪ್ರಾವೇಶ ಪಾಸು ವ ಹರಪಾರಿ ಗಾಡಿಗಳು ಯಾ ಜಾನವರುಗಳು ಇವುಗಳ ಮೇಲೆ ವಸೂಲಾದ ಟೋಲ್ ಯಾಷಿ ನುಂಗ ಇತ್ಯಾದಿಗಳ ತಖೀಲು ಹೋರಿಸುವ ಲೆಕ್ಕವನ್ನು ಪ್ರಸಿಡೆಂಟರ ವರು ವಿಧಾಯಕ ಮಾಡುವ ನಮೂನೆಯಲ್ಲಿ ಇಟ್ಟು ಅಂಥಾ ಲೆಕ್ಕ ವನ್ನು ಕಂಟ್ರಾಕ್ಟರು ಪ್ರತಿ ಪಾಹೆಯಲ್ಲಿಯೂ ಪ್ರಸಿಡೆಂಟರಿಂ ಇನ್‌ಸ್ಪೆಕ್ಷನ್ ಖಗ್ಗೆ ಹಾದರು ಮಾಡುವಿಕ್ಕು ವಿಾಯರು ಅಥವಾ ಪ್ಯುನಿಸಿಪಲ್ ಉದ್ಯೋಗಸ್ಥರು ಅಪೇಕ್ಷಿಸಿದಾಗ ಅಂಥಾ ಲೆಕ್ಕಗಳನ್ನು ಅವರ ಇನ್‌ಸ್ಪೆಕ್ಷನ್ ಬಗ್ಗೆ ಹಾದರು ಮಾಡುವದಕ್ಕೂ ಬದ್ಧರಾಗಿರತಕ್ಕದ್ದು.

೭ ಪ್ರತಿ ಒಬ್ಬ ಕಂಟ್ರಾಕ್ಟ್ಟುದಾರನು ಟೋಲ್ ಗೇಟು ಮುಖಾ ತರ ಖರತಕ್ಕ ಗಾಡಿ ಯಾ ಜಾನವರುಗಳ ತಖೀಲು ಲೆಕ್ಕವನ್ನು ನೆ ಳಲಂಸಲ್ಲಿ ನಮೂದಿಸಿರುವಂತೆ ಇವತಕ್ಕ ಖಗ್ಗೆ ಆಗಾಗ ಕಂಟ್ರಾಕ್ಟ್ಟುದಾರನ ಸ್ವಂತ ಬರಿಸಿನಿಂದ ಕ್ರಿಸ್ತೋದು ಟೋಟ್ ಗೇಟುಗಳ್ಳಿಯೂ ಒಬ್ಬೊಬ್ಬ ಮುಕ್ತಿಯ ನ್ನು ಹಾಡ ವಡಕ್ಕೆ ಖಿನ್ನ ನಾಗಿರತಕ್ಕದ್ದು.

೮ ಸಾಲಿ ಇರುವ ಜೋಲ್ ಗೇಟುಗಳನ್ನಾ ಮತ್ತು ಮನೆ ೪ ನ್ನು ಕಂಟ್ರಾಕ್ಟರೇ ಒಳ್ಳೇ ಸ್ಥಿತಿಯಲ್ಲಿ ಇಟ್ಟುಕೊಂಡು ಅವಗಳ ನ್ನು ಉಪಯೋಗ ಮಾಡಿಕೊಳ್ಳಬಹುದು.

೯ ಈ ಮೇಲ್ಕಂಡ ಷರತ್ತುಗಳಿಗೆ ಒಳಪಟ್ಟ ಕಂಟ್ರಾಕ್ಟ್ಟು ಬಾ ಬನ್ನು ಸಲೀಸು ಸರಿಪಡಿಸಿಕೊಂಡು ಕೌಂತಕ್ಕ ವಿಚಾರದಲ್ಲಿ ಕಂ ಟ್ರಾಕ್ಟ್ಟುದಾರನು ಸೈಡೆಂಟರವರಿಂದ ವಿಧಾಯಕವಾದ ನಮೂನೆ ಯಲ್ಲಿ ಭಾಮಾಕಾಗದಪತ್ರಿಯನ್ನು ರೂಲು ಪ್ರಕಾರ ಮುಚ್ಚಳಿಕೆ ಬರೆಪಾ ಕೊಡಬೇಕು.

೧೦ ಈ ಕೆಳಗೆ ನಮೂದಾಗುವವುಗಳನ್ನು ಲೆಕ್ಕಿಸುವದಿಲ್ಲ ಹೀ ರನು ಟೋಲ್ ಯಾನೆ ಸುಂಕವನ್ನು ವಸೂಲ್ಮಾಡಬಾರದು :—

(೧) ಮ್ಯುನಿಸಿಪಾಲಿಟಿಗೆ ತೆರಿಗೆ ಕಾಂತಿ ಸದರಿ ನಮೂದಾ ಕಿಸಿಕೊಂಡಿರತಕ್ಕ ಗಾಡಿಗಳು ಅಥವಾ ಸ್ಯಾರೇಜುಗಳು, ಮ್ಯುನಿ ಪಾಲಿಟಿಯಿಂದ ಕಾಡಿರತಕ್ಕ ಪ್ಯಾಸುಗಳನ್ನು ಹೊಂದಿರುವ ಗಾಡಿಗಳು, ಅಥವಾ ಜಾನವರುಗಳು ಮತ್ತು ಮ್ಯುನಿಸಿಪಲ್ ಕಮಿಷನರ್‌ಗೆ ಸೇರಿದವುಗಳು ಅಥವಾ ಅವರ ಸಾಗಿಸುವದಕ್ಕಾಗಿ ಮೊಕರ್ರುಮಾಡಲ್ಪಟ್ಟ ಕ್ಯಾರ್ ಜುಗಳು, ಗಾಡಿಗಳು, ಮತ್ತು ಜಾನವರುಗಳ ಸೇರಿ ಪತ್ತು ಒಮ್ಮೆ ದಿನದಲ್ಲಿ ಎರ್ರ ಗಂಟೆ ಕಾಲದ ಒಳಗಾಗಿ ಅಂದರೆ ಒ ಪ್ರ ಮಧ್ಯ ರಾತ್ರಿ ಯಿಂದ ಇನ್ನೊಂದು ಮಧ್ಯರಾತ್ರಿ ವರಿಗೂ ಯಾವ ಕ್ಯಾರೇಜು ಗಾಡಿ ಅಥವಾ ಜಾನವರುಗಳ ಮೇಲೆಯೇ ಆಗಲಿ ಒಂದು ಸಾರಿಗಿಂ ತಲೂ ಹೆಚ್ಚಾಗಿ ಟೋಲ್ ವಸೂಲ್ ಮಾಡಕೂಡದು.

(೨) ಟೋಲ್ ಮುಖಾಂತರ ಖರತಕ್ಕ ಸೈನಿಕರ ವಾಹನಕ್ಕಾ ಗಿ ಅಥವಾ ಅಂಥಾ ಸೈನಿಕರ ಸಾಮಾನು ವಗೈರೆ ಸಾಗಿಸತಕ್ಕ ಖಗ್ಗೆ ಉಪಯೋಗಿಸುವ ಗಾಡಿ ಅಥವಾ ಜಾನವರುಗಳ ಮೇಲೆ ವಿಲಬೆರಿ ಅಥವಾ ಗೌರ್ನಮೆಂಟ್ ಸ್ಟೋರಿಗೆ ಸಾಗಿಸಲ್ಪಡುವ ಸಾಮಾಜಿಗ ಳು ಇರಬೆಕ್ಕ ಗಾಡಿ ಅಥವಾ ಜಾನವರುಗಳ ಮೇಲೆ ಸರ್ಕಾರಿ ಡ್ಯೂಟಿ ನೋಲೆ ಖರತಕ್ಕ ಪೊಲೀಸು ಆಫೀಸರು, ವೆಳಕಮಾನೇರು, ಅವರ ಕ್ಯಾರೇಜುಗಳು, ಗಾಡಿಗಳು, ಮತ್ತು ಜಾನವರುಗಳು, ಇವುಗಳ ಮೇಲೆ ಮತ್ತು ಅರಮನೆ ಇಲಾಖೆಗೆ ಸೇರಿದ ಗಾಡಿ, ಕ್ಯಾರೇಜುಗ ಳು, ಜಾನವರುಗಳು, ಇವುಗಳ ಮೇಲೆ ಸಜಾ.

A. ಉಳ್ಳಡಗಳು.

ನಂ.	ಪೆಷ್ಯೂಲ್ A	
೧	ರೈಲ್ವೆ ಸ್ಟೇಷನ್ ರಸ್ತೆ	ಉಳಗೊಳದ ರಸ್ತೆ ಮತ್ತು ಸಿಕ್‌ಲೈ ರಸ್ತೆ ಇವರ ಡೂ ಜಂಕ್ಷನ್ ಆಗುವ ಸ್ಥಳದಲ್ಲಿ ಇರುವ ಉ ಳ್ಳಡಾ
೨	ಉಳಗೊಳದ ರಸ್ತೆ	ಕೆಂಪಸಳಟ್ಟಿ ಉಳ್ಳಡ
೩	ಶ್ರೀರಂಗಪಟ್ಟಣದ ರಸ್ತೆ	ವಿರಕಳಟ್ಟಿ ಉಳ್ಳಡ
೪	ಬೆಂಗಳೂರು ರಸ್ತೆ	ವೀರನಗೆರೆ ಉಳ್ಳಡ
೫	ಸೆಮೆಟ್ರೀರಿ ರಸ್ತೆ	ಖಂಗ್ಲಿ ಸಂತ್ರಿ ಉಳ್ಳಡ
೬	ಮಹದೇವಪುರದ ರಸ್ತೆ	ಬಿಲಪುರಿ ಉಳ್ಳಡ
೭	ಆಲನಹಳ್ಳಿ ರಸ್ತೆ	ಇಟ್ಟಿಗೆಗೂಡು ಉಳ್ಳಡ
೮	ರೇಸು ಕೋರ್ಸು ರಸ್ತೆ	ರೋಣಸಂತ್ರಿ ಉಳ್ಳಡ
೯	ನಂಜನಗೂಡು ರಸ್ತೆ	ನಂಜನಗೂಡು ಉಳ್ಳಡ
೧೦	ಡಿಪೋ	ಕಾಲಿ ಉಳ್ಳಡದ ಬಳಿ ವಿ ಧ್ಯಾಲಂಕಾರವಾಗಿರುವಂತೆ ನಾಚನಳ್ಳಿ ಉಳ್ಳಡ
೧೧	ಮಾನಂಡವಾಡಿ ರಸ್ತೆ	ಚಟ್ಟನಳ್ಳಿ ಉಳ್ಳಡ
೧೨	ವೈಸರಾಯ್ ರಸ್ತೆ	ಹೊಲಗೇರಿ ಉಳ್ಳಡ
೧೩	ಚಾಮರಾಜ ಅಗ್ರಹಾರದ ಹಿಂದಣ ರಸ್ತೆ	ಡಿಪೊ
೧೪	ಜ್ಯೂಬಿಲಿ ರಸ್ತೆ	ಕ.ಕ್ಕರಹಳ್ಳಿ ಉಳ್ಳಡ
೧೫	ಇಲವಾಲದ ರಸ್ತೆ	ಶ್ರೀರಾಮಪೇಟೆ ಉಳ್ಳಡ

B. ಟೋಲ್ ಗೇಟುಗಳಲ್ಲಿ ವಸೂಲ್ಮಾಡತಕ್ಕ ದರಗಳ ತಖೀಲು.

ನಂ.	ಪೆಷ್ಯೂಲ್ B	ರೂ.	ಆ.	ಪೈ.
೧	ಸ್ಪ್ರಿಂಗ್ ಇರತಕ್ಕ ೨ ಚಕ್ರದ ಪ್ರತಿ ಒಂದು ಗಾಡಿಗೆ	೦	೪	೦
೨	ಡಿಟೊ ೩ ಡಕ್ಕದ ಗಾಡಿಗೆ.	೦	೬	೦
೩	ನನುಷ್ಯರು ಯಾ ಎತ್ತುಗಳು, ಕುದು ರೆಗಳು, ಹೇನಂಕತ್ತೆಗಳು ಇವೆಗಳಿಂದ ಎಳೆಯಲ್ಪಟ್ಟ ಭರ್ತಿಗಾಡಿಗಳು ಅಥವಾ ಕ್ಯಾರ್ಟ್ಸ್ ಗಾಡಿ ೧ ಕ್ಕೆ.	೦	೨	೦
೪	ಡಿಟೊ ಖಾಲಿ ಇರತಕ್ಕ ಗಾಡಿ ೧ಕ್ಕೆ.	೦	೧	೦
೫	ಡಿಟೊ ಹೇರು ಸೇರಿಕೊಂಡು ಖರತಕ್ಕ ಕೋಣ ಯಾನೆ ಎತ್ತು ೧ ಕ್ಕೆ.	೦	೦	೩
೬	ಡಿಟೊ ಸವಾರಿ ಅಥವಾ ಹೇರು ಕೋ ಕೊಂಡು ಖರತಕ್ಕ ೧೩ ಹಿರೀತ ವಿಾ ರಿದ ಕುದುರೆ ೧ ಕ್ಕೆ.	೦	೧	೦
೭	ಹೇರು ಇಲ್ಲದೆ ಅಥವಾ ಸವಾರಿ ಇಲ್ಲದೆ ಖರತಕ್ಕ ಕುದುರೆ ೧ ಕ್ಕೆ.	೦	೦	೩
೮	೧೩ ಹಿಡಿಗಳು ಅಥವಾ ಅದಕ್ಕೀತಕ್ಕ ವಿಷ್ಟಿಯಾಗಿ ಇರತಕ್ಕ ಸವಾರಿ ಅಥವಾ ಹೇರು ಇರುವ ಕುದುರೆ ೧ ಕ್ಕೆ.	೦	೦	೩
೯	ಡಿಟೊ ಆನೆ ೧ ಕ್ಕೆ.	೦	೪	೦
೧೦	ಡಿಟೊ ಒಂಟೆ ೧ ಕ್ಕೆ.	೦	೧	೦

K. SRINIVASA RAO,
For President.

ಮಹಾರಾಜರವರ ಫೋಟೋಗಳು.

ಇವು ವಿಲಾಯತಿಯಿಂದ ಬಂದಿವೆ. ಮುಗಿದುಹೋದಾವು! ಬಾಗ್ಯತೆ ನೋಡಿ! ಬಹಳ ಸೊಗಸಾಗಿವೆ, ದೊಡ್ಡ ಸೈಜಿನವು, ಕೆಡಕಲ್ಲ ಪೊಗಳ್ಳು. ಕೈಯ ಎರಡೇ ಆಣೆ. ಚಳ್ಳಕೆರ್ತಿಯವರ ಬುತ್ತು ಚಳ್ಳಕರ್ತಿನಿಯವರ ತಸ್ವೀರುಗಳು; ಸುಂದರವಾದ ಬಣ್ಣಗಳುಳ್ಳದ್ದು ಕೈಯ ದೊಡ್ಡ ಸೈಜಿನವು ೪ ಆಣೆ; ಸಣ್ಣ ಸೈಜಿನವು ೩ ಆಣೆ.

ಪಜ್ಯನೇದರ್, ಸಿ. ಎಲ್.ಎಸ್, ಬುಕ್ ಡಿಪೋ, ಮೈಸೂರು.

ಯೆನ್. ಆರ್. ವೆಂಕಟಸುಬ್ಬಾ ಚಾರ್ಯರ ಲೋವರ್ ಸೆಕೆಂಡರಿ ನೋಟ್ಸು.

2

ವಿದ್ಯಾರ್ಥಿಗಳು ಅವಶ್ಯವಾಗಿ ನೋಡಿರಿ.

೧೯೦೪ ನೇ ಪರ್ಷದ ಕನ್ನಡ ಗದ್ಯಪದ್ಯ ಕಾವ್ಯಗಳ ಈ ನೋಟ್ಸು ಬಹಳವಾಗಿ ಬೆಳೆಯಿಸಲಾಗುತ್ತಿವೆ. ಪರೀಕ್ಷೆಯಲ್ಲಿ ಪ್ರಯಾಸಾಗ ಬೇಕಾದರೆ ಪ್ರಶ್ನೋತ್ತರ ಸಹಿತವಾದ ಈ ನೋಟ್ಸು ಆವಶ್ಯಕವೆಂ ಬುದನ್ನು ನಾವು ಹೊಸದಾಗಿ ಸೂಚಿಸಬೇಕಾದ್ದಿಲ್ಲ. ಕೈಯ ೪ ಆಣೆ, ವಿ ಮಿಹುಹೋದಾವು, ಬೇಗನೆ ತರಿಸಿಕೊಳ್ಳಿರಿ.

ಮೈಸೂರು ಸಂಸ್ಥಾನದ ಭೂವಿವರಣೆ ೦—೦—೦
ಮೈಸೂರು ಮಹರಾಸು ಪೊಡಲಾದ್ದು ೦—೦—೬
ಎರಡು ತರಗತಿಯ ಪದ್ಯಸಂಗ್ರಹದ ನೋಟ್ಸು ೦—೦—೬
ಗಣಿತಸಂಜೀವಿನಿ ೦—೪—೦

ಪುಸ್ತಕಗಳಿಗೆ ತಿಪ್ಪ್ಟೂಟು ೦೦ಕ್ಕೆ ೧, ರೂ. ೫೦ಕ್ಕೆ ೭, ೧೦೦ಕ್ಕೆ ೧೦. ವಿಳಾಸಗಳು:—ಕೆ ಸುಬ್ರಾವ್, ೧೨೭—೧೯—೨೪ ಕೃಷ್ಣವಿಲಾಸ ಮೈಸೂರು, ಮೈಸೂರು ಗ್ರಾದ್ಯುಯೇಟ್ಸ್ ಸ್ಟೋರ್ಸು, ಮೈಸೂರು ಸ್ಟಿ. ಎಲ್. ಎಸ್. ಬುಕ್ ಡಿಪೋ; ಮೈಸೂರು ಗ್ರಂಥಶಾಲೆ, ನ್ಯೂಸಂಠರು ಕೆ. ಪರಸಿಂಹಯ್ಯ ಅಂಡ್ ಕೋ, ಬೆಂಗಳೂರು ಪೇಟೆ ಜಿ. ಗಣಪ್ಪ ಅಂಡ್ ಕೋ.

ವೃತ್ತಾಂತ ಪತ್ರಿಕೆ.

:೦:

ಸರ ೧೯೦೪ ನೇ ಇಸವಿ ಮೇ ತಾ ೨ ನೇ ಗುರುವಾರ.

ಕರ್ಜನ್ ಪ್ರಭುಗಳು ತೆಗೆದುಕೊಂಡಿರುವ ರಜಾ.

ಇನ್ನು ವರೆಗೂ ಇಂಡಿಯಾ ವೈಸ್ರಾಯಾಗಿ ರಾಜ್ಯ ಭಾರವನ್ನು ನಡಸಿದ ಕರ್ಜನ್ ಪ್ರಭುಗಳವರು ಸ್ವಲ್ಪಕಾಲದವರಿಗೂ ವಿಲಾಯತಿಯಲ್ಲಿ ವಿಂಠಾನುಸುಖವನ್ನು ಪಡೆಯುವದಕ್ಕಾಗಿ ಹೊರಟುಹೋಗುವ ವಿಷಯವನ್ನು ನಾವು ಕಳದ ವಾರ ಸಂಕ್ಷೇಪವಾಗಿ ಸೂಚಿಸಿದೆವಷ್ಟೆ. ಇವರು ಕಳದ ಏಪ್ರಿಲ್ ೩೦ ರಲ್ಲಿ ಜೊಂಬಾಯಿನಗರದಲ್ಲಿ ಇಪ್ಪಜು ಹತ್ತಿ ಇಂಗ್ಲಾಂಡನ್ನು ಕುರಿತು ಪ್ರಯಾಣ ಬೆಳಸಿದರು. ಮಹಾ ಸಮರ್ಥರಾದ ಈ ಪ್ರಭುಗಳು ನಮ್ಮ ಈ ದೇವತೆಕ್ಕೆ ಮುಂತಿರುವ ಹಿತವನ್ನು ಪುನರ್ವಿಮರ್ಶಿಸುವುದಕ್ಕೂ, ಪ್ರಭುಗಳವರಿಗೆ ಸುರಕ್ಷಿತವಾದ ಪ್ರಯಾಣವೂ, ಸ್ವದೇಶದಲ್ಲಿ ಸುಖಕರವಾದ ವಿರಾಮವೂ ಉಂಟಾಗಲೆಂದು ಬಯಸುವುದಕ್ಕೂ ಇದು ಅತ್ಯಂತ ಯೋಗ್ಯವಾದ ಸಂದರ್ಭವಾಗಿದೆಯೆನ್ನುವುದರಲ್ಲಿ ಸಂಶಯವಿಲ್ಲ.

ಚಕ್ರವರ್ತಿ ಸಾರ್ವಭೌಮರ ಪ್ರತಿನಿಧಿಯಾಗಿ ಈ ಹಿಂದೂ ದೇಶದಲ್ಲಿ ಐದು ವರ್ಷಗಳಿಗಿಂತ ಹೆಚ್ಚು ಕಾಲ ವೈಸ್ರಾಯಿ ಪದವನ್ನು ವಹಿಸುವದು ವಾಡಿಕೆಯಾಗಿಲ್ಲವಷ್ಟೆ. ಕರ್ಜನ್ ಪ್ರಭುಗಳವರೋ ಈಗಲೇ ಆ ಕಾಲವನ್ನತಿಕ್ರಮಿಸಿ ಆಳರುವರು. ಆವರು ಈಗ ತೆಗೆದುಕೊಂಡಿರುವ ರಜವಾದರೋ ವಿರಾಮಸುಖವನ್ನೂ ರಕ್ತಿವರ್ಧನಯನ್ನೂ ಪಡೆದ ಮೇಲೆ ಪುನಃ ಈ ದೇಶಕ್ಕೆ ಮಯಮಾಡಿಸಿ ಇಮ್ಮಡಿಯಾದ ಆಸಕ್ತಿಯೊಡನೆ ಮತ್ತೆ ಕೆಲವು ವರ್ಷಗಳು ರಾಜ್ಯವಾಳ ಪ್ರಜೆಗಳಿಗೆ ಅಪೂರ್ವವಾದ ಹಿತವನ್ನಾರ್ಜಿಸಿಕೊಡುವುದಕ್ಕೆ ಸಂಪೂರ್ಣ ಅವಕಾಶಪ್ರದವಾದುದೆಂದು ಹೇಳಬೇಕಾ.

ಶ್ರೀಮಂತರು ತಮ್ಮ ಆಳಕೆಯಲ್ಲಿ ಕೈಗೊಂಡ ಕಾರ್ಯಗಳು ಅನೇಕವಾಗಿಯೂ ರಾಜ್ಯನೀತಿಗೂ ರಾಜ್ಯ ಭಾರನಿರ್ವಾಹಕ್ಕೂ ಸಂಬಂಧಪಟ್ಟವುಗಳಾಗಿಯೂ ಇವೆ. ಕ್ಷಾಮನಿವಾರಣಾರ್ಥವೂ, ಪ್ಲೇಗು ರೋಗ ಪರಿಹಾರಾರ್ಥವೂ, ದೇಶಸಂರಕ್ಷಣೆಗಾಗಿ ಪರದೇಶೀಯರಲ್ಲಿ ನಡಸಬೇಕಾದ ರಾಜ್ಯತಂತ್ರಾರ್ಥವೂ ಇವರು ಮಾಡಿರುವ ವಿಚಾರಾಡುಗಳು ಕ್ಲಿಷ್ಟವಾಗಿವೆ. ಇಂಗ್ಲಿಷ್ ಸೈನಿಕರು ಈ ದೇಶೀಯರನ್ನು ಕಾಡಿಸಿದ ವೇಳಗಳಲ್ಲಿ ಇವರು ಪ್ರಕಟಿಸಿದ ಧರ್ಮೈಕಪಕ್ಷಪಾತತೆಯು ನಮ್ಮವರ ಕೃತಜ್ಞತೆಯನ್ನು ಬ್ರಿಟಿಷ ರಾಜ್ಯಭಾರದಲ್ಲಿ ಚಿರಸ್ಥಾಯಿಯಾಗ ಮಾಡಿತು. ಸಾಲಸೋಲದಲ್ಲಿ ವಿದ್ಧರೈತರ ಕಷ್ಟನಿವಾರಣೆಯುಂಟಾಗಿ ವ್ಯವಸಾಯಾಭಿವೃದ್ಧಿಯಾಗುವಂತೆ ಮಾಡಿನ ವಿಚಾರಾಡುಗಳೂ, ಪುರಾತನ ನಾಗರಿಕತೆಗೆ ಸಾಕ್ಷಿಗಳಾಗಿರುವ ಶಿಲಾಶಾಸನಾದಿ ಪ್ರಸಿದ್ಧವಾದ ಕಟ್ಟಣಗಳನ್ನು ಸಂರಕ್ಷಿತಪಡಿಸುವಂತೆ ವಿಧಿಸಿರುವ ಕಟ್ಟಳೆಗಳೂ, ಪ್ರೌಢವಿದ್ಯಾಭ್ಯಾಸಕ್ಕೂ ಈ ದೇಶಿಯರ ಸ್ವಾತ್ಯಕ್ಕೂ, ಆಗರ್ಭಶ್ರೀಮಂತರಾದವರು ಬ್ರಿಟಿಷ ಸಾಮ್ರಾಜ್ಯದಲ್ಲಿ ಅಂದರೆ ಜನಾಂಗದ ಸೌಕರ್ಯದಲ್ಲಿ ಉಪಯುಕ್ತರಾಗುವುದಕ್ಕೂ ಮಾಡಿಸಿಕೊಟ್ಟಿರುವ ಅನುಕೂಲಗಳೂ ಚಿರಸ್ಮರಣೀಯಗಳೆಂದು ಬೇಳಬೇಕಾಮದಿಲ್ಲ. ರಿಪೋರ್ಟುಗಳನ್ನು ಬರೆಯುವ ಅಥವಾ ಇತರವಾದ ಬರವಣಿಗೆಯ ಕೆಲಸಮಾಡುವ ಜನರಿಗೆ ಇರುವ ಪ್ರತಿಬಂಧಗಳನ್ನು ನಿವಾರಣೆ ಮಾಡುವ್ರದರಲ್ಲಿಯೂ ರೈಲ್ವೆ ಬಂಡಿಗಳಲ್ಲಿ ಪ್ರಯಾಣಮಾಡುವವರಿಗೆ ಉಂಟಾಗುವ ಸಂಕಟಿಗಳನ್ನು ಪರಿಹರಿಸಿ ಸೌಖ್ಯವನ್ನು ಪೆಚ್ಚಿಸುವುದರಲ್ಲಿಯೂ ಬೇಸೊಪ್ಪು ಜೆಳವರಿಗೂ ಸಕ್ಕರೆ ಕಾರ್ಖಾನೆಯವರಿಗೂ ಸೌಲಭ್ಯಗಳನ್ನು ಕಲ್ಪಿಸಿಕೊಡುವುದರಲ್ಲಂಪೂ ಅವರು ಆಸಕ್ತರಾಗಿದ್ದುದು ಸಮಸ್ತ ಪ್ರಜೆಗಳ ಅನುರಾಗವನ್ನಾ ಕ್ರಯಿಸುವಂತೆ ಮಾಡಿದೆಯಷ್ಟೆ. ರಾಜಾವೆಯ ವಿಷಯದಲ್ಲಿ ವಿಧಿಸಿರುವ ಬಡ್ಜೆಟ್, ಸರ್ಕಾರದವರ ಸೋಪ್ಯವನ್ನು ಕಾಪಾಡುವದಕ್ಕೆ ಮಾಡಿರುವ ವಿಧಾಯಕವೂ, ತೆರಿಗೆಯನ್ನು ಕಡಮೆಮಾಡಿರುವ ಉದಾರಭಾವವೂ ರಫ್ಯಾಪ್ಯವರ ಕಪಟೋಪಾಯಗಳನ್ನು ಛೇದಿಸುವುದಕ್ಕೆ ಪ್ರತೀಕಾರವಾಗಿ ನಡಸಿರುವ ರಾಜತಂತ್ರವೂ ಕರ್ಜನ್ ಪ್ರಭುವಿನ ಬ್ಯಾತಿಯನ್ನು ಲೋಕವಿಸ್ತುತವಾಗಿ ಮಾಡತಕ್ಕುವು ಇಷ್ಟು ವಿಶೇಷ ಕಾರ್ಯಗಳನ್ನೆಲ್ಲಾ ಈ ವೈಸ್ರಾಯರು ಐದು ವರ್ಷಗಳೆಂಬ ಸ್ವಲ್ಪಕಾಲದಲ್ಲೇ ನೆರವೇರಿಸಿರುವುದನ್ನು ನೋಡುವಲ್ಲಿ ಈ ಪುರುಷನಿಂದ ಕಾರ್ಯಸಾಧನಾ ವಿಷಯವು ಆನ್ಯಾಪ್ಯಕವಾಗಿ ಪರಿಣಮಿಸಿದೆಯೆಂದು ಆಶ್ಚರ್ಯಪಡದವರಿಲ್ಲ. ಆದುದರಿಂದಲೇ ಸಾರ್ವಭೌಮಚಕ್ರವರ್ತಿಗಳು ಸಹಾ ಇವರ ಆಳ್ಕೆಯ ವಿಷಯದಲ್ಲಿ ಅತ್ಯಂತ ಸಂತೋಷಪಟ್ಟು ಅಪಾರವಾಗಿ ಹೊಗಳ್ದಾರೆ. ಸಿಂಹಾಸನಾರೂಢರಾದ ರಾಜರು ಪೌತ್ರನಲ್ಲಾ ವೈಸ್ರಾಯಿಯವರ ರಾಜ್ಯದ ನೆರಳನಲ್ಲಿ ಸುಖಿಸುವ ಬಡವರಾದ ಪ್ರಜೆಗಳು ಸಹಾ ವಿಕವಾಕ್ಯತೆಯಿಂದ ಅವರ ಆಳ್ಕೆಯು ಪುಷ್ಕತ್ವವನ್ನು ಉದ್ಘೋಷಿಸುವವರಾಗಿದ್ದಾರೆ. ದೇಶಪ್ರಾ ಚತುರ್ದಿಕ್ಕುಗಳಲ್ಲಿ ತನ್ನ ಸಂಧ್ಯಾನುರಂಜಿತೊಡಗೂಡಿನ ಕೃತಜ್ಞತೆಯನ್ನು ಪ್ರಕಾಶಪಡಿಸುತ್ತಿದೆಯೋ ಎಂಬುವಂತೆ ಕೇವಲ ರಾಮಣೀಯತೆಯನ್ನು ಹೊದ್ದಿದೆ.

ಇಂಥ ಸುಸಂಭ್ರಮಸಮಯದಲ್ಲಿ ಇಂಡಿಯಾ ದೇವತೆಯನ್ನು ವೈಸ್ರಾಯಿ ಕರ್ಜನ್ ಪ್ರಭುಗಳು ಬಿಟ್ಟು ತೆರಳುವಲ್ಲಿ—"ಹೋಗಿಬಿಡುತ್ತೇನೆ" ಎಂದೆನ್ನದೆ, ನಮ್ಮ ದೇಶೀಯರಲ್ಲಿ ವಾಡಿಕೆಯಾಗಿರುವಂತೆ "ಹೋಗಿ ಬರುತ್ತೇವೆ" ಎಂದು ಹೇಳಿರುವುದು ಅತ್ಯಂತ ಸಂತೋಷಕರವಾದ ಪುನರಾವರ್ತನೆಯಾಗಿದೆ ಅವರು ಹಿಂತಿರುಗಿ ಬಿಜಯಂಗೈಸಿ ದಾಗ್ಯೆ ಈ ದೇಶೀಯರಾದ ನಾವೆಲ್ಲರೂ ಅತ್ಯಂತ ಸಂಭ್ರಮದಿಂದ ಬರಮಾಡಿಕೊಳ್ಳುವೆವೆಂಬುದರಲ್ಲಿ ಸಂಶಯವುಂಟೇ?

ದುಷ್ಟರಾದವರ ಎದೆಯಲ್ಲಿ ಮಹಾ ಭಯವನ್ನೂ ಶಿಷ್ಟರಾದವರ ಮನಸ್ಸಿನಲ್ಲಿ ಕೇವಲ ಸಂತೋಷವನ್ನೂ ಉತ್ಪನ್ನ ಮಾಡತಕ್ಕ ಪ್ರಭುವೇ ನಮ್ಮ ಈ ಇಂಡಿಯಾ ದೇಶಕ್ಕೆ ಇವಶ್ಯ ಇಂಥ ಪ್ರಭುವಿಗೆ ಅನ್ಯಾದೃಶವಾದ ಸೈರ್ಯವು ಜೇಕಾಗಿದೆ ಕರ್ಜನ್ ಪ್ರಭುಗಳಾವರೋ ಈ ಭಾಗದಲ್ಲಿ ಕೇವಲ ಸಮಾರ್ಹಕವಾದ ಯೋಗ್ಯತೆಯನ್ನು ಹೊಂದಿದವರಾಗಿದ್ದಾರೆಂದು ನಾವು ಅಭಿಪ್ರಾಯಪಡುತ್ತೇವೆ. ಅನ್ಯದೇಶೀಯರಾದ ಯೂರೋಪಿಯನರು ದೇಶೀಯರಾಪ ಜಡವರ ವಿಷಯದಲ್ಲಿ ನೀತಿ ನ್ಯಾಯುಗಳನ್ನೂ ಭೂತದಯೆಯನ್ನೂ ನಿರಾಕರಿಸಿ ಹಿಂಸೆಪಡಿಸಿ ವೈಸ್ರಾಯರ ಅಧಿಕಾರ ಪ್ರವರ್ತನಕ್ಕೆ ಅವಕಾಶ ಕೊಡಲಾಗಿ ಆ ಅನ್ಯದೇಶೀಯರು ಪ್ರಭುಗಳವರನ್ನು ಹೀಯಾಳಿಸುವುದಕ್ಕೆ ಕಾರಣವಾಯಿತು. ಪರಂತು ಈ ದೇಶೀಯುಪಾದವರು ಚಕ್ರಾಧಿಪತ್ಯಕ್ಕೆ ಚ್ಯುತಿಯುಂಟಾಗುವುದಕ್ಕೆ ಹೇತುವಾಗಬಹುದಾದ ರೀಯಾಯತಿಡಿಗಳನ್ನು ಕೇಳಲು ಅಂಥ ಬಿನ್ನಪಗಳಿಗೆ ವೈಸ್ರಾಯಿಯವರು ಕಿವಿಗೊಡದೆ ಹೋಗಲಾಗಿ ಈ ದೇಶೀಯರು ಭಗ್ನಮನೋರಥರಾಗಿ ತನ್ಮ ಮನ ದನಿಯು ಪಂತೆ ವಾದಾನುಗೋಚರವಾಗಿ ಸಮಸ್ತಜನಾವಗಳನ್ನು ನೀಳ ನಿಂದಿಸಿಯೂ ಇದ್ದಾರೆ. ಒಂದು ಪಕ್ಷದಲ್ಲಿ ತಾನಾಳುವ ರಾಜ್ಯದ ಪ್ರಜೆಗಳಗೂ, ಮತ್ತೊಂದು ಪಕ್ಷದಲ್ಲಿ ತಾನು ಪ್ರತಿನಿಧಿಯಾಗಿರುವ ಸಾರ್ವಭೌಮತ್ವಕ್ಕೂ ಧರ್ಮಚ್ಯುತಿಯಾಗದಂತೆ ಪ್ರಭುವಾದವನು ನೀತಿಪಕ್ಷವಾಗಿ ನಿಲ್ಲತಕ್ಕ ಕರ್ತವ್ಯವನ್ನು ಹಿಡಿದಿದ್ದಾನಷ್ಟೆ. ಈ ವಿಷಯದಲ್ಲಿಯೂ ಕರ್ಜನ್ ಪ್ರಭುವು ಯಾವ ಆಕ್ಷೇಪಣೆಗೂ ಬಳಪಡ್ಬಲ್ಲನೆಂದು ದೃಢವಾಗಿ ಬೇಳಬಲ್ಲೆವು.

ಈ ಪ್ರಕಾರ ವೈಸ್ರಾಯರವರು ಸಮಸ್ತರ ಅನುರಾಗವನ್ನೇ ಆರ್ಜಿಸಿಕೊಂಡವರಾಗಿರಬೇಕೆಂದು ಊಹಿಸುವ ವಕ್ಕೆ ಅಸ್ಪದವಿದ್ದರೂ ಸಕಲರನ್ನೂ ಮೆಚ್ಚಿಸತಕ್ಕ ಮಹಾಪುರುಷನು ಬಬ್ಬನೂ ಇಲ್ಲವೆಂಬ ನಾನ್ನುಡಿಯು ಕರ್ಜನ್ ಪ್ರಭುವಿನ ವಿಷಯದಲ್ಲಿಯೂ ಪರ್ತಿಸತಕ್ಕದ್ದಾಗಿದೆ. ಪತ್ರಿಕಾಕರ್ತರು ತಮ್ಮದಾಗಿರುವ ಲೇಖನಿ ಸ್ವಾತಂತ್ರ್ಯದ ಮರೆಯಲ್ಲಿದ್ದುಕೊಂಡು ಕರ್ಜನ್‌ರವರ ಮೇಲೆ ಮನಃಕ್ಲೇತನೆಂಬ ವಿಷದಿಂದ ಕೂಡಿದ ವಾಗ್ಬಾಣಗಳನ್ನು ಕರೆರು ಗಾಯಮಾಡಿರುವರು ಆವಕಾರಣ ಶ್ರೀಮಂತರು ತನು ಮನಗಳಲ್ಲಿ ಗಾಯಪಟ್ಟವರಾಗಿ ಈ ದೇಶದ ತೀರವನ್ನು ಬಿಟ್ಟು ತೆರಳಿರಬಹುದು. ತಮ್ಮ ಸದುದ್ದೇಶಗಳಲ್ಲಿ ದೌಷ್ಟ್ಯವನ್ನು ಕಲ್ಪಿಸಿ ತಮ್ಮ ರಾಜನೀತಿಯಲ್ಲಿ ವೈಪರೀತ್ಯವನ್ನು ಸೃಷ್ಟಿಸಿದ ಈ ದೇಶೀಯರ ಕಾರ್ಪಣ್ಯದಿಂದ ಅವರ ಮನಸ್ಸು ನೊಂದರೂ, ತಮಗೊದಗಿದ ಸಕಲ ಸಂದರ್ಭಗಳಲ್ಲಿ ತಮಗೆ ಸಾರ್ವಭೌಮರಿಂದಲೂ ಸ್ವದೇಶೀಯರಿಂದಲೂ ಭಗವಂತನಿಂದಲೂ ಬಿಟ್ಟಿಸಲ್ಪಟ್ಟ ನೀತಿಪಥವನ್ನು ಬಿಟ್ಟುಬೇರೆಮಾತ್ರವೂ ತೊಲಗಿರಿಲ್ಲವೆಂಬ ತಿಳುವಳಿಕೆಯಲ್ಲಿ ತೃಪ್ತಿಯನ್ನೂ ಮನಸ್ಸಂತೋಷವನ್ನೂ ಪಡೆಯುತ್ತ ಬಂದಿರುವರು. ಇಂಥ ಮನಸ್ವಿಯರಾದ ಪ್ರಭುಗಳನ್ನು ಭಗವಂತನು ಪ್ರಸನ್ನ ನಮ್ಮ ದೇಶದ ಹಿತಕ್ಕಾಗಿ ಕರತರಲೆಂದು ಪ್ರಾರ್ಥಿಸುವೆವು.

ಚೇಂಬರ್ಲಿನ್ ಯವರು ಮಾಡಿದ ನೋವುಹರ ಔಷಧವು.

16

ಈ ಔಷಧವು ಪ್ರತಿ ಮನೆಯವರಿಗೂ ಆಗಾಗ್ಯೆ ಬೇಕಾಗುತ್ತದೇ ಇರುವಷ್ಟು. ಇದು ಎಲ್ಲಾ ವಿಷಯಗಳಿಗೂ ತುಂಬಾ ಅನುಕೂಲವಾಗಬಹುದು. ಶರೀರಕ್ಕೆ ಮೂಗು ಏಟು ಬಿದ್ದರೂ ಚೂರಿಯಿಂದ ಗಾಯವಾದಾಗಲೂ ಕೊಡಲೇ ಅಂಥಾ ಜಾಗೆಗೆ ಈ ಔಷಧವನ್ನು ಹಚ್ಚಿದರೆ ತಕ್ಷಣ ಗುಣ ಕೊಡುವದು. ನುಚ್ಚು ತಲೆನೋವು, ಹಲ್ಲುನೋವು, ಮುಖನೋವು ಇದನ್ನು ಹಚ್ಚುವದರಿಂದ ವಾಸಿಯಾಗುತ್ತೆ. ಈ ಔಷಧವನ್ನು ಹಾಕಿ ಉಚ್ಚಿಕರೆ ಬೆನ್ನುನೋವು, ಪಕ್ಕನೋವು, ಎದೆನೋವು ನಿವಾರಣೆಯಾಗುವದು. ಇದರಿಂದ ವಾಯುನೋವು ಚಮ್ಮಾಗಿ ಬಿಟ್ಟುಹೋಗುವದು. ಆದಕಾರಣ ಪ್ರತಿ ಮನೆಯವರೂ ಚೇಂಬರ್ಲಿನ್ ನೋವುಹರನೆಂಬೀ ಔಷಧವು ಒಂದು ಬಾಟ್ಲಿಯನ್ನು ಅಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು. ಒಂದಾವರ್ತಿ ಹಚ್ಚುವದರಿಂದಲೇ ಬಹಳ ಗುಣ ಕೊಡುತ್ತದೆ. ಇದನ್ನು ಯಾರೂ ಮರೆಯಬಾರದು. ಕೈಯ ಬಾಟ್ಲಿ ೧ಕ್ಕೆ ೦ ರೂ. ; ೨ ರೂ. ಮೈಸೂರು ಮತ್ತು ಬೆಂಗಳೂರುಗಳಲ್ಲಿ ಔಷಧ ದೊರತಕ್ಕವರೆಲ್ಲೆಲ್ಲಾ ಈ ಔಷಧ ಸಿಕ್ಕುವದು. ಕಾಗದ ಬರೆಯುವವರು ಸಂಗತಿಗಳನ್ನೂ ತಮ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇದಲ್ಲದೆ ಕೆಳಗಿಷ್ಟ ವಿಳಾಸದಾರರಲ್ಲಿ ಸಿಕ್ಕುವದು.—

ಡಬ್ಲ್ಯೂ. ಇ. ಸ್ಮಿತ್ ಅಂಡ್‌ಕಂಪೆನಿ,
ಮುವುಂಟ್ ರೋಡ್,
ಮದರಾಸ್.

ಒಳದೇಶದ ವೃತ್ತಾಂತಗಳು.

ಬೆಂಗಳೂರು ಪಟ್ಟಣದಲ್ಲಿ ಕೆಲವರು ಬೋಟೂ ನಾಣ್ಯಗಳನ್ನು ಮಾಡುತ್ತಾ ಅವುಗಳನ್ನು ಚಲಾವಣೆಗೆ ತರುತ್ತಿರುವರೆಂತಾಗಿಯೂ ಪೋಲೀಸಿನವರು ಆಸಾಮಿಗಳನ್ನು ಪತ್ತೆ ಮಾಡುತ್ತಿರುವರೆಂತಾಗಿಯೂ ಗೊತ್ತಾಗಿದೆ.

ಮುದರಾಯಿ ಸೆಕ್ರೆಟರಿಗಳಾದ ಮೆ॥ ಶಾಮರಾಯರು ಕಳೆದ ಗುರುವಾರ ಗಾಜಿಪಠಾನಿಗೆ ದಯಮಾಡಿದರು.

****

ಗದಗ್ಗಿನ ಮೆಂಟಿನವರು ಚಿಕ್ಕಮಗಳೂರಿನಲ್ಲಿ ನೇಟಿವ್ ವೈದ್ಯ ಶಾಲೆಯನ್ನು ಸ್ಥಾಪಿಸುವದಕ್ಕಾಗಿ ಮೊದಿಯಾಗಿ ೫೦೦ ರೂಪಾಯಿ ಗಳನ್ನು ಮುಂಬಾಯ್ಮಾಡಿರುತ್ತಾರೆ.

****

ಎರಡನೇ ಕೌನ್ಸಿಲರ್ ರಾ॥ ಬಿ॥ ಸಿ. ಮಾದಯ್ಯನವರಿಗೆ ದೀಪದ ಕೃಪೆಯು ಸುಮರ್ಜಕವಾಗಿ ಪುನಃ ಕೆಲಸಕ್ಕೆ ಬರುವವರಾಗಿದ್ದಾ ರೆಂಬ ಕೇಳಲು ಸಂತೋಷಪಡುತ್ತೇವೆ.

****

ಕ್ರೈಂಗಸ್ಟ್ಯಾದಲ್ಲಿ ಒಬ್ಬ ಪ್ಲೀಡರವರ ಮನೆಗೆ ಕೆಲವು ಸುಖವಸ್ತುಗಳನ್ನು ಬಹಳವಾಗಿ ಹೊಡೆದು ಗಾಯ ಮಾಡಿದರೆಂಬ, ಇವ ರಿಂದು ಬೂನಿ ಪೊಳದ್ದ ಮೆಯಲ್ಲಿ ವಕೀಲತ್ತು ನಪಸಿದ್ದರಿಂದಲೇ ಇವ್ಯಕ್ಕೆ ಗುರಿಯಾದರೆಂದೂ ತಿಳಿಯ ಬರುತ್ತದೆ.

****

ಕ್ರೈಸ್ತ ಯುವರಾಜನನ್ನು ರಾಜಧಾನಿಗೆ ಬರಮಾಡಿಕೊಳ್ಳುವ ಕಾಲದಲ್ಲಿ ಜಾಕಿದ ಚಪ್ಪರಗಳಲ್ಲಿ ಹಸಲುಮಾಳೆಯ ಚಪ್ಪರವು ಅತಿ ವಿಶೇಷವಾಗಿದ್ದಿತಷ್ಟೆ. ಇದನ್ನು ಹೊಲಗೇರಿಯವರು ಸ್ವಾಧೀನ ಮಾಡಿ ರಾಜಭಕ್ತಿ ವಿಶ್ವಾಸಗಳಿಂದ ಪ್ರೇರಿತರಾಗಿ ನಿರ್ಮಿಸಿದರು.

****

ಕವಿಲೊಗ್ಗದಲ್ಲಿರುವ ಲೈಲ್ಸ್ ಸ್ಟೇಷನು ವರ್ತಕರನ್ನು ಜೆಟ್ಟಿಸು ತ್ತಿರುವ ಬಗ್ಗೆ ಕಾ ಇನ್ಸ್ಪೆಕ್ಟರ ಗ್ರಾಮಾಡಳಿಯಲ್ಲಿ ಸುದ್ದಿ ಎಳೆದ ಜಮಾನನ್ನು ಉಪಯೋಗಕ್ಕೆ ತೆಗೆದು ಲೈಳ್ಳ ಮತೆ ಡಿಸ್ಪ್ರಿಕ್ಟ್ ಆಫೀಸರವರಿಗೆ ಹುಕುಮು ಕೊಟ್ಟಿದೆ.

****

ಕವಿಕೆರೆಯ ಬಳಿಯಲ್ಲಿರುವ ಕಾಫೀ ತೋಟಗಳಲ್ಲಿ ಸ್ಟೈಗ್ ಸ್ಟೋಗನ್ ತರೆ ಸಾಕಿದೆಯೆಂತಲೂ, ಡೇರ್ಕಾ ಎಸ್ಟೇಟಿನಲ್ಲಿ ಇಬ್ಬ ಸತ್ತರೇತಲೂ ಗೊತ್ತಾಗಿದೆ. ಈ ರೀಯವರು ಸಾಸಿಸುವ ಗಾಡ ಸುಗಳಿಗೆ ಲ್ಲಾ ಸುಟ್ಟುಸೊಕಿ ರೋಗವು ಹರಡದಹಾಗೆ ಮಾಡಬೇಕು

****

ಬೆಂಗಳೂರಿನಲ್ಲಿ ವೈದ್ಯಸಾಯ ವಿಷಯದಲ್ಲಿ ಪರೀಕ್ಷೋಧನೆ ಮಾ ಡುವದಕ್ಕಾಗಿ ವಿದ್ಯಾರ್ಥಿಗಳಿರುವ ಆಲಯದಲ್ಲಿ ಅವಶ್ಯವಾಗಿರುವ ಕೆಲ ವೈದ್ಯವಿಸವಾದ ಉಪಕರಣಗಳನ್ನು ಕೊಂಡುಕೊಳ್ಳುವದಕ್ಕಾಗಿ ಸರಕಾರದವರು ೧೯೦೪—೦೫ನೇ ಸರ್ವಸ್ಕೆ ರೂ ೫,೦೦೦ ಸ್ಯಾಂ ಕ್ಷನ್ ಮಾಡಿದ್ದಾರೆ.

****

ಬೆಂಗಳೂರು ತಾ ಪೆಬ್ಬಾಗಿನ ಬಳಿಯಲ್ಲಿ ಗವರ್ನಮೆಂಟಿನವ ಪ್ರಯೋಜನಾರ್ಥವಾಗಿ ಒಂದು ಹಮಿನಾ ವ್ಯವಸಾಯ ಮಾಡಿಸುವದಕ್ಕೆ ಸ್ಕೌಟ್ಸರ ಕೆಲವರ ಕೊಲ ಗದ್ದೆ ಬಾಗಾಯಿತು ಜಮಿನಾಗಳನ್ನು ಸರ್ಕಾರದ ಉಪಯೋಗಕ್ಕಾಗಿ ತೆಗೆದುಕೊಳ್ಳುವಂತೆ ಡಿ ಜೆ ಕಾಯಿ ದನವರಿಗೆ ಹುಕುಮು ಕೊಟ್ಟಿದಾರೆ.

****

ರಾಜಧಾನಿಯ ಪುರಾಭಿವೃದ್ಧಿಯ ಟ್ರೋರ್ಡಿನವರಿಗೆ ಸಬ್ ಡಿವಿ ಡಿ ಆಫೀಸರುಗಳು ಬೇಕಾಗಿರುವ ವಿಷಯದಲ್ಲಿ ಜಂಟಿ ಮೆಜಿಸ್ಟ್ರೇಟು ಮಿಸ್ಟರ್ ಪಾಲಿಟ್ಟುಯಲ್ಲಿ ಕೆಲಸ ನೋಡಿಕೊಳ್ಳುವ ಸಿ ಸಿ ಎಸ್. ಶ್ರೇಣಿಯ ಮಿ ಅಯ್ಯಂಗಾರವರನ್ನು ೧೦೦೦ ರೂ ತಲಾಸಿನ ಮೇಲೆ ನೆಮಿಸಿಕೊಳ್ಳಲು ಸ್ಟೇಟ್ ಸೆಕ್ರೆಟರಿಯವರು ಒಪ್ಪಿದಾರೆ

****

ಜೈಪೂರು ಮಹಾರಾಜ ಮೇಜರ್ ಜನರಲ್ ಸವಾಯಿ ಮಾನಸಿಂಗ ಬಹದ್ದೂರರು ಸಪತ್ನಿಕರಾಗಿ ಈಸಲ ಬೆಟ್ಟಕ್ಕೆ ಬಂದಿದ್ದರು. ಸರ್ಕಾರದ ಕೈಗೆಸ್ಟ್ ಎಂಜಿನಿಯರ್ ಶ್ರೀಮಾನ್ ಕೃಷ್ಣಯ್ಯಂಗಾರ್ಯರವರೂ ಆನರರಿ ಸೆಕ್ರೆಟರಿ ಎಸ್ ಆರ್. ಸರಿಕ್ಕಾಯರ್ಯರವರೂ ಸಮಿಪರಿದರು. ಈಸಲ ಈ ಬಗೆ ಜಾನಿವರನ್ನೆಲ್ಲಾ ಹಿಡಿಯಲ್ಪಟ್ಟಿತು.

****

ಬೆಂಗಳೂರಿನಲ್ಲಿರುವ ಸಂಬರಾಣಿ ಬಜಡೋರರ ಒತ್ತಡ ಕಿ ಪೇರಿಸಿ ಸ್ಟ್ರೀಮಪಡಿಸಲ್ಲಾಗಿ ಕ್ರೈಮಸ್ಟ್ಮಕಾರಾದಿ ವರು ಒಂದು ಹಾವಿರ ಚ್ಯಾಕ್ಸ್ ರೂಪಾಯಿಗಳನ್ನು ಮಂಜೂರ್ಮಾಡಿರುವದಲ್ಲದೆ ಇದರ ಪರಾಂಬರಿಕೆ ಬಗ್ಗೆ ಹೆ ಕವಿಷರ್ನರವರನ್ನೂ, ಎ ಇಂ ಕವಿಯವರನ್ನೂ, ಮೆ॥ ಕೃಷ್ಣಮಾರ್ಕರಾವ್, ಮೆ. ಬಸವಲಿಂಗ ಯ್ಯನವರನ್ನೂ ನೇಮಿಸಿದಾರೆ.

****

ಮೈಸೂರು ಪಿ. ಪಬ್ಲಿಕ್ ಇಲಾಖೆಯಿಂದ ಇಂಗ್ಲಿಷಿನ ವಿದ್ಯಾಭ್ಯಾಸಕ್ಕಾಗಿ ಕಳುಹಿಸಿಲ್ಪಟ್ಟಿರುವಲ್ಲಿ ಇ ಮೆ ಫ್ರೋಗ್ರೆಸ್ ಯು ವರ ಸ್ಕಾಲರ್ ಷಿಪ್, ಪುಸ್ತಕಗಳು ಮುಂತಾದವುಗಳ ಖರ್ಚಿಗಾಗಿ ಸಾಲವಾಗಿ ನಿರ್ವಹಣೆಯ ಅವರಿಗೆ ಸಲ್ಲುತ್ತಿದ್ದ ೧೫೦ ರೂ ನಿಲ್ಲಿಸಿ ಬೆಳೆಗೆ ಪಂಡಿತ್ ಗಂ ಜೌನಂಗ್ಯನ್ನು ನೇಮಿಸಿ ಪಠಣವನ್ನು ಕೊಡುವದಾಗಿ ಸರ್ಕಾರದವರು ಒಪ್ಪಿದಾರೆ.

****

ಸಂಗಮೇಶ್ವರದ ಶ್ರೀ ರಾಘವೇಂದ್ರರಾಮಿಗಳ ಮಠಕ್ಕೆ ಶ್ರೀ ವೇಣುಗೋಪಾಲಾಚಾರ್ಯರವರನ್ನು ನಿಯಾಮಕ ಪೂಜನ ನಿಸ ಯದಲ್ಲಿ ಶ್ರೀಮನ್ಮಧ್ವರಾಜರವರು ಒಪ್ಪಿತವನ್ನು ಅನುಗ್ರಹಿಸುವದಕ್ಕೆ ಮೆಂಬರ ಸಬ್ಜ ದಿವಾನರವರು ಆಚಾರ್ಯರವರಿಂದ ವಿದ್ಯಾ ಕಾಲ ಆಕೆ ಮೊದಲಾದ ಯೋಗ್ಯತೆಯ ವಿಷಯದಲ್ಲಿ ವಿಚಾರಿಸಿ ತಿಳಿಕೊಂಡು ನಿರ್ಧಾರವು ಮಾಡಿದರೆಂದು ತಿಳಿದು ಬಂದಿತ್ತದೆ. ಇದೀ ಗ ಅತ್ಯುತ್ತಮವಾದ ವಿದ್ವಾಂಸರಿಂಬುದರಲ್ಲಿ ಸಂಶಯವಿಲ್ಲ.

****

ಕೆಲವು ಕಾಲದ ಹಿಂದೆ ಕಳ್ಳತ್ತಿಯಿಂದ ಬೆಂಗಳೂರಿಗೆ ಬಂದು ಕಿಲಸನ್ನು ಹೆತ್ತು ಅದನ್ನು ಕೊಂದಳೆಂಬ ದೋಷಾರೋಪಣೆಯು ಹೊತ್ತಿದ್ದ ಕೂಂಬ್ಸ್ ಎಂಬಾಕೆಯನ್ನು ಅನಳ ಗಂಡನು ವಿ ಚ್ಛೇದನವಾಡಿ ಕೋರ್ಟಿನಲ್ಲಿ ಅರ್ಜಿ ಮಾಡಿಕೊಂಡನು. ಕೋ ರ್ಟಾವರು ಅದೇಪ್ರಕಾರ ಬಿಡಿಸಿಬಿಟ್ಟರು. ಈಕೆಯು ಒಂದು ಸ ನ್ಯಾಸಿಯಲ್ಲಿ ಆಳ್ವತ್ಯವನ್ನು ಮಾಡಿ ಈ ಕಿಲುವನ್ನು ಹೆತ್ತಳೆಂಬ ಮಾತಿ ತಾನೇ ಗಂದನಾದನೆಯಿಗೆ ಬರೆದಿದ್ದ ಕಾಗದದಿಂದ ರುಜುವಾ ತಾಯಿತು.

****

ಬೆಂಗಳೂರು ಸವಿಾರದಲ್ಲಿರುವ ಒಂದು ಹಳ್ಳಿಯಲ್ಲಿ ಇಬ್ಬರು ಹೆಂಗಸರು ಒಂದೇ ಮನುಷ್ಯನ್ನು ವಾಸಿಸುತ್ತಿದ್ದು ಕೆಲವು ತಿಂಗಳ ಹಿಂದೆ ಇಬ್ಬರೂ ಎರಡು ಗಂಡು ಮಕ್ಕಳನ್ನು ಪಡೆದರು. ಇವುಗಳ ಲ್ಲಿಂದು ಒಂದು ತಿಂಗಳ ಹಿಂದೆ ಸತ್ತುಹೋಯಿತು. ಈಗ ಉಳಿದಿ ರುವ ಮಗುವಿನ ವಿಷಯದಲ್ಲಿ ಅದು ನನ್ನದು ತನ್ನದು ಎಂಬ ವಿ ವಾದವುಂಟಾಗಿ ಇಬ್ಬರು ಹೆಂಗಸರೂ ತುಂಬಾ ಬಗಳವಾಡಿದ್ದರಿಂದ ಪೋಲೀಸಿನವರು ಬರಬೇಕಾಯಿತು. ಈ ವ್ಯಾಜ್ಯ ಹ್ಯಾಗೆ ನಿರ್ಣಯ ಗುವದೋ ನೋಡಬೇಕು.

****

ತಾಲ್ಲೂಕು ಮ್ಯುನಿಸಿಪಾಲಿಟಿಗಳು ಚೀನಲ ಅತ್ಯಪ್ತಿಕರವಾಗಿ ಬರುವ ವಿಷಯದಲ್ಲಿ ಪದೇ ಪದೇ ಪ್ರಜೆಗಳು ಮೊರೆಯಿಟ್ಟುಕೊಳ್ಳುತ್ತಿರುವದನ್ನು ಮಾಚಳು ಅನೇಕ ಬೇಲಿ ಕೇಳಿಬಲ್ಲಾಗಿದೆ. ಅನು ಲ್ಲಾರವರುಗಳಿಗೆ ಸ್ವಂತ ಕೆಲಸಗಳು ವಿಪರೀತವಾಗಿರುವದರಿಂದ ಮುನಿ ಸಿಪಾಲಿಟಿಗಳ ಕೆಲಸವನ್ನೂ ಪದರುವದಕ್ಕೆ ಸಮಯು ದೊರಕದೆ ಹೋಗುವದು ಸ್ವಭಾವವಾಗಿದೆಯಷ್ಟೆ. ಆದರೆ ಪ್ರತಿಯೊಂದು ತಾ ಲ್ಲೂಕಿನಲ್ಲಿಯೂ ವಿದ್ಯಾಸಂಪನ್ನರಾಗಿಯೂ ಅವಕಾಶ ತುಂಬಾ ಉಂ ಟಾದವರಾಗಿಯೂ ಇರುವ ಸಭ್ಯ ರಿಜಿಸ್ಟ್ರಾರುಗಳನ್ನು ಮುನಿಸಿಪಾ ಲಿಟಿಗಳ ನೈಸರ್ಕೃಸಿಡೆಂಟನ್ನಾಗಿ ನೇಮಿಸಿದರೆ ಕೆಲಸಗಳು ಬಹು ಕೃಷ್ಟಪಾಗಿ ನಡೆಯುವದರಲ್ಲಿ ಸಂಶಯವಿಲ್ಲವಾದ್ದರಿಂದ ಈ ವಿಷಯ ಗವರ್ನಮೆಂಟಿನವರ ಅನುಮತಿಯನ್ನು ಕೇಳುವದಕ್ಕಿ ದ್ದೇನೆಂದು ರಿಜಿಸ್ಟ್ರಾರಿರುವ ರಜಿಸ್ಟ್ರಾರ್ ಜನರಲ್ ಕ್ರೈವಿನಾಸಾ ಚಾರ್ಯರವರು ಸೂಚಿಸಿದರೆಂಬಿಂದಾಗಿ ಒಬ್ಬ ಟ್ಯಾಕ್ಸಿದಾರನು ರುದ ರಾಸ್ ಮೇಲ್ ಪತ್ರಿಕೆಗೆ ಬರೆದಿರುತ್ತಾನೆ. ಇದು ಒಳ್ಳೇ ವಿಚಾರ ವೆಂಬುದರಲ್ಲಿ ಸಂಶಯವಿಲ್ಲ.

****

ಈಚೆಗೆ ಬುಳ್ಳವಾರದ ವಿನ ಅಗ್ರಹಾರದ ವತ್ತು ಡೊಡ್ಡಪೇಟೆ ಯ ವೀರಪ್ಪೆಸರಿಗಳಿಗೆ ಅತಿ ಸಂಭ್ರಮದಿಂದ ಕ್ರೈಸ್ತಯುವರಾಜ ರಿಗೆ ಅಭ್ಯರ್ಥನೆ ಮಾಡಬೇಕಾಗಿ ತಮ್ಮ ಸಂತೋಷವನ್ನು ತೋ ರ್ಪಡಿಸಿದರು ತಮ್ಮ ಪತ್ನಿಯರ್ಲ್ಲಿ ಚಂಡಾ ಎತ್ತಿ ವೀರಭದ್ರೇಶ್ವರ, ಮಾ ದೇಶ್ವರ, ಸುವೇಶ್ವರ, ಮೊದಲಾದ ದೇವರುಗಳ ಉತ್ಸವವನ್ನು ವಿ ಜೃಂಭಣೆಯಿಂದ ನಾಡಿಸಿದರು. ಪಟೆಯು ಅರಮನೆ ಜಪ್ಪದಕಟ್ಟೆಯು ದಲ್ಲೂ ಅಗ್ರಹಾರದ ಚಿಕ್ಕಬಸವೇಶ್ವರ ದೇವಸ್ಥಾನದಲ್ಲೂ ಬಹು ಗ್ಗರಿಗೆ ಅನ್ನದಾನವನ್ನು ಉದಾರವಾಗಿ ಮಾಡಿಸಿದರು. ಉತ್ಸವಕಾಲ ಲ್ಲಿ ಅರಮನೆಯಿಂದ ಸುರ್ಯಾದೆಗಳು ಬಂದಿದ್ದವು. ಸಾಯಂಕಾಲ ಸ್ಥಿರಿಯಾಗಿ ದೀಪತೋರ್ಣಗಳು ಜರುಗಿದ್ದವು. ಪಟೆಯ ದಿನ ತೊಗ್ಗವ್ವ ಬೆಸಪಟಾಗ್ಗೆ ಸುಗ್ಗಿಯವಂಗಡಿ ಮಡಿಪಡನವರು ಅಲ್ಲಲ್ಲಿಗೆ ಹಿಂಸ್ರಾಪ್ರಾಣವಕ್ಕು ದೀಪರಮೇಲೆ ಎರಚುತ್ತಿದ್ದರು ರಾತ್ರಿ ೧ ಗಂಬೆಗೆ ಉತ್ಸವಗಳು ತೊಟಿಯು ಉತ್ತರಭಾಗಿಲ ಮಾರ್ಗ ವಾಗಿ ಕರಿಕಲ್ಲುತೊಟ್ಟಿಯು ಹಿಂಭಾಗಕ್ಕೆ ಬಂದವು. ಮೀಲ್ಲಪ್ಪಿಕೆ ಟಕೆಯಲ್ಲಿ ಕ್ರೈಮಸ್ಟಾಮಜಾದರು ಯುವರಾಜರ ಸಮಿಧರಿಗೆ ಜೊಂದು ಎಂದರು ಪಾತ್ರೈರಿಯವರಾಗಿ ಗರ್ಭರೂಪವಾಗಿ ಉತ್ಸವಗಳಲ್ಲಿದ್ದರು. ಕ್ರೈಮಸ್ ಮಜಾರಾಜರಿಗೂ ಕ್ರೈ ಯುವರಾಜರಿಗೂ ಪ್ರಸಂಪಾನಿಗಳು ಕೊಡಲ್ಪಟ್ಟವು ಆವರ ರೇಸನಾ ಮುಂಪ್ರಗಳ ಮೇಲೆ ಸ್ವಾಮಿಯವರೆಲ್ಲರೂ ಪುಷ್ಪಾಂಜಲಿಯನ್ನು ಮಾಡಿದರು ಒಳಕ್ಕೆ ಕೆಲವರು ಮಂದತಿಗಳೂ ವೈದಿಕ ಶಾ ಲ ಕೆಲರೂ ವೀರಶೈವಮಂಡ ಲದ ಪ್ರತಿನಿಧಿಗಳಾಗಿ ಕ್ರೈಮಸ್ಟಮಹಾರಾಜರ ಸನ್ನಿಧಿಗೆ ಬಂದು ಮಾಡಿಸಿ, ಶ್ರೇಯಸ್ಸು ಪ್ರಾರ್ಥನ ರೂಪವಾಗಿ ಪದ್ಯಗಳನ್ನು ಪಾ ಎ ಆರ್ ಕಾರಿಟಸನಸ್ಪ್ರಿಗಳು, ಮಿ ರಾಜೋಪಾಧ್ಯಾಯರುಗಳು ಇವರಿಂದ ಶೇಷ, ಹಾರ ತುರಾಯಿ ಗೆಳನ್ನು ಕ್ರೈವ ಸ್ವಾಮಿಗಳಿಗೂ ಕ್ರೈಮಸ್ಟ ಯುವರಾಜರಿಗೂ ಅರ್ಪಿಸಿದರು. ಈ ಸಂದರ್ಭದಲ್ಲಿ ಪರಬಾಣಿ ಚಕ್ರವರ್ತಿ ವರಾದ ಮೆ ಎಚ್ ಲಿಂಗರಾಜೇಅರ್ ನವರು, ಬಿ ಯು ಪದ್ಯಾಯನ ರಾದ ಮೆ॥ ಮುದ್ದರಾಜೆ ಅರಸಿನವರೂ, ಮಲೆಯನ ತಿ ಇಲಾಖೆಯ ಇಕ್ಷಿಯವರಾದ ಮೆ ಚಿಕ್ಕಲಿಂಗರಾಜೇಅರಸಿನವರು ಸಹ ಇವಲ ಅಭಿನಂದನಪತ್ರವನ್ನು ಪಠಿಸಿ ಬಂದಿದ್ದ ಪ್ರಮುಖ ವ್ಯಕ್ತಿಗಳಿಗೆ ಕಾಣಿಕೆಯ ನ್ನು ಕ್ರೈಮಸ್ಟಕುಮಾರಜಂಬರಿಂದ ಪಡಿಸಿದರು. ಬಳಿಕ ಸಂತೋಷಗೊಂಡರು.

ಬೆಂಗಳೂರು—ಮೇ ೨—ಕಳೆದ ಬುಧವಾರ ಚಪ್ಪಿಯ ವರಾದ ಮೆ ಎಚ್ ಲಿಂಗರಾಜೇಅರ್ ನವರು, ಬಿ ಯು ಪದ್ಯಾಯನ ರಾದ ಮೆ॥ ಮುದ್ದರಾಜೆ ಅರಸಿನವರೂ, ಮಲೆಯನ ತಿ ಇಲಾಖೆಯ ಇಕ್ಷಿಯವರಾದ ಮೆ ಚಿಕ್ಕಲಿಂಗರಾಜೇಅರಸಿನವರು ಸಹ ಇವಲ ಅಭಿನಂದನಪತ್ರವನ್ನು ಪಠಿಸಿ ಬಂದಿದ್ದ ಪ್ರಮುಖ ವ್ಯಕ್ತಿಗಳಿಗೆ ಕಾಣಿಕೆಯ ನ್ನು ಕ್ರೈಮಸ್ಟಕುಮಾರಜಂಬರಿಂದ ಪಡಿಸಿದರು. ಬಳಿಕ ಸಂತೋಷಗೊಂಡರು. ಈ ಸಂದರ್ಭದಲ್ಲಿ ಪರಬಾಣಿ ಚಕ್ರವರ್ತಿ ವರಾದ ಮೆ ಎಚ್ ಲಿಂಗರಾಜೇಅರ್ ನವರು, ಬಿ ಯು ಪದ್ಯಾಯನ ರಾದ ಮೆ॥ ಮುದ್ದರಾಜೆ ಅರಸಿನವರೂ, ಮಲೆಯನ ತಿ ಇಲಾಖೆಯ ಇಕ್ಷಿಯವರಾದ ಮೆ ಚಿಕ್ಕಲಿಂಗರಾಜೇಅರಸಿನವರು ಸಹ ಇವಲ ಅಭಿನಂದನಪತ್ರವನ್ನು ಪಠಿಸಿ ಬಂದಿದ್ದ ಪ್ರಮುಖ ವ್ಯಕ್ತಿಗಳಿಗೆ ಕಾಣಿಕೆಯ ನ್ನು ಕ್ರೈಮಸ್ಟಕುಮಾರಜಂಬರಿಂದ ಪಡಿಸಿದರು. ಬಳಿಕ ಸಂತೋಷಗೊಂಡರು.

ರಷ್ಯಾ ಜಪಾನ್ ಯುದ್ಧಸ್ಥ.

ಲಂಡನ್, ಏಪ್ರಿಲ್ ೩೫—ಅಡ್ಮಿರಲ್ ಅಲೆಕ್ಸೀಫರು ಕೆ ಟ್ಟ ಬಿಜೀಸಾಮರ್ಥ್ಯವನ್ನು ರಷ್ಯ ಚಕ್ರವರ್ತಿಯವರಾ ಅಂ ಕ್ಷಾಲಿಸಿ ಜಪಾನಿಯವರ ಅವರ ರಾಜಿನಾಮೆಯನ್ನು ಹಿಂತೆಕ್ಕೊಂಡರೆಂದು ಟರೆ ಅಡ್ಮಿರಲ್ ಸ್ಕ್ರಿಪ್ಟಾಫರು ರಣಾಂಕ್ಕೆ ಬರಲು ಪಟಿಯಿ ಮಾಡಿದ್ದಾರೆ.

ರಷ್ಯದವರ ಸೈನ್ಯದ ಜೊತೆಯಲ್ಲಿ ಇಂಗ್ಲಿಷರ ಪ್ರತಿನಿಧಿಯಾಗಿ ನೇಮಿಸಲ್ಪಟ್ಟಿರುವ ಮೇಜರ್ ಹೋವ್ ನಿಯಂತ್ರಿಸಿಗನ್ನು ನೇ ದಿದ್ದಾನೆ.

ಈ ಯುದ್ಧದಲ್ಲಿ ಬ್ರಿಟಿಷರು ಪಕ್ಷಸ್ಥಿತಿ ವಹಿಸಲು ಇಷ್ಟಪ ಟ್ಟಿದ್ದಾರೆಂಬ ಸುಳ್ಳು ಸುದ್ದಿಯು ಹುಟ್ಟಿದೆ.

ವ್ಲಾಡಿವೊಸ್ಟಾಕಿನಲ್ಲಿದ್ದ ರಷ್ಯಾ ನೌಕಾ ಸೇನೆಯು ಕೊರಿಯದ ಪೂರ್ವ ದಡವ ಪೋರ್ಟ್‌ಆರ್ಥರ್ ಎಂಬ ಬಂದರಿನ ಬಳಿಯಲ್ಲಿ ಕಾಣಿಸಿಕೊಂಡಿತೆ.

ರಷ್ಯದ ಎರಡು ಟಾರ್ಪಡೊ ಎಂಬ ಸಣ್ಣ ಹಡಗುಗಳು ಬಂ ದರದೊಳಕ್ಕೆ ಬಂದು ಜಪಾನಿನವರ ಒಂದು ಯುದ್ಧನಾವೆಯನ್ನು ಮುಳುಗಿಸಿಬಿಟ್ಟು ಕೂಡಲೆ ಹೊರಟುಹೋದವು.

ವೀಜೂ ಎಂಬುದರ ಬಳಿಯಲ್ಲಿ ಜಪಾನಿನವರು ದಮಲೂ ನದಿ ಯನ್ನು ದಾಟುವದಕ್ಕೋಸ್ಕರ ಸೇತುವೆಯನ್ನು ಕಟ್ಟುವದರಲ್ಲಿ ಪ್ರಯತ್ನಪಡುತ್ತಿದ್ದಾರೆಂದೂ, ಅವರು ಆದೇ ಪ್ರಯತ್ನ ಎರಡು ಪ ಟಾಲಂ ಪಡಾತಿ ಸೇನೆಯನ್ನು ದಾಟಿಸಲಾಗಿ ರಷ್ಯದವರು ತಮ್ಮ ಸೇನೆಯ ಕಡೇ ಗಡಿಯವರನ್ನು ಹೆಚ್ಚಿಸಿಕೊಂಡರೆಂದೂ ಜಸರಲ್ ಕುರೋಪಾಟ್ಕಿನ್‌ರು ತಂತಿವರ್ತಮಾನ ಕಳುಹಿಸಿದ್ದಾರೆ.

ಲಂಡನ್, ಏಪ್ರಿಲ್ ೩೬—ಟ್ಯುಮೆನ್ ನದಿಯ ರಕ್ಷಣೆಯಲ್ಲಿ ತಿಬು ರವಿ ಬರುವ ರಷ್ಯದವರ ಅಶ್ವ ಸೇನೆಗೆ ಜೆನರಲ್ ಕುರೋಪಾಟ್ಕಿನ್ ರು ಮತ್ತೆ ಕೆಲವು ಅಗ್ರ ಸೇನೆಯನ್ನೂ ಪರ್ವತಗಳ ಮೇಲಿನಿಂದ ಹಾದಿಸತಕ್ಕ ಭಿರಂಗಿಗಳನ್ನೂ ಕಳುಹಿಸಿದ್ದಾರೆ.

ಜಪಾನಿನವರ ಸೇನೆಯು ದಮಲೂ ನದಿಯನ್ನು ದಾಟುತ್ತಿದೆ ಯೆಂದು ಇಂಡಿಯ್ ಟೆಲಿಗ್ರಾಫ್ ಎಂಬ ಪತ್ರಿಕೆಗೆ ತಂತಿ ವಿ ಕೇಷ ವರ್ತಮಾನವು ಬಂದಿದೆ.

ಸೆನ್ಸಾನ್ ಬಂದರಿನಲ್ಲಿ ರಷ್ಯದವರು ಜಪಾನಿನವರ ನಾವೇಗಾನನ್ನು ಮುಳುಗಿಸಿವದಕ್ಕೆ ಮಾಯಿಂಬಿಂಗಿ ಇಸರ ನಾವಿಕರನ್ನೆಲ್ಲಾ ಪಡಕ್ಕೆ ಸೇರಿ ಎದುಕಿಕೊಳ್ಳುವಂತೆ ಅವಕಾಶ ಕೊಟ್ಟರಂದು ಗೊತ್ತಾಗಿದೆ.

ಲಂಡನ್, ಏಪ್ರಿಲ್ ೩೭—ರಷ್ಯರು ಖಾಲ್ಕಿಕ್ ಕಡಲಿನಲ್ಲಿರುವ ತಮ್ಮ ನೌಕಾ ಸೇನೆಯನ್ನು ಸೂಯೆಜ್ ಕಾಲಿಯು ಮಾರ್ಗವಾಗಿ ಹೊರಟು ಬರುವಂತೆಯೂ ಇವುಗಳಿಗೆ ಅವಶ್ಯವಾದ ಕಲ್ಲಿದ್ದಲನ್ನು ತುಂಬಿದ ಹಡಗುಗಳು ಆಫ್ರಿಕ ಖಂಡವನ್ನು ಸುತ್ತಿಕೊಂಡು ಹಿಂದೂ ಸಾಗರವನ್ನಲ್ಲಿ ಒಂದು ಕಡೆ ಬಂದು ಕಲೆತು ತರುವಾಯ ಜೊತೆಯಾಗಿ ಯುದ್ಧರಂಗವನ್ನು ಸೇರುವಂತೆಯೂ ನೌಕಾ ಸೇನಾಧಿಕಾರಿಗಳು ಆಲೋಚಿಸಿರುವರು.

ಲಂಡನ್, ಏಪ್ರಿಲ್ ೩೮—ಜಪಾನಿನವರು ದಮಲೂ ನದಿಯ ನ್ನು ದಾಟಿ ವದಕ್ಕೆ ಬಲವು ಸಾರಿ ಪ್ರಯತ್ನಿಸಿದರೆಂತ ಒಂದು ವರ್ತ ಮಾನವು, ರಷ್ಯರ ಭಿರಂಗಿ ಸೇನೆಯು ವೀಜೂವಿನ ಉತ್ತರದಲ್ಲಿ ಜಪಾನಿನವರು ಕಟ್ಟರ್ದ ಸೇತುವೆಯನ್ನು ಒಡೆದು ನಾಶವಾಡಿದರೆಂ ತಲೂ ವೀಜೂವಿನ ರಕ್ಷಣಕ್ಕೆ ಒಂದು ಸೇನೆಯು ನದಿಯನ್ನು ದಾಟಿ ಟ್ಯುಆನ್‌ಜ್ ಕಡೆಗೆ ಹೋಗುತ್ತಿರುವಲ್ಲಿ ೯ನ್ನುಗ ೧೮ ಪಟ್ಟು ತೆಂದು ಹಿಮ್ಮೆಟ್ಟುವರೆಂತಲೂ ಮತ್ತೊಂದು ವರ್ತಮಾನವು ಬಂದಿದೆ.

ಸೆನ್ಸಾನಿನಲ್ಲಿ ಜಪಾನಿನವರ ನಾವೆಯನ್ನು ಮುಳುಗಿಸಿ ಹೊರ ಟು ಹೋದ ರಷ್ಯಾ ಹಡಗಿನವರು ೩೬ ನೇ ತಾರೀಕಿನ ರಾತ್ರಿ ಜಪಾ ನಿನವರೆ ಕೀರಿಷ ಮಸರು ಎಂಬ ಹಡಗನ್ನು ಇಟುಗೊಂಡರು. ಜಪಾ ನಿನ ಪಡಗಿನ ೧೭ ಮಂದಿ ಆಫಿಸರುಗಳೂ, ೭೦ ಸಿಪಾಯಿಗಳೂ ೬೫ ಮಂದಿ ನಾವಿಕರೂ ರಷ್ಯನರಿಗೆ ಕರಣಾಗತರಾದರು. ಉಳಿದ ೭೦ ಮಂದಿ ಸೈನಿಕರು ಕರಣಾಗತರಾಗಿ ಪೋಲಾದಲ್ಲಾಗಿ ಪಡಗಿನ ಸ ಮೇತ ಸಮುದ್ರದ ಪಾಲಾಗಿದಂದೆ ಹೇಳಲ್ಪಟ್ಟಿರು.

ಜಪಾನಿನವರ ಪಡಗೊಂದು ದಮಲೂ ನದಿಯಲ್ಲಿ ಹೊರಟು ಹೋಗುವಾ ರಷ್ಯರ ನೆಲ ಸೇನೆಯ ಸಂಗಡ ಕೆಲವು ಕದನಗಳನ್ನು ನಡಸಿತೆಂದೂ, ಆದರೆ ಮೇಲೆ ಪ್ರಯೋಗಿಸಲ್ಪಟ್ಟ ರಷ್ಯರ ಭಿರಂಗಿ ಗಂದ ಏನೂ ಫಲಪ್ರಯೋಜನವಿಲ್ಲವೆಂದೂ, ಜೊಲೆದು ಮಧ್ಯದಲ್ಲಿ ಒಂದು ವ್ಯೂಹವನ್ನಾಕ್ರಮಿಸಿಕೊಂಡಿದ್ದ ರಷ್ಯದವರನ್ನು ಓಡಿಸಿ ಬಿಟ್ಟರೆಂಕಲೂ ಹೋಕಿದೊ ನಗರದಲ್ಲಿತಂತೀ ವರ್ತಮಾನ ಹುಟ್ಟಿತೆ.

ಜಪಾನಿನವರು ನದಿಯನ್ನು ದಾಟಿ ಮೀಳಯುವಿ ಯುದ್ಧಭೂಮಿಯಲ್ಲಿ ರಷ್ಯ ರ ಅಶ್ವಸೈನಿಕರು ೧೦೦ ಮಂದಿ ಸೇಲೆ ಬಂದು ಬಿದ್ದರು. ಆಗ ನವ ಯಿಂದ ಕೊರ್ಪಾಡೊ ಪಡಗಿನಿಂದ ಭಿರಂಗಿ ಹಾರಿಸಲು ಸಮಾರು

ಮೈಸೂರು ಸರ್ಕಾರಿ ಹುಳುಮುಗಳು.

೧. ಅರಮನೆ ಇಲಾಖೆಯಲ್ಲಿಯೂ ಗವರ್ನ್‌ಮೆಂಟಿನಲ್ಲಿಯೂ ಕೆಲಸ ಮಾಡುವವರ ಪೆರ್ಷ್ಯ ವಿಷಯ.

ಅರಮನೆ ಇಲಾಖೆಯಲ್ಲಿಯೂ ಗವರ್ನ್‌ಮೆಂಟು ಇಲಾಖೆಯಲ್ಲಿಯೂ ಕೆಲಸ ಮಾಡುತ್ತಾ ಇರುವವರಿಗೆ ಪೆರ್ಷ್ಯ ಕಲಿಯುವ ವಿಷಯವು ತಪ್ಪಿ ನ್ಯಾಯ ಪರಿಗಣನೆಗೆ ಬೇಕೆಂಬ ವಿಷಯವಾಗಿ ಗವರ್ನ್‌ಮೆಂಟು ಜೆರಲ್ ಪ ದೆವಿಷ್ಯೂ ಸೆಕ್ರಟರಿಯವರ ಆಫೀಸಿನಿಂದ ಮೈಸೂರು ಸರ್ಕಾರದ ಕಂಟ್ರೋಲರರಿಗೆ ಒಂದು ಚಿಕ್ಕಹ ಕಳುಹಿಸಲ್ಪಟ್ಟತ್ತು. ೧೯೦೧ ನೇ ಜನವರಿ ೧೩ ರಲ್ಲಿ ಕಳುಹಿಸಲ್ಪಟ್ಟ ಈ ಚಿಕ್ಕಹಕ್ಕೆ ಅಂಟ್ರೋಲರವರು ಮಾರ್ಚಿ ೧೪ ರಲ್ಲಿ ಅರಮನೆ ಇಲಾಖೆಯ ನೌಕರರಿಗೆ ಸಲ್ಲಿಸಹಕ್ಕ ಪೆರ್ಷ್ಯ ವಿಷಯದಲ್ಲಿ ಯಾವ ನಿಬಂಧನೆಗಳೂ ಜಾರಿಯಲ್ಲಿಲ್ಲವೆಂತಲೂ, ಮೊದಲು ಗವರ್ನ್‌ಮೆಂಟು ಕೆಲಸಕ್ಕೆ ಸೇರಿ ತರುವಾಯ ಅರಮನೆ ಇಲಾಖೆಯನ್ನು ಸೇರಿದ ನೌಕರರಾದವರು ಭಾರಿನ್ ಸರ್ವಿಸ್ ನಿಬಂಧನೆಗಳ ಪ್ರಕಾರ ತಮ್ಮ ಪೆರ್ಷ್ಯ ಬಗ್ಗೆ ಸಂಬಳದಲ್ಲಿ ಮಾಡಿಕೊಳ್ಳ ವಂತಿಗೆಯನ್ನು ಸಲ್ಲಿಸಹಕ್ಕದ್ದೆಂತಲೂ ಉತ್ತರಕೊಟ್ಟರು.

ತರುವಾಯ ಅಂದರೆ ೧೯೦೩ ನೆ ಅಕ್ಟೋಬರ್ ೩೦ ರಲ್ಲಿ ಅರಮನೆ ಕಂಟ್ರೋಲರವರು—ಅರಮನೆ ಇಲಾಖೆಯಲ್ಲಿಯೂ ಗವರ್ನ್‌ಮೆಂಟಿನಲ್ಲಿಯೂ ಕೆಲಸಮಾಡುತ್ತಿರುವವರಿಂದ ತಮ್ಮ ಪೆನ್ಷನ್ ಬಗ್ಗೆ ಸಲ್ಲತಕ್ಕ ವೊಬಲಗನ್ನು ಸಲ್ಲಿಸುವಂತೆ ಅರ್ಜರು ಮಾಡಬೇಕೆಂದೂ ತರುವಾಯ ೧೯೦೩ ನೇ ಮೇ ೪ ರಲ್ಲಿ ಅರಮನೆ ಕಂಟ್ರೋಲರವರು ಬೇಗಳೂರು ಅರಮನೆ ನೌಕರರಾಗಿದ್ದ ರಾಮೈಯ ಸೆಂಬೋಳ್ಳುಸ ವಿಷಯದಲ್ಲಿ ಸರ್ಕಾರದವರು ಪ್ರೊರೇಟ್ ಕಂಟ್ರಿಬ್ಯೂಷನ್ ರೀತ್ಯಾ ಪೆರ್ಷ್ಯ ಅನುಗ್ರಹಿಸಬೇಕೆಂತಲೂ, ಇದೇ ಪ್ರಕಾರ ಇತರ ಆಫೀಸರುಗಳ ವಿಷಯ ದಲ್ಲಿಯೂ ಆರ್ಜರು ಮಾಡಿಸಬೇಕೆಂತಲೂ ಬರೆದುಕೊಂಡರು.

ಸರ್ಕಾರದವರು ಹುಳುಮು ಮಾಡುವದೇನೆಂದರೆ—

ಅರಮನೆ ಇಲಾಖೆಯಲ್ಲಿಯೂ ಗವರ್ನ್‌ಮೆಂಟಿನಲ್ಲಿಯೂ ನೌಕರಿ ಮಾಡುವವರಿಗೆ ಪೆರ್ಷನನ್ನು ಡಾಮಾಷಾ ಪ್ರಕಾರ ಕ್ರಮಪಡಿಸಿಳ್ಳಬೇಕು. ಅರಮನೆ ಕಂಟ್ರೋಲರವರು ರಾಮಯ್ಯನ ವಿಷಯದಲ್ಲಿ ಅರಮನೆಯಿಂದಲೂ ಗವರ್ನ್‌ಮೆಂಟಿನಿಂದಲೂ ಎಷ್ಟೆಷ್ಟು ಪೆರ್ಷ್ಯ ಸಲ್ಲತಕ್ಕದ್ದೆಂಬುದಕ್ಕೆ ಡಾಮಾಷಾ ಪ್ರಕಾರ ಗಣನೆ ಮಾಡಿ ಸರ್ಕಾರದವರ ಒಪ್ಪತದ ಬಗ್ಗೆ ಕಂಟ್ರೋಲರ ಮುಖಾಲ ಕಳುಹಿಸಿ ಕೊಡಬೇಳು. ಈ ಕಂಟ್ರೋಲರವರು ಮೈಸೂರು ಸರ್ವಿಸ್ ರೆಗ್ಯುಲೇಷನಿನ ಈ ನಿಬಂಧನೆಯನ್ನು ನೇರಿಸತಕ್ಕ ಬಗ್ಗೆ ನುಸೂಚೆ ಕಾನೂನು ತಯಾರ್ಮಾಡಿ ಸರ್ಕಾರಕ್ಕೆ ಕಳುಹಿಸಬೇಕು.

೨. ಮೈಸೂರು ಸರ್ಕಾರದ ಕ ಟ್ರೋಲರವರು ೧೯೦೨ ನೇ ಜನವರಿ ೧೩ ರಲ್ಲಿ ಕಳುಹಿಸಿದ ಕಾಗದದಲ್ಲಿ ಪೆರ್ಷ್ಯ ಯಾ ಗ್ರಾಜುಟಿ ವಿಷಯುಗಳಿಗೆ ತನ್ನಲ್ಲಿಗೆ ಬಂದ ಅಪ್ಲಿಕೇಷನುಗಳನ್ನು ವಿಲೇವಾರಿ ಮಾಡಿದ್ದನ್ನೂ ೧೯೦೩ ನೇ ಡಿಸೆಂಬರ್ ಆಖೈರು ವರಿಗೆ ವಿಲೇವಾರಿ ಆಗದೆ ಇದ್ದ ಅಪ್ಲಿಕೇಷನುಗಳ ಪಟ್ಟಿಯನ್ನೂ ಸಮುಾಪಿಸಿದರು.

ಹುಳುಮು.—

ಡಿಪಾರ್ಟ್‌ಮೆಂಟುಗಳ ಆಫೀಸಾರಗಳೂ ಡಿಸ್ಟ್ರಿಕ್ಟು ಡೆಪ್ಯುಟಿಕ ಮಿಷನರುಗಳೂ ಕೇಳಿರುವ ಖಗೆ ಬೇಕಾದ ವಿವರಗಳನ್ನೆಲ್ಲ ಸದುತ್ತರ ಜಾರದೆ ಈ ಅಪ್ಲಿಕೇಷನುಗಳು ಬಹು ಕಾಲದವರೆಗೂ ವಿಲೇವಾರಿ ಆಗದೆ ಬಿದ್ದಿವೆ. ಆದಕಾರಣ ಕಂಟ್ರೋಲರವರು ಸಕಾಲಕ್ಕೆ ರಿಮೈಂ ದರುಗಳನ್ನು ಕಳುಹಿಸುತ್ತಿರುವಂತೆಯೂ, ಅಪ್ಲಿಕೇಷನುಗಳನ್ನೂ ವಿಲೇ ಮಾಡುವ ವಿಷಯದಲ್ಲಿ ಸಹಾಯವನ್ನು ಒಪ್ಪಿಸಿಕೊಟ್ಟು ತ್ವರೆ ಗೊಳಿಸುವಂತೆಯೂ, ಗವರ್ನ್‌ಮೆಂಟು ನಂ. ಪಿ ಅಂಡ್ ಎ. ೪೨೬—೪೪, ೧೯೦೩ ನೇ ನವೆಂಬರ್ ೨೫ ರಲ್ಲಿ ಕೊಟ್ಟಿರುವ ಕ್ರಮವು ದ ಪ್ರಕಾರ ಮೂರು ತಿಂಗಳಿಗೆ ಒಂದಾವರ್ತಿ ಸ್ಟೇಟ್ಮೆಂಟುಗಳನ್ನು ಕಳುಹಿಸುತ್ತಿರುವಂತೆಯೂ ಸೂಚಿಸಿದೆ.

ಸೂಚಿರಾದ ಹುಳುಮಿನ ಪ್ರಕಾರ ತ್ವರ್ಯಾಧಲ್ಲಿ ವಿಲೇ ಮಾಡದೆ ತಾವು ಮಾಡತಕ್ಕವರ ವಿಷಯವನ್ನು ಕಂಟ್ರೋಲರವರು ಸರ್ಕಾರದವರ ಗಮನಕ್ಕೆ ತರಬೇಕು.

ಮೈಸೂರು ಸೀಮೆಯಲ್ಲಿ ರಬ್ಬರಿನ ಬೆಳೆ.

ರಬ್ಬರು ಒಂದು ಮರದ ಸಾಲು. ಈ ಮರವು ದಕ್ಷಿಣ ಅಮೆರಿಕ ದ ಬ್ರೆಜಿಲ್ ದೇಶದ್ದಾಗಿದೆ. ಅಲ್ಲಿನ ಸಿಯೆರಾ ಎಂಬ ಪಟ್ಟಣದಲ್ಲೇ ಇದರ ವ್ಯಾಪಾರವು ಬಹಳವಾಗಿ ನಡೆಯುವದರಿಂದ ಅದಕ್ಕೆ ಸಿಯೇರಾ ರಬ್ಬರು ಮರ ಎಂದು ಹೆಸರು ಹುಟ್ಟಿತಾರೆ. ಇದನ್ನು ಮೈಸೂರು ಸೀಮೆಯಲ್ಲಿಯೂ ಬೆಳಸಿ ಆಪಾಯವನ್ನು ಪಡೆಯಬೇಕೆಂಬ ಅಭಿಪ್ರಾಯವಿಂದ ನಮ್ಮ ಗವರ್ನ್‌ಮೆಂಟಿನವರು ಕಳ್ಳತ್ತಾದ ಸರ್ಕಾರಿ ತೋಟಗಳಲ್ಲಿ ಕೆಲವು ಗಿಡಗಳನ್ನು ತರಿಸಿ ೧೯೬೨ ನೇ ಇಸ್ವಿಯಲ್ಲಿ ಬೆಂಗಳೂರು ಲಾಲ್‌ಬಾಗ್ ತೋಟದಲ್ಲಿ ನೆಟ್ಟಿರು ಆರು ವರ್ಷಗಳಾದ ಮೇಲೆ ಅಂದರೆ ೧೯೬೪ ರಲ್ಲಿ ಆ ಗಿಡಗಳಿಂದ ಎರಡನೇ ಸಲದ ಬೆಳೆಯನ್ನು ಉತ್ತತ್ತಿ ಮಾಡಿಕೊ ಡಬಾಯತೆಂದೂ, ಆ ಮರಗಳ ಬೀಜದಿಂದ ಸುಮಾರು ೨,೦೦೦ ಸಸಿಗಳನ್ನು ಮಾಡಿ ನಾಲ್ಕನೆ ವರ್ಷ ಅಂದರೆ ೧೯೬೫ ರಲ್ಲಿ ಬೆಂಗಳೂರಿನ ಬೇರೆ ಬೇರೆ ಸ್ಥಳ ಗಳಲ್ಲಿ ಬೆಳೆಯಸಲಿಕ್ಕೆ ಸಿದ್ಧಾಯತೆಂದೂ ಸರ್ಕಾರಕ್ಕೆ ತಿಳಿಸಿದರು. ಆ ಕಾಲದಿಂದಲೂ ರಬ್ಬರು ಮರಗಳು ಹೆಚ್ಚಾತಲೆ ಎಂದಿನೆಯಾದ ಕಾರಣ ಈಗ ಈ ಮರದ ಬೀಜಗಳು ಸುಮಾರು ೫೦೦ ಪೌಂಡು ತೂಕದಷ್ಟು ಸಿಕ್ಕುವದರಲ್ಲಿ ಸಂಕಯವಿಲ್ಲ. ಒಂದೊಂದು ಪೌಂಡು ತೂಕಕ್ಕೆ ಸುಮಾರು ೯೦೦ ಬೀಜಗಳು ಸಿಕ್ಕುವದರಿಂದ ಈಗ ಅನೇಕ ಸ್ಥಳಗಳಲ್ಲಿ ಈ ಮರದ ಬೆಳೆಯನ್ನು ಹೆಚ್ಚಿಸುವದಕ್ಕೆ ಒಳ್ಳೆ ಅವಕಾಶವುಂಟಾಗಿದೆ. ಇಷ್ಟು ಕಾಲವೂ ಗವರ್ನ್‌ಮೆಂಟು ಆಫೀಸರುಗಳಿಗೂ, ಪ್ಲಾಂಟರುಗಳಿಗೂ ಇನ್ನು ಈ ಬೆಳೆಯನ್ನು ವೃದ್ಧಿಪಡಿಸುವದಕ್ಕೆ ಅಪೇಕ್ಷಿಸಿದವರಿಗೂ ಸಣ್ಣ ಲಾಲ್‌ಬಾಗಿನಿಂದ ಬೀಜಗಳೂ ಗಿಡಗಳೂ ಸರಬರಾಯಿ ಆಗುತ್ತಾ ಬಂದಿರೆ ಆದಕಾರಣ ಈ ಮರವು ನಮ್ಮ ಸಂಸ್ಥಾನದ ಎಲ್ಲಾ ಪ್ರದೇಶಗಳಲ್ಲಿಯೂ ಹೆಚ್ಚು ಕಡಮೆ ಸಾಧಾರಣವಾಗಿದೆ.

ಇಹರ ವ್ಯವಸಾಯ.

ಬೀಜದ ಹೊರಗಡೆ ಬಹು ದಪ್ಪವಾಗಿರುವದರಿಂದ ಹೊಳಕೆ ಯೇಳುವದು ಬಹಳ ಕಾಲವಾಗುತ್ತದೆ. ಆದಕಾರಣ ಬೀಜದ ಬಾಯಿ ಯಿರುವ ಕಡೆ ಅರಿದಿಂದ ಸ್ವಲ್ಪ ಉಜ್ಜಿ ತೆಗೆದು ಹುಟ್ಟುಹಾಕಲು ಒಂದು ತಿಂಗಳೊಳಗಾಗಿಯೇ ಹೊಳಕೆಯೆದ್ದಿತು. ಈ ಮರದ ಬೆಳೆಗೆ ಸಮ್ಯ ಸೀಮೆಯ ಭೂಮಿಯೂ ವಾಯು ಗುಣವೂ ಅನುಕೂಲವಾಗಿವೆ ಇಂಥ ಅನುಕೂಲಗಳಲ್ಲಿಲ್ಲದ ಹಡೆಗಳಲ್ಲಿ ಭೂಮಿಯಲ್ಲಿ ಬೀಜಗಳು ಎಷ್ಟು ವರುಷಗಳಾದರೂ ನೋಳಕೆಯೇಳದೆ ಹಾಗೇ ಇರುವವೆಂದು ತಿಳಿದುಖಂದದೆ.

ಕಾಫಿ ಬೆಳೆಯುಂಟಾಗುವ ಕ್ಷೇತಸ್ಥಲೇಕಗಳಲ್ಲಿ ಈ ಮರವು ನಾಲ್ಕಾರು ವರುಷಗಳಲ್ಲೇ ದೊಡ್ಡ ಮರವಾಗುತ್ತದೆ, ಮತ್ತು ಮೈಸೂಸ ಕೀಮೆಯ ಮರಗಳಿಗಿಂತ ಹೆಚ್ಚು ಕಾಲ ಎಲೆ ಬಿಟ್ಟಿರುತ್ತದೆ.

ಮೈದಾದ ಕೀಮೆಯಲ್ಲಿ ಈ ಮರಕ್ಕೆ ಜನವರಿ ತಿಂಗಳಿಂದ ಜೂನಿನ ವರೆಗೂ ಎಲೆ ಉದುರುವ ಕಾಲವಾಗಿರುತ್ತದೆ ಈ ಮರ ವು ಬಹು ಗಟ್ಟಿಮುಟ್ಟಾಗಿರುವದರಿಂದ ಎಂಥ ಭೂಮಿಯಲ್ಲಾದರೂ ಬೆಳೆಯುವದು. ಆದರೂ ಉತ್ಕೃಷ್ಟವಾದ ಫಲಭಾಗವಾದಕ್ಕೆ ಭೂ ಮಿಯೂ ಉತ್ಕೃಷ್ಟವಾಗಿಯೇ ಇರಬೇಕು, ಬಂಜರು ಬಿದ್ದಿರುವ ಭೂಮಿಯಲ್ಲಿ ಇದನ್ನು ನೆಲೆಗೊಳಿಸುವದಕ್ಕೆ ಪ್ರಯತ್ನ ಮಾಡಿ ಫಲವಾದರೆ ಅದು ತರುವಾಯ ತಾನಾಗಿ ಬೆಳೆದು ಅಭಿವೃದ್ಧಿಯಾಗುವದು ಇದನ್ನೇ ಮುಖ್ಯ ಬೆಳೆಯಾಗಿ ಮಾಡಿಕೊಳ್ಳಲಪೇಕ್ಷಿಸುವವರು, ಜುಲೈ ಆಗಸ್ಟ್ ತಿಂಗಳಲ್ಲಿ ನೆಲವು ಸ್ವಲ್ಪ ತಣ್ಣಗಾಗಿ ಮಳೆಗಾಲವಾಗಿರುವಾಗ ಸುಮಾರು ಒಂದು ವರುಷದ ಸಸಿಗಳನ್ನು ತಕ್ಕಿಂಡು ನಾಲು ನಾಲ್ಕು ಗದಗಳ ಅಂತರದಲ್ಲಿ ಸಾಲಾಗಿ ನೆಡಬೇಕು ಇದನೇ ವರ್ಷದಲ್ಲಿ ಪ್ರತಿ ಎರಡನೇ ಗಿಡವನ್ನು ಕಿತ್ತು ಬೇರೆಯದು ಕಡೆ ನೆಡಬೇಕಾಗುವದು. ಮೊದಲೇ ಎಂದೆಂದು ಗಿಡಗಳ ಜೊರದ ಲ್ಲಿ ಸಾಳಬಾರದೇ ಎಂಬು ಹೇಳಿದರೆ, ಹತ್ತರವಾಗಿದ್ದರೆ ಒಂದರ ನೆ ರಳು ಮತ್ತೊಂದಕ್ಕೆ ಬೆಳವಿಗೆಯಲ್ಲಿ ಸಂಕಾಯವಾಗಿರುವ ಕಾರಣ ಸನಿಹಪಾಗಿ ನೆಡುವದು ಅವಶ್ಯವಾಗಿದೆಯೆಂದು ತಿಳಿಯತಕ್ಕದ್ದು. ಹೀಗೆ ಕಿತ್ತು ನೆಡತಕ್ಕ ಕಾಲಕ್ಕೆ ಬರುವದರೊಳಗಾಗಿ ಗಿಡಗಳಿಂದ ಬೀಜವು ಬಿದ್ದು ಸುತ್ತಲೂ ಸಣ್ಣ ಸಸಿಗಳು ಹುಟ್ಟಿರುವವೆ. ಸಣ್ಣ ಗಿಡಗಳನ್ನು ದಸಗಳು ಮೇಯುವದೆಂಬ ಭಯವೂ ಇಲ್ಲ.

ರಬ್ಬರನ್ನು ತೆಗೆಯುವ ಕ್ರಮ

ಮರಕ್ಕೆ ಐದು ವರುಷಗಳು ತುಂಬಿದ ಮೇಲೆ ಅದರಿಂದ ರಸವನ್ನು ತೆಗೆಯಬೇಕು. ಈ ರಸವು ಗಟ್ಟಿಯಾಗಿ ರಬ್ಬರಾಗುವದು ರಸಕೆಡುವ ಕಾಲಕ್ಕೆ ಮರವು ಬುಡದಲ್ಲಿ ಸುಮಾರು ನಾಲ್ಕು ಅಡಿಗಳ ಗಾತ್ರವಾಗಿರುವದು, ಮತ್ತು ಕವಲೊಡೆದಿರುವ ಸ್ಥಾನದಲ್ಲಿ ೭ ರಿಂದ ೧೦ ಅಡಿಗಳ ಸುತ್ತಳತೆಯಾಗಿರುವದು. ಬುಡದಲ್ಲಿ ಒಬ್ಬ ಪುರುಷನ ಪ್ರಯತ್ನದಷ್ಟು ಎತ್ತರದೊಳಗಾಗಿಯೇ ರಸ ತೆಗೆಯತಕ್ಕದ್ದು. ಇದಕ್ಕೆ ಜುಲೈ ತಿಂಗಳಿಂದ ಸುಮಾರಿ ಜನವರಿ ತಿಂಗಳವರಿಗೂ ಎಲೆಗಳಿರುವ ಕಾಲವೇ ತಕ್ಕ ಕಾಲವು. ರಸವನ್ನು ತೆಗೆಯುವ ಕ್ಕೆ ಮುಂಚೆ ಹೊರಗಣ ತಿಗದನ್ನು ತೆಗೆದು, ಒಳಗಣ ತಿಗದು ನುಣು ಪಾಗಿಯೂ ಕಾಟೆಯಾಗಿಯೂ ಕಾಣುವಹಾಗೆ ಮಾಡಬೇಕು. ರಸ ತೆಗೆಯುವದಕ್ಕೆ ಮುಂಚೆ ಆ ಭಾಗವನ್ನು ಉಪ್ಪು ನೀರಿನಿಂದಾಗಲಿ, ನಿಂಬೆ ರಸದಿಂದಾಗಲಿ ತೊಳೆಯುವದು ಒಳ್ಳೆಯದು ಗುಂದು ಸೂಜಿ ಯಂಥ ಸ್ವಲ್ಪ ಮಾತ್ರ ಕೆರದರೆ ರಸವೆ ಹೊರಟು ಹರಿದು ಬರಬೇಕು. ಇದು ಗಟ್ಟಿಯಾಗುವದಕ್ಕೆ ಮುಂಚಿತವಾಗಿ ಅದನ್ನು ಹಿಡಿಯುವದಕ್ಕಾಗಿ ಮರದ ಬುಡದ ಸುತ್ತಲೂ ಇಟ್ಟಿರುವ ಪಾತ್ರೆಗಳಲ್ಲಿ ಸ್ವಲ್ಪ ರುಚಿಯಾದ ನೀರನ್ನು ಇಟ್ಟಿದ್ದರೆ ಸಾಕು ರಸವು ಬೆಳ್ಳಗೆ ೬ ರೀತಿ ೪ ಗಂಟೆಯವರಿಗೂ ಧಾರಾಳವಾಗಿ ಬರುತ್ತಿರುವದು. ತಿಗದನ್ನು ಬಹು ಆಳವಾಗಿ ಕೆತ್ತುವದರಿಂದಾಗಲಿ ರಸವೆಲ್ಲಾ ಒಂದೇ ಕಾಲವೆ ಯತಾಗಿ ಹರಿದು ಬರುವಂತೆ ಕಂಡಾ ಬಟ್ಟೆ ನೀಳುವದರಿಂದಲಾಗಲಿ ಮರಕ್ಕೆ ಹಾನಿಯೇ ಹೊರತು ಪ್ರಯೋಜನವೇನೂ ಇಲ್ಲ ಹೊರ ಗಣ ತಿಗದನ್ನು ತೆಗೆದು ಒಂದು ಅಂಗುಲದ ಆರು ಭಾಗದಲ್ಲಿ ಒಂದು ಭಾಗದಷ್ಟು ಆಳವಾಗಿ ಕೆರದು ಗಾಯವಮಾಡಿದರೆ ಸಾಕಾಗಿ ದೆ ರಕತೆಗೆಯುವದಕ್ಕೆ ಉಪಯೋಗಿಸತಕ್ಕ ಆಯುಧಗಳಾಯೇ ಗೃವಾಡಿಲ್ಲೆಗಳಿಗಿರಬೇಕು. ಈ ವಿಷಯದಲ್ಲಿ ಇನ್ನೂ ಹತ್ತಷ್ಟು ತಿಳುವಳಿಕೆಗೆ ಬಂದಿಲ್ಲವಾದರೂ ಈ ಮರದ ದೃಢಸ್ವಾಯವು ಮುಂದೆ ವೈದ್ಧಿಗೆ ಬಂದಹಾಗಲ್ಲಾ ಫಲವನ್ನು ಉತ್ಕೃಷ್ಟರೀತಿಯಲ್ಲಿ ಹೊಂದ ತಕ್ಕ ಉಪಾಯಗಳೂ ಇತರ ತಿಳುವಳಿಕೆಗೆ ಕಾರುವದರಲ್ಲಿ ಸಂಕಯ ವಿಲ್ಲ. ಈ ವೃಕ್ಷಸಾಯದಿಂದ ನಮ್ಮ ಸಂಸ್ಥಾನದ ಆದಾಯವು ಅಪರಿಮಿತವಾಗಿ ಹೆಚ್ಚಬಹುದೆಂಬು ನಂಬಿತಕ್ಕದಾಗಿದೆ ಬೆಂಗಳೂರಿನ ಲಾಲ್‌ಬಾಗಿನಲ್ಲಿ ಉತ್ಪನ್ನಮಾಡಿ ಪರಿಶೋಧಿಸಿದ್ದರಲ್ಲಿ ರಬ್ಬರು ಒಳ್ಳೇ ಗುಣವುಳ್ಳದೆಂದೂ ಒಂದು ಪೌಂಡಲ್ಲಿ ವರ್ಷ ಒಂದಕ್ಕೆ ಸುಮಾ ರು ೬ ಪೌನು ತೂಕದಷ್ಟು ರಬ್ಬರು ಉತ್ಪನ್ನವಾಗುತ್ತೆಂತಲೂ, ಇದರಿಂದ ಮರದ ಎಲವು ಎಷ್ಟುಮಾತ್ರಕ್ಕೂ ಕಡಮೆಯಾಗಲಿಲ್ಲವೆಂತಲೂ, ಇಂಗ್ಲಾಂಡಿನಲ್ಲಿ ಪೌನು ತೂಕಕ್ಕೆ ಮೂರು ಷಿಲಿಂಗು ಬೆಲೆ ಕಟ್ಟುವದರಂತೂ ಗೊತ್ತಾಗುತ್ತೆ. ಇದರಿಂದ ವರ್ಷದಲ್ಲಿ ಮರಸ್ಥಂ ದಕ್ಕೆ ೧೫ ರೂಪಾಯಿಗಳ ಉತ್ಪತ್ತಿಯಹುದಂತಾಯಿತು. ಇದನ್ನು ಆ ವರ್ಷ ೧೩ ಸಾರಿ ಕೊಯಿತು ರಸ ತೆಗೆದರೆಂದು ತಿಳಿತು ಬಂದಿದೆ ಅತರ ವಯಸ್ಸು ಸುಮಾರು ೧೦ ವರ್ಷ. ಈಚಲ ಮರದಲ್ಲಿ ರಸವನ್ನು ತೆಗೆಯಗೊಡಿಸಿ ಪ್ರಜೆಗಳ ಐಡ್ಡಿಯನ್ನು ಕೆಡಿಸುವದಕ್ಕಿಂತ ರಬ್ಬರು ಮರಗಳನ್ನು ಬೆಳಸಿ ವ್ಯಾಪಾರಾಭಿವೃದ್ಧಿಗೆ ಅವಕಾಶವನ್ನು ಕೊಡ ವದು ನಾಗರೀಕರಾದ ಪ್ರಜೆಗಳಿಗೆ ಸಲ್ಲತಕ್ಕ ಕರ್ತವ್ಯವಾಗಿ ದೆಯೆಂದು ಹೇಳಲು ಅಭ್ಯಂತರವೇನು ?

ದೇವರ ರಾಜ್ಯ.

ದಿನಸ ತುಂಬಿತು, ದೇವರ ರಾಜ್ಯವು ಸವಿಾಪವಾಯಿತು, ನಿಮ್ಮ ಮನಸ್ಸನ್ನು ದೇವರ ಕಡೆಗೆ ತಿರಿಗಿಸಿಕೊಂಡು ಸುವಾರ್ತೆಯನ್ನು ನಂಬಿರಿ.

ದೇವರ ರಾಜ್ಯವು ಯಾವಾಗ ಬರುವದೆಂದು ಫರಿಸಾಯರು ಯೇಸುಸ್ವಾಮಿಯನ್ನು ಕೇಳಿದಾಗ, ಆತನು ಅವರಿಗೆ ಪ್ರತ್ಯುತ್ತರವಾಗಿ—

ದೇವರ ರಾಜ್ಯವು ಕ್ಷಣ್ಣಿಗೆಯಾಗಿ (ಅಂದರೆ ಆಡಂಬರದಿಂದ) ಬರುವದಿಲ್ಲ ಇದಲ್ಲದೆ ಜನರು ಇಗೋ ಇಲ್ಲಿ, ಅಲ್ಲಿ ಎಂದು ಹೇಳುವದಿಲ್ಲ. ಯಾಕಂದರೆ, ದೇವರ ರಾಜ್ಯವು ನಿಮ್ಮಲ್ಲಿಯೇ ಇದೆ, ಕಂಡಿರಾ ? ಎಂದು ಹೇಳಿದನು.

ನನ್ನ ರಾಜ್ಯವು ಈ ಲೋಕದ್ದಲ್ಲ.

ತಿನ್ನುವದೂ ಕುಡಿಯುವದೂ ದೇವರ ರಾಜ್ಯದ ಸಾರವಲ್ಲ; ನೀತಿ, ಸಮಾಧಾನ, ಪವಿತ್ರಾತ್ಮನಿಂದಾಗುವ ಆನಂದ, ಇವೇ ಅದರ ಸಾರ. ಇವರಿಂದ ಕೂಡುವವನಾಗಿ ಕ್ರೀಸ್ತನ ಸೇವೆಯನ್ನು ಮಾಡುವವನು ದೇವರಿಗೆ ಮೆಚ್ಚಿಕೆಯಾದವನಾಗಿಯೂ ಮನುಷ್ಯರಿಗೆ ಪರಿಕೋಧನೆಯಿಂದ ಸಮ್ಮತನಾಗಿಯೂ ಇರುವನಷ್ಟೆ.

ಪರಲೋಕರಾಜ್ಯವೆ ಹೊಲದಲ್ಲಿ ಹುಳಿಟ್ಟ ಪ್ರವ್ಯಕ್ಕೆ ಹೋಲಿಕೆಯಾಗಿದೆ ಒಬ್ಬನು ಅದನ್ನು ಕಂಪುಳಿಂಡು ಮುಟ್ಟಿಟ್ಟನ್ನು, ಆದರಿಂದಾದ ಸಂತೋಷದಿಂದ ತನ್ನ ಬದುಕನ್ನೆಲ್ಲಾ ಮಾರಿ, ಆ ಹೊಲವನ್ನು ಕೊಂಡುಕೊಂಡನು.

ಪರಲೋಕರಾಜ್ಯವೆ ಉತ್ತಮವಾದ ಮುತ್ತುಗಳನ್ನು ಹುಡುಕುವ ವ್ಯಾಪಾರನ್ನನಿಗೆ ಹೋಲಿಕೆಯಾಗಿದೆ. ಅವನು ಬಹು ಬೆಲೆಯುಳ್ಳ ಒಂದು ಮುತ್ತನ್ನು ಕಂಡು ತನ್ನ ಬದುಕನ್ನೆಲ್ಲಾ ಮಾರಿ, ಬಂದು, ಅವನ್ನು ಕೊಂಡು ಕೊಂಡನು

ದೇವರರಾಜ್ಯದಲ್ಲಿ ಪ್ರವೇಶಿಸುವದು ಜಬ್ಬಗೆ?—ಸ್ವನೀತಿಸ್ಥನು.—ಒಬ್ಬನು ತಿರಿಗಿ ಹುಟ್ಟಿದ್ದಿದ್ದರೆ ಅವನು ದೇವರ ರಾಜ್ಯವನ್ನು ಕಾಣಲಾರನು ಒಬ್ಬನು ನೀರಿನಿಂದಲೂ ಆತ್ಮದಿಂದಲೂ ಹುಟ್ಟದಿದ್ದರೆ ದೇವರ ರಾಜ್ಯಕ್ಕೆ ಸೇರಲಾರನು. ದೇಹದಿಂದ ಹುಟ್ಟಿದ್ದ ದೇಹವೇ, ಆತ್ಮ ದಿಂದ ಹುಟ್ಟಿದ್ದು ಆತ್ಮವೇ ತಿರುಗಿ ಹುಟ್ಟಬೇಕೆಂದು ಹೇಳಿ ದ್ದರಿಂದ ಆಶ್ಚರ್ಯ ಪಡ ಬೇಡ ಗಾಳಿಯು ಮನಸ್ಸು ಬಂದಹಾಗೆ ಬೀಸುತ್ತದೆ, ಅದರ ಸದ್ದವನ್ನು ಕೇಳಿ ತ್ತೀರಿ; ಆದರೆ, ಅದು ಎಲ್ಲಿಂದ ಬರುತ್ತದೋ, ಎಲ್ಲಿಗೆ ಹೋಗುತ್ತದೋ, ನಿಮಗೆ ತಿಳಿಯದು; ಆತ್ಮದಿಂದ ಹುಟ್ಟಿದವರೆಲ್ಲರೂ ಆದರಂತೆಯೇ.

ಕ್ರಿಯರು ಯೇಸುವಿನ ಬಳಿಗೆ ಬಂದು—ಪರಲೋಕರಾಜ್ಯದಲ್ಲಿ ಹೆಚ್ಚಿನವನು ಯಾರು ? ಎಂದು ಕೇಳಲು, ಆತನು ಚಿಕ್ಕ ಮಗುವನ್ನು ಹತ್ತರಕ್ಕೆ ಕರೆದು, ಅವರ ನಡುವೆ ನಿಲ್ಲಿಸಿ ಅವರಿಗೆ ಹೇಳಿದನು —

ನೀವು ತಿರುಗಿಕೊಂಡು ಚಿಕ್ಕ ಮಕ್ಕಳಂತೆ ಆಗದೆ ಹೋದರೆ, ನೀವು ಪರಲೋಕ ರಾಜ್ಯವನ್ನು ಸೇರುವದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಜಾಗಾದರೆ ಯಾರು ಈ ಚಿಕ್ಕ ಮಗುವಿನ ಹಂತೆ ತನ್ನನ್ನು ತಗ್ಗಿಸಿಕೊಳ್ಳುತ್ತಾನೋ, ಅವನೇ ಪರಲೋಕ ರಾಜ್ಯ ದಲ್ಲಿ ಹೆಚ್ಚಿನವನು.

ಕೆಲವರು ಚಿಕ್ಕ ಮಕ್ಕಳನ್ನು ಆತನ ಬಳಿಗೆ ತೆಗೆದುಕೊಂಡು ಬಂದು, ಆತನಿಂದ ಅವುಗಳನ್ನು ಮುಟ್ಟಿಸ ಬೇಕೆಂತಲು ಕೈಯಿಟ್ಟು ತಂದವರನ್ನು ಗದರಿಸಿದರು. ಆದರೆ ಯೇಸು ಅದನ್ನು ಕಂಡು, ಕೋಪಗೊಂಡು ಅವರಿಗೆ—

ಚಿಕ್ಕ ಮಕ್ಕಳನ್ನು ನನ್ನ ಹತ್ತರಕ್ಕೆ ಬರಗೊಡಿರಿ; ಅವುಗಳಿಗೆ ಅಡ್ಡಿಮಾಡಬೇಡಿರಿ; ದೇವರ ರಾಜ್ಯವು ಇಂಥವರದೇ. ನಿಮಗೆ ನಿಜ ವಾಗಿ ಹೇಳುತ್ತೇನೆ, ಕೇಳ್ವರಿ, ಚಿಕ್ಕ ಮಗುವಿಗೆ ಸಮಾನವಾಗಿ ಯಾ ವನು ದೇವರ ರಾಜ್ಯವನ್ನು ಅಂಗೀಕರಿಸುವದಿಲ್ಲವೋ ಅವನು ಅದ ರಲ್ಲಿ ಸೇರುವದೇ ಇಲ. ಎಂದು ಹೇಳಿ ಅವುಗಳನ್ನು ಅಪ್ಪಿಕೊಂಡು ಅವುಗಳಮೇಲೆ ಕೈಯಿಟ್ಟು ಆಶೀರ್ವದಿಸಿದನು.

ತಂದೆಯೇ, ಭೂಲೋಕಗಳ ಒಡೆಯನೇ, ನೀನು ಜ್ಞಾನ

ರಂಗೂನ್ ನಗರದ ಒಳ ಭೂರ್ಯವಾನಾ ಎಂಬ ರೈಲ್ವೆ ಸ್ಟೇಷನ್ನಿನಲ್ಲಿ ಕಳೆದ ವಾರ ಬೆಂಕಿಬಿದ್ದು, ಅರ್ಧಗಂಟೆಯೊಳಗಾಗಿ ಸುಮಾರು ಮನೆಗಳು ಸಾವಾನು ಸಹಿತ ಉರಿದು ಹೋದವು

****

ಸ್ಪೇನಾರ್ದದ ಡಿಸ್ಟ್ರಿಕ್ಟ್‌ನಲ್ಲಿ ಚಿಟ್ಟೆಗಳ ಆಪತ್ತಾಂತ್ಯವು ವಿವರಿಸಲ್ಪಟ್ಟಿದೆ. ಪವಿಹಾನಗಳಲ್ಲಿ ರೈತರು ಮಾಡಿರುವ ಬೆಳೆಯನ್ನು ಹಾಳಾಗಿ ತಿಂದು ಧ್ವಂಸಮಾಡಿವೆ. ಯಾವ ಭೂರೀ ಗಿಡವನ್ನೂ ಹಸುರೆಲೆಯಾಹಾರವೂ ಬಿಟ್ಟಿಲ್ಲ. ಖಡೆ ರೈತರ ನಷ್ಟವನ್ನು ಪರಿಹಾರವನ್ನೂ ಎಷ್ಟು ಹೇಳಿದರೂ ತೀರದು.

****

ಕಳ್ಳತ್ತೆಯಿಂದ ವಿಲಾಯತಿಗೆ ಟಾಕ್ಟ್ಯಿರ್ಯರ್ ಎಂಬ ಜಾಜಿ ಎಂಟು ಆನೆಗಳನ್ನು ಕಳುಹಿಸಿಕೊಟ್ಟರು. ಪಾರಿಯಲ್ಲೇ ಆ ಆನೆಗಳು ಪಾಂತಿ ಹಿಡಿದು ಸತ್ತುಹೋದವು. ಇದು ಮತ್ತೆ ಸರ್ಕಾರ ಅಂತರ್ ಪಟ್ಟಣದಲ್ಲಿ ಜಾಜಿ ಇಳಿದವು. ಇನ್ನೊಂದು ಆನೆ ಇಳಿದಮೇಲೆ ಮೃತಪಟ್ಟಿತು. ಅಂತು ೪ ಕ್ಕೆ ನಾಲ್ಕು ತಲೆ ಉಳಿಯಿತು.

****

ಳೆದ ಗುರುವಾರ ಸಮರಾತ್ರಿಯಲ್ಲಿ ರಂಗೂನ್ ನಗರದ ಲ ಎಂಬ ನೊಪಲೆಗೆ ಬೆಂಕಿಬಿದ್ದು, ಅರಿವಾಸಿ ಖಿಸ್ತಿಯಲ್ಲಾ ಬೆಟ್ಟಿಹೋಯಿತು. ೧೯೦ ಮರದ ಮನೆಗಳೇ ಸುಟ್ಟುಹೋದವು. ಸುಮಾರು ೭ ಲಕ್ಷ ರೂಪಾಯಿನ ಸಾವಾನು ಖಂಡಿಯಾಯಿತಂತ ಇನ್ನು ದೊಡ್ಡ ಬೆಂಕಿಯನ್ನು ಕಳೆದ ೨೫ ವರುಷಗಳಿಂದ ಕಂಡಿರಲಿಲ್ಲವೆಂತಲೂ ಹೇಳುತ್ತಾರೆ.

****

ಮದರಾಸ್ ಪಟ್ಟಣದಲ್ಲಿ ಸರ್ಕಾರದವರು ಜಾಜಿ ನಿಲ್ದಾಣ ಸ್ಟೇಶನ್ನು ಕಟ್ಟಿಸುತ್ತಿದ್ದಾರೆ. ಸಮುದ್ರದೊಳಗಿಂದ ಮಣ್ಣು ತೆಗೆದಾಕಿ ಗಟ್ಟಿ ಭೂಪ್ರಾಯವನ್ನು ಕಾಣಿಳುವುದಕ್ಕೆ ಸರ್ಕಾರ ವಿಲಾಯತಿಯಿಂದ ಒಂದು ಯಂತ್ರವನ್ನು ತರಿಸಿದಾರೆ. ಆ ಒಂದು ಸಲಕ್ಕೆ ಸಮುದ್ರದ ತಳದಿಂದ ೯೦೦ ಟನ್‌ಗಳ ಭಾರ ಮಣ್ಣನ್ನು ಎತ್ತಿ ಹೊರಕ್ಕೆ ಸುರಿವೆದು. ಈ ಯಂತ್ರಕ್ಕೆ ೬,೯೦೦ ರೂಪಾಯ ಬರ್ಚಾಯಿತು.

****

ವಿರ್ಜ ಆಫ್ರಿಕಾತ್ಯದಲ್ಲಿ ಜೆರ್ಮಾ ಇಲಾಖೆಯವರು ಈಗಲ ೩೦೦ ಳನ್ನು ಹಿಡಿದು ತರಪ್ತುಮಾಡಿ ವರ್ತಕರಿಗೆ ಬೀಳಿ ಮಾಡಿ ತ್ತಾರೆ. ವರ್ತಕರು ಅವುಗಳನ್ನು ಕಾತುಗಳಲ್ಲಿ ಬಿಟ್ಟು, ತೊಲೆ ಪಾಡಿದವುಗಳನ್ನು ಅವುಗಳಿಂದ ಎಳಿಸಿ, ಇತರ ದೇಶಗಳಿಗೆ ತ್ತಾರೆ. ತುಂಬಾ ಲಾಭ ಸಂಪಾದನೆಮಾಡಿಕೊಳ್ಳುತ್ತಿದಾರೆ. ಆಗಲೆನಿಗಳು ಒಳ್ಳುವುದು ಆ ಪ್ರಾಂತ್ಯ ಹೆಚ್ಚಿದುದರಿಂದ ಅವು ಗಳ ಬೆಲೆಯು ದಿನೇದಿನೇ ಸುಲಭವಾಗುತ್ತಿದೆ.

****

ಮದರಾಸ್ ಪಟ್ಟಣದ ಮಿಂಟ್ ಬೀದಿಯಲ್ಲಿ ಪರಮಹಂಸ ರಾ ಪರಿವ್ರಾಜಕನೆಂಬ ಯೋಗಿಯು ತನ್ನ ಮನೆಯಲ್ಲಿರುವಾನ್ಯೆ ಯಜ್ಞೋ ಪಾಸು ಎಂಬ ಭಿಪ್ರಾಯಗಳು ಆ ಪಾರ್ಥವಾಗಿ ಉಪದೇಶನ ಎತ್ತು ಪ್ರತಿಜ್ಞೆಯನ್ನು ಕೊಂಡು, ಭಿಕ್ಷ ಕೊಡುತ್ತೇನೆಂದು ಆಸೆಹುಟ್ಟಿಸಿ ಅವ ಸ್ಥ ಮನೆಯೊಳಕ್ಕೆ ಬರಮಾಡಿಕೊಂಡು, ಬಾಗಿಲು ಮುಚ್ಚಬಿಟ್ಟ ಟಿಯೂ, ಆ ಹೆಂಗಸನ್ನು ಹಿಂಸೆಮಾಡದನೆಂತಲೂ ಧುಮಾದು ಯಾಗಿದೆ. ಪೋಕದ್ದಮೆಯನ್ನು ಮ್ಯಾಜಿಸ್ಟ್ರೇಟರು ದರ್ಯಾ ಸುತ್ತಿದ್ದಾರೆ.

****

ಕ್ಯತ್ತಾ ಪಟ್ಟಣದ ಪಾರ್ಕ್‌ಸ್ಟ್ರೀಟ್ ಎಂಬ ರಸ್ತೆಯಲ್ಲಿ ಬೈಸಿಕಲಿನಿಟಿಯವರು ಹಳ್ಳವನ್ನು ಮಾಡಿ, ತಿರುಗಾದುವವರಿಗೆ ತ್ತಿರುವ ಬೈಕ್ಕನ್ನು ಇಡದೆ ಹೋದಕಾರಣ ಮಿಸಸ್ ಟ್ರಾಂಪ್ ಅಂಗಿ ಗಾಡಿಯೊಳಗೆ ಕುಳಿತು ಅಲ್ಲಿ ಹೋದಾಗ ಗಾಡಿ ಹಳ್ಳದೊ ನ್ಯೆ ಸುಗುಚ್ಚಿಕೊಂಡು, ತುಂಬಾ ನಷ್ಟಪಟ್ಟರೆಂತಲೂ, ಇದಕ್ಕಾಗಿ ಬೈಸಿಕಲಿಟಿಯವರಿಂದ ತನ್ನ ಹೆಂಡತಿಗೆ ೩,೫೦೦ ರೂ. ನಷ್ಟ ಸ್ಥೆ ಕೊಡಿಸಿಕೊಡುವೆಂತಲೂ ಬಳೆಯ ಗಂಡನು ಅಲ್ಲಿನಸಹ್ಯ ಟ್ರಿಬ್ಯೂನಲ್ಲಿ ದಾವಾ ಮಾಡಿರುತ್ತಾನೆ.

****

ಒಂದು ಬ್ರಾಹ್ಮಣ ತ್ರಿನುಷಕ್ಕರಲ್ಲಿ ಪತಿಯು ಜೀವಂತನಾಗಿರು ಗೇ ತನಗೆ ತಲೆಯನ್ನೆಲ್ಲಾ ಶುದ್ಧನಾಗಿ ಬೋಳಿಸುವೆದಕ್ಕೆ ಯಾ ನಸ್ತ್ರದಲ್ಲಾದರೂ ಅಧಾರವೆಂದೆ ? ಅಥವಾ ಹಾಗೆ ಬೋಳಿಸ ಳೆಯ ವೈದ್ಯಾಚಾರವೇನಾದರೂ ಇರುವೆನೋ ? ಇದಕ್ಕೆ ಪಾ ಸ್ಪೋಕಾದ ಉಪಾಪಹರಣೆಯನ್ನು ಕೊಡುವೇಕೆಂದುದಾಗಿ ಒಬ್ಬ ಬ್ರಾಹ್ಮಣನು ಪ್ರಶ್ನೆಮಾಡಿದನು. ಇನ್ನೊಬ್ಬ ಬ್ರಾಹ್ಮಣನು ನ್ನು ನೋಡಿ, ಯಾವ ವಾಸ್ತ್ರವಲ್ಲೂ ಈ ಸಂಗತಿ ಹೇಳಿಲ್ಲವೆಂ ಾಗಿ ಉತ್ತರ ಕೊಟ್ಟಪಾನೆ.

****

ಹಿಂದಿನ ವಾರ ಸ್ಪೇನಿನಲ್ಲಿ ೨೬,೫೫೯ ಜನರು ಸಿಂದುಸ್ಥಾನ ನಿಮೃತಪಟ್ಟರು. ಈ ವಾರ ಈ ಉದ್ರವಲ್ಲಿ ೨೬,೪೦೦ ಮಂದಿ ಸಾದರು. ಮುಖ್ಯವಾದ ಸ್ಥಳಗಳೂ ಸಂಖ್ಯೆಗಳೂ —ಪಂಜಾ ೯೯೯, ಬಾಯವ್ಯಪ್ರಾಂತ್ಯ ೬,೧೯೩, ಬೊಂಬಾಯಿ ೨ ಸ್ಟೆಗಳು ೫,೦೩೪, ಬಂಗಾಳ ೧೯೩೦, ಮಧ್ಯಸಂಡಿಯಾ ೪೪೫, ರಾಜಪುತಾನ ೧,೦೦೫, ಮಧ್ಯಪ್ರಾಂತ್ಯಗಳು ೩೦೭, ಹೈದ್ರಾಬಾಯಿಪಟ್ಟಣ ೭೦೩, ಳ್ಳತ್ತಾ ಪಟ್ಟಣ ೫೦೦, ಕರಾಚಿ ೧೫, ಕಾಶ್ಮೀರ, ಎತರು ವಾರಗಳಲ್ಲಿ ೧,೦೬೫.

ಟಬೆಟ್ ಪ್ರಾಂತ್ಯ ಇಂಗ್ಲಿಷ್ ಸೈನಿಕರು ಹೋಗಿ ಕಾರಾಳು ಮಾಡಿಕೊಂಡು ಖರಬೇಕೆಂದು ಗದಾಂಪ್ಯಯಲ್ಲಿ ಪಾನ್ಯ ಜಾಕಿಕೊಂಡಿದಾರೆ. ಅಂರ್ಡ ಎಂಬ ಅಧಿಕಾರಿಯು ಕರ್ನಲ್ ಯಂಗ್ ಹಸ್ಬಂಡ್ ಯವರಿಗೆ ಕಾಗದ ಖರಿದಿರುವದೇಸಂದರೆ—ಟಬೆಟ್ ಅಧಿಪತಿ ಯಾದ ದಲಾಯಿಲಾಮಾ ಯವರ ಖಳಗೆ ಹೋಗಿ ಅವರ ಸಂಗೆದ ಇಂಡಿಯಾ ಗವರ್ನಮೆಂಟ್ಸನವರ ಉದ್ದೇಶವನ್ನು ಕುರಿತ ಚರ್ಚೆ ಮಾಡಿದೆನು. ಅವರು ನಾನು ಹೇಳುವಂತೆ ಒಪ್ಪಿಕೊಂಡಿದಾರೆ. ಇ ನ್ನು ಮುಂದು ವಾಗಿಗಳೊಳಗಾಗಿ ಟಿಬೆಟ್ಟಿನ ಅಧಿಕಾರಿಯೂ ಬಂದು, ನಿಮ್ಮ ಸಂಗಡ ಕರಾರು ವಿಷಯವನ್ನು ಇತ್ಯರ್ಥ ಮಾಡಿ ಕೊಳ್ಳುವೆವು ಎಂಬುದೇ.

****

ಟಬೆಟ್ ರಾಜ್ಯಕ್ಕೆ ಹೋಗಿರುವ ಇಂಗ್ಲಿಷ್ ಸೈನಿಕರು ಈಗ ಗ ಯಾಂಬ್ಸೆ ಎಂಬಲ್ಲಿ ರಾಜ್ಯ ಜಾಕಿಕೊಂಡಿದಾರೆಪ್ಪೆ. ಇವರು ಅಲ್ಲಿಗೆ ಹೋಗುವಾಗ್ಯೆ ಮಾರ್ಗದಲ್ಲಿ ಟಬೆಟ್ ಸೈನಿಕರು ಬಿಟ್ಟುಹೋದ ಮದ್ದಿನ ಮನೆಗಳನ್ನು ಸುಟ್ಟುಬಿಟ್ಟರು. ಈ ಸಂದರ್ಭದಲ್ಲಿ ಅನಾ ಹುತವಾಗಿ ನಾಲ್ವರು ಇಂಗ್ಲಿಷ್ ಕಿಪಾಯಿಗಳು ಪ್ರಾಣಕಳೆದುಕೊಂಡರು; ಒಬ್ಬ ಹುದ್ದೆದಾರನಿಗೆ ಪೂರ್ತಿ ಗಾಯವಾಯಿತು. ಇನ್ನೊಂದು ಸಂ ದರ್ಭದಲ್ಲಿ ೧೨ ಮಂದಿ ಇಂಗ್ಲಿಷ್ ಕಿಪಾಯಿಗಳಿಗೆ ತುಂಬಾ ಗಾಯವು ವಾಗಿದೆ.—ಭೂತಾ ರಾಜ್ಯದ ರಾಜರುಗಳ ಸೈಕೆ ಇಟ್ಟಿರುವ—ಟಬೆಟ್ಟಿನವರು ಬೇಕೆಂದು ತಮಗೆ ತಾವೇ ನಷ್ಟವನ್ನುಂಟುಮಾಡಿಕೊಳ್ಳುತ್ತಿದಾರೆಂದು ಕರ್ನಲ್ ಯಂಗ್‌ಹಸ್ಬಂಡ್‌ಯವರಿಗೆ ಕಾಗದ ಖರೆದರು. ಜೋಂಗ್ಸ್‌ಪ್ಪಾಬೋನ್ ಎಂಬ ರಾಜನು ಈ ಇಂಗ್ಲಿಷ್ ಸೈನ್ಯಾಧಿಪತಿಯನ್ನು ಕಂಡುಹೋಗಲು ಗದಾಂಪ್ಟಿಗೆ ಬರುವವನಾ ಗಿದಾನೆ.

****

ಕಳೆದ ವಾರ ಜೋಂಬಾಯಿ ಪಟ್ಟಣದ ಮ್ಯುನಿಸಿಪಲ್ ಕಮಿಷ ನರರು ಆಫೀಸಿನಲ್ಲಿ ಸಭೆಸೇರಿ, ನಗರಾಭಿವೃದ್ಧಿಯು ವಿಚಾರವನ್ನು ಳುತಿತು ನಾನಾ ವಿಷಯಗಳನ್ನು ಚರ್ಚಿಸುತ್ತಿರುವಾಗ್ಯೆ ಜೋಂಬಾ ಯಿನ ಹೆಲ್ತ್ ಆಫಿಸರಾದ ಡಾಕ್ಟರ್ ಖ್ರೂಕರ್‌ಯವರು ಒಂದು ಸಂ ಗತಿಯನ್ನು ಮೆಂಬರುಗಳಿಗೆ ಸೂಚಿಸಿದರು. ಮ್ಯುನಿಸಿಪಲ್ ಕಮಿಷ ರ್‌ರಾಜ್ ಮೆಃ ನಾಯಿಸ್‌ಯವರು ಎದ್ದು, ಅದಕ್ಕೆ ವಿರೋಧವಾಗಿ ಮಾತನಾಡಿ, ಖಂಡಿಸಿದರು. ಮೆಂಬರುಗಳೆಲ್ಲಾ ಮೆಃ ನಾಯಿಸ್ ಯವರ ಅಭಿಪ್ರಾಯವನ್ನೆ ಒಪ್ಪಿ, ಹೆಲ್ತ್ ಆಫಿಸರು ಸೂಚಿಸಿದ ವಿಷ ಯವನ್ನು ತಿರಸ್ಕರಿಸಿಬಿಟ್ಟರು. ಎಷ್ಟಾಂಗ್ ಪೂರೈಸಿದಮೇಲೆ, ಸೆಂಬ ಬರುಗಳೆಲ್ಲಾ ಆನ್ರೂ ಅಲ್ಲೇ ಇರುವಾಗ್ಯೆ ಡಾಕ್ಟರ್ ಖ್ರೂಕರ್‌ಯವರು ನೆ ನಾಯಿಸ್‌ಯವರನ್ನು ಒಂದು ಕೋಪಡಿಯೊಳಕ್ಕೆ ಕರೆಯಿಸಿಕೊಂಡು, ಅವರನ್ನು ಕೋಪಡಿಯಿಂದ ನೂಕಿ, ಬಹಳವಾಗಿ ಹೊಡೆದು ಹೊರಕ್ಕೆ ಬ್ಲಿಸಿದರು. ಈ ಸಂಗತಿಯನ್ನು ಛೀರ್‌ಮರ್ ರೂ, ನೈಸ್‌ಪೀರ್‌ಮರ್‌ರೂ, ಮ್ಯುನಿಸಿಪಲ್ ಕಮಿಷರ್‌ರುಗಳೂ ನೋಡಿ, ಡಾಕ್ಟರನ್ನು ಕರೆದು ಕೇಳಿದಾಗ ಅವರು—ಈತನು ನನ್ನ ನ್ನು ಖ್ರೂಕರ್ ಎಂದು ಕರೆದನು; ಡಾಕ್ಟರ್ ಎಂದು ಕರೆಯದೆ ನ ನಗೆ ಅವಮಾನ ಮಾಡಿದನು ಎಂತುದಾಗಿ ಹೇಳಿದರು. ತರುವಾಯ ಮೆಃ ನಾಯಿಸ್‌ರವರು ಮೇಲ್ಕಂಡ ಸಂಗತಿಯನ್ನೆಲ್ಲಾ ಆರ್ಜಿಯ ಲ್ಲಿ ಬರೆದು, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಹೆಲ್ತ್ ಆಫಿಸರ ಮೇಲೆ ಫಿರ್ಯಾದು ಮಾಡಿದಾರೆ. ಈ ಸಂಗತಿಯು ಬೊಂ ಬಾಯಿ ಪಟ್ಟಣದಲ್ಲಿ ಬಹಳ ಗಲಭೆಯನ್ನುಂಟುಮಾಡಿದೆ.

****

ಬಂಗಾಳಾ ಜ್ಯೋತಿಷ್ಕಾರನೆಂಬನು ೧೯೦೪ ನೆ ಏಪ್ರಿಲ್ ೧೫ ಕ್ಕೆ ಮುಗಿದ ಒಂದು ಸಂವತ್ಸರದಲ್ಲಿ ಪ್ರಪಂಚಕ್ಕೆ ಪ್ರಾಪ್ತವಾ ಗುವ ಅನಾಹುತಗಳನ್ನು ಗುಣಾಕಾರ ಮಾಡಿ ಈಗಲೇ ತಿಳಿಸಿರುತ್ತಾ ನೆ. ಇವನು ಹೇಳಿರುವಂತೆ ನಡೆವೆನೆಂದು ಯಾರೂ ನಂಬುವೇಕಾ ನ್ನಿಲ್ಲವಾದರೂ, ಆತನ ಬುದ್ಧಿ ಕಾರಬೆತೆ ಎಷ್ಟುಮಟ್ಟಿನದೆಂಬುದನ್ನು ತಿಳುಕೊಳ್ಳ ಬಹುದಾಗಿದೆ. ಆತ ಹೇಳಿರುವುದೇನಂದರೆ—ವಿಲಾಯತಿ ರಾಜ್ಯದಲ್ಲಿ ಮಂತ್ರಿಗಳು ಬದಲಾಗುವುದರಿಂದ ಅನೇಕ ಕೇಡುಗ ಳುಂಟಾಗುವವು ಫ್ರಾನ್ಸ್ ರಾಜ್ಯದ ಸೈ (ಪಸಿದ್ಧರೂ ವಿಲಾಯತಿಯ ಯಾವ ಸಹಾಯವನ್ನು ನೋಕಾಯುವುದಿಲ್ಲ. ವಿಲಾಯತಿಯಲ್ಲಿ ದಯಂಕ ರವಾದ ಸಂಚರಾಗಳಿ ಮುಳಿ ಸ್ಪಾಸ್ಪಾಗುತ್ತವೆ. ವಂಶಾಭಿವೃದ್ಧಿಯೇ ಬೊಡಲಾದ ಅಂಟು ಜಾಡ್ಯಗಳು ಕಾಣಿಸಿಕೊಂಡು ಬಹು ಪ್ರಜೆಗ ಳು ಲಯವಾಗುವರು. ಪ್ಲೇಗಿನ ಅವಾಂತ್ಯ ಬಹಳ ಕಡಿಮೆಯಾಗುತ್ತೆ. ಯುರೋಪ್, ಅಮೆರಿಕ ಇತರ ಅನೇಕ ಭಾಗಗಳಲ್ಲಿ (ಒಂಭತ್ ಸ್ಥಾನದಲ್ಲೂ) ಬೇಕೆ, ಭೂಕಂಪ ಮೊದಲಾದವುಗಳ ಬೆಸಲಾಟದ ಬಹಳವಾಗಿ ಪ್ರಾಣಹಿನಿಗಳು ನಾಶವಾಗುವವೆ. ಯುರೋಪ್ ಖಂಡ ದಲ್ಲಿ ಮಹಾ ಯುದ್ಧಗಳೆಂದು ಕೊಳ್ಳಬಿಕೊಳ್ಳುತ್ತಿರುವ ಇಬ್ಬರು ಮಹಾಪ್ರಭುಗಳು ಸತ್ತುಹೋಗುವರು. ದುಸ್ಟಗುಂಪಿನವರು ರಷ್ಯಾ ಚಕ್ರವರ್ತಿಯನ್ನೂ, ಫ್ರೆಂಚ್‌ಗಳ ಇಟಲಿ, ಸ್ಪೆಯಿನ್ ರಾಜ್ಯದ ಮೇರೆಗಳನ್ನೂ ಕೊಂದುಹಾಕಲು ಪ್ರಯತ್ನಮಾಡುವರು. ಪರ್ವತಗಳಲ್ಲಿ ಅಗ್ನಿಯು ಉದ್ರವವಾಗಿ ಪ್ರಾಣಾಪಾಯವುಂಟಾ ಪೂರ್ವಾಭಿದ್ಯೋತಕಗಳಲ್ಲಾಪಡೆದೋ ರಷ್ಯಾದವರು ಮಂಚೂರಿಯಾ ದೇ ಮೆಯನ್ನು ತಮ್ಮ ಸ್ವಾಧೀನದಲ್ಲೇ ಇಟ್ಟುಕೊಂಡಿರುತ್ತಾರೆ. ಅವರ ಅಧಿಕಾರವೆ ಇನ್ನೂ ಬಲವಾಗುವೆದು. ಅವರು ಇತರ ಯುರೋಪಿ ಯರ್ ರಾಜ್ಯಗಳ ವಿದೇರಿಕೆಯನ್ನು ಲಕ್ಷ್ಯಕ್ಕೆ ತರುವೆದಿಲ್ಲ. ಬ್ರಿಟಿಷ್ ರಾಜ್ಯವೆ ರಷ್ಯಾದವರ ಸಹಾಯವನ್ನು ಅಪೇಕ್ಷಿಸುವೆದು. ಹಿಂದು ಸ್ಥಾನದ ಯೆಲ್ಲೆಕಟ್ಟುಗಳಲ್ಲಿ ಯುದ್ಧಪ್ರಾಪ್ತವಾಗುತ್ತದೆ. ಮುಸಲ್ಮ ನ್ ರಾಜರು, ಕಾಬೂರ್, ಖಾಟ್ಮಾ, ಕಾತಿ, ಕಳ್ಳತ್ತೆ—ಈ ಪಟ್ಟಣಗಳಲ್ಲಿ ಬಹಳ ಗಲಭೆಯುಂಟಾಗುತ್ತೆ. ಜೋಬಾಯಿ, ಬರಿಸ್ಸಾ, ಕಳ್ಳತ್ತೆ ಗಳಿಗೆ ಮಳೆಯು ದೆಸೆಯಿಂದ ತುಂಬಾ ಅಪಾಯ ಸಂಭವಿಸುವೆದು. ಬರಿಸ್ಸಾ, ಬೀಡಾರ್, ಮದರಾಸ್, ಮಧ್ಯಪ್ರಾಂತ್ಯಗಳು, ವಾಯು ವ್ಯಪ್ರಾಂತ್ಯ, ಬಂಗಾಳಾ—ಈ ಭಾಗಗಳಲ್ಲಿ ಪ್ರಾವುಖ್ಯರಾಗುತ್ತದೆ. ಕೆಲ ವೆ ಮುಖ್ಯರಾದ ದೇಶೀಯ ರಾಜರಿಗೆ ಸಿಂಹಾಸನ ಪದಭ್ರಷ್ಟತೆಯು ಗುವೆದು. ಕಳ್ಳತ್ತೆಯಲ್ಲಿ ಕೆಲವು ಮುಖ್ಯಮುಖ್ಯ ಹುದ್ದೇದಾರರಿಗೆ ದುರ್ಮರಣ ಬರುತ್ತದೆ ಎಂಬುವುಗಳೇ.

ಹಾಲ್ಲೀಕು ವರ್ತಮಾನಗಳು.

ಮಂಜ್ಯ.—ಈ ಊರಲ್ಲಿ ಕೆಲವು ದಿನಗಳ ಹಿಂದೆ ಶಿಂಗರ್‌ಯ್ಯಂಗಾರರ ತೋಟದಲ್ಲಿದ್ದ ಅವರ ಜೋಡಿಗೆ ಸುಮಾರು ೩೦ ಜನ ಳ್ಳರು ನುಗ್ಗಿ ಅವರನ್ನು ಅವರ ಹೆಂಡತಿನ್ನು ಬಹಳ ಹೊಡೆದು ಹಿಂ ಸಪಡಿಸಿ ಅವರಲ್ಲಿ ಕೆಲವು ನಗದಾಭ್ಯಗಳನ್ನು ಕದ್ದು ಕೊಂಡು ಹೋ ದರು. ಇಲ್ಲಿನ ಇನ್‌ಸ್ಪೆಕ್ಟರು ಮತ್ತು ಪೊಲೀಸ್‌ಸಿಬ್ಬಂದಿ ಪತ್ತೆ ಮಾಡುವ ದಕ್ಕೆ ಯತ್ನಿಸುತ್ತಿರುತ್ತಾರೆ. ರೈಲ್ವೆ ಕಂಬಿಗಳನ್ನು ಎತ್ತಿ ಹಾಕಿದವ ರನ್ನು ಹಿಡಿದು ವಿಚಾರಣೆ ಮಾಡಿದ್ದರಲ್ಲಿ ಸೆಷನ್ ಕೋರ್ಟಿಗನ್ನೀ ಆ ಪರಾಧಿಗಳಿಗೆ ಬುಲಾಸೆಯಾಯಿತು. ಅದಕ್ಕಾಗಿ ಅವರು ಬಹಳ ಹಣ ಖರ್ಚು ಮಾಡಿದಾರೆಂದು ಹೇಳಿಕೊಳ್ಳುತ್ತಾರೆ. ಇಲ್ಲಿನ ಜನರು ೩ ತಿಂಗಳುಗಳಾದರೂ ಮನೆಗಳಿಗೆ ಹೋಗದೆ ಇದ್ದದ್ದು ಸಾಕಾಗಿ ಊರಿಗೆ ಹೋಗಿ ಮನೆಗಳನ್ನು ಹೊಕ್ಕಟ ಮಾಡುತ್ತಾ ಇದ್ದಾರೆ. ಆಗಲೇಕೆಲವರು ಊರಿಗೆ ಸೇರಿದರು. ಇನ್ನು ೪—೦೦ ದಿನಗಳಲ್ಲಿ ಎಲ್ಲರೂ ಸೇರುವಹಾಗೆ ತೋರುತ್ತೆ. ಊರಿನ ಹವಾ ಬಹಳ ಚೆನ್ನಾಗಿರುವ ಹಾಗೆ ತೋರುತ್ತೆ. ಅಲ್ಲಲ್ಲಿ ಸ್ವಲ್ಪ ಮಳೆಯಾ ಗಿದೆ. ರೈತರು ತಮ್ಮ ಹೊಲಗಳನ್ನು ಉತ್ತು ಬೀಳ ಬಿತ್ತುತ್ತಾರೆ. ಇಲ್ಲಿ ೬ ಮೈಲಿ ದೂರದಲ್ಲಿರುವ ಎರಿಯೂರಲ್ಲಿ ಪ್ಲೇಗ್ ಬಾಧವಾಗಿ ೩೦—೫೦ ಜನರು ತೀರಿಹೋದರು. ಪ್ರಾರಂಭದಲ್ಲಿ ಇಲಿ ಸತ್ತಾಗ ಅವರು ಊರನ್ನು ಬಿಡುವ ಏರ್ಪಾಡು ಮಾಡದಿದ್ದರೆ ಆರೋಗ್ಯವಾ ಗಿತ್ತು. ಅಲ್ಲಿರುವ ದೇವತೆ ಊರನ್ನು ಬಿಡಬೇಡಿರೆಂದು ಹೇಳಿದಂತೆ ಆ ದೇವತೆಯ ಮಾತನ್ನು ಕೇಳಿದ್ದರಿಂದ ಅವರಿಗೆ ನಷ್ಟ ಹೆಚ್ಚಾ ಯಿತು. ಈಗ ಊರಜೋಡಿಗೆ ಜೋಡಿಗಳನ್ನು ಕಟ್ಟಿ ವಾಸಮಾಡು ತ್ತಾರೆ.

ಮುಳಬಳ್ಳಿ.—ಅಮಲ್ದಾರರು ಇಲ್ಲಿಗೆ ಬಂದು ೩ ವರುಷಗಳಾ ಗುತ್ತಾ ಬಂತು. ಆಗಿನಿಂದ ತಹಲ್‌ದಾರಿನಿಗೂ ಎನ್ನಾ ಕೆಲಸಕಾರ್ಯ ಗಳು ಬಹು ವಿಜೃಂಭಣೆಯಾವಾಗಿ ನಡೆಯುತ್ತಲೆ ಇವೆ. ಇವರು ಪೊ ಲೀಸು ಇಲಾಖೆಯಿಂದ ಈ ಕೆಲಸಕ್ಕೆ ಬಂದವರು. ಒಳ್ಳೆ ಬರವಣಿಗೆ ದಾರರು ಆಗಿರುವದರಿಂದ ಒಂದು ಕೇಸು ವಿಚಾರಣೆಗೆ ಳಿತುಕೊಂ ಡರೆ ಆ ಕೇಸ್ಲೆ ಜಡ್ಜ್‌ನೋಟ್ ಬರೆದು ಜಾಳುತ್ತಾರೆ. ಎಷ್ಟಾ ಆಪ್ತ ಸ್ನೆ (ಹಿತರಾದರೂ ಬಂದುವಾದರೂ ಸ್ವಂತದವರಾದರೂ ಸ್ವಲ್ಪ ಮಾತ್ರವೂ ಬಿಟ್ಟುಹೋಗುವವರಲ್ಲ. ಲಂಚರುಸುವತ್ತು ಎಂಬ ಸವಾ ಚಾರ ಜೊಂಪವೂ ಇವರಲ್ಲಿ ಇಲ್ಲ. ಮುಖ್ಯ ಎಲ್ಲಾ ಭಾಗದಲ್ಲೂ ಇವರ ನಾಮಾಂಕಿತಕ್ಕೆ ಸರಿಸವಾನವಾದ ನಡೆಯುಳ್ಳವರಾಗಿ ಇರುತ್ತಾರೆ. ಮತ್ತು ಪೊಲೀಸ್ ಇನ್‌ಸ್ಪೆಕ್ಟರವರಾದರೋ ಬಹು ಸಾಧು ಗಳು. ಅಖಿಲವೃದ್ಧರಾದಿಯಾಗಿ ಸಕಲರಲ್ಲಿಯೂ ಒಂದೇ ನಡೆನುಡಿ ಯುಳ್ಳವರು, ಬಹು ಸಮರ್ಥರು. ಕೇಸು ಪತ್ತೆಮಾಡುವದರಲ್ಲಿ ಇವರ ಸವಾನರು ಯಾರೂ ಇಲ್ಲವೆಂದು ಹೇಳಬಹುದು. ಇವರು ಈ ತಾಲ್ಲೂಕಿಗೆ ಹಿಂದೆ ಬವಾದಾರರಾಗಿ ದಯಮಾಡಿಸಿದರು, ಬ ಹುಸ್ವಲ್ಪ ವಿವರದಲ್ಲಿ ಇವರಿಗೆ ಇನ್‌ಸ್ಪೆಕ್ಟರ ಸ್ಥೇಡಿಗೆ ಬಡ್ತಿಯಾಯ ತು. ಈಗಾಗ ಇವರನ್ನು ಯಾಡತೆರೆ ತಾಲ್ಲೂಕಿಗೆ ವರ್ಗಮಾಡಿತು ತ್ತಾರೆ ಎಂಬ ಸಾರ್ವ ನೊನ್ನೆ ಬಂದಿರುವದರಿಂದ ಈ ತಾಲ್ಲೂಕಿನ ಎಲ್ಲಾ ಪ್ರಜೆಗಳು ಬಹಳ ವಿಷಾದ ಪಡುತ್ತಾರೆ. ಹಲಗೂರು ಸ್ಕೂಲ್ ಹೆಡ್ಡಾಸ್ಟರ್ ಚನ್ನಪ್ಪಯ್ಯನ ಮೊಕದ್ದಮೆ ವಿಷಯವು ಈ ಪ ತ್ರಿಕಾ ಮುಖೇನ ೩—೩ ದಪಾ ಪ್ರಕಟಿಸಲ್ಪಟ್ಟಿದ್ದಾಗ್ಯೂ ಇನ್ನೂ ಗವರ್ನಮೆಂಟು ಆರ್ಡರು ಜಾರಿಗೆ ಬರಲಿಲ್ಲವೆಂದೆ ಯಾಕೋ ಜನಗಳು ಪ್ರಶ್ನೆಗಳು ಎದುರು ನೋಡುತ್ತಾರೆ. ಆರ್ಡರು ಹುಟ್ಟಲ್ಲ ತಿಂಗ ಳುಗಳಾದವಾಗ್ಯೂ ತಾಲ್ಲೂಕಿನವರು ಏನು ಕಾರಣದಿಂದ ಜಾರಿ ಗೆ ತರಲಿಲ್ಲವೋ ತಿಳಿಯದೇ ಇದೆ ಈಗಲಾದರೂ ಗವರ್ನಮೆಂಟಿನವರು ಈ ವಿಷಯ ಗವನಕ್ಕೆ ತಂದು ಜಾಗ್ರತೆಯಲ್ಲಿ ಆರ್ಡರುಜಾರಿಗೆ ತರುವಂತೆ ತಾಲ್ಲೂಕಿಗೆ ಬರೆಯುವರು ಎಂದು ಸಂಬರಿಯುತ್ತಿದೆ.

ಚಿಕ್ಕನುಗಳೂರು.—ಪ್ಲೇಗ್ ವಿಚಾರ—ಈ ಊರಿನಲ್ಲಿ ಕಳೆದ ಎರಡು ವಾರಗಳಿಂದಲೂ ಏನೂ ಗಲಾಟೆ ಇಲ್ಲದೆಯಿರುವದರಿಂದ ಊರು ಬಿಟ್ಟು ಹೋಗಿ ಗುಡಿಸಿಲುಗಳಲ್ಲಿ ವೇರಿಕೊಂಡಿದ್ದವರೆಲ್ಲರೂ ತಮ್ಮ ಮನೆಗಳನ್ನು ತೊಳಿಸಿಕೊಂಡು ಬ

ತಾರೀಪು ೩೫ ರಲ್ಲಿ ಈ ಊರಿನ ಕೋಟೆಯು ಮುಂಭಾಗದಲ್ಲಿರುವ ಕೆರೆಯನ್ನು ಸುಮಾರು ೪೦ನೆಂಟು ಮಾಯಿದ ಅಗಸರ ನುಡುಗಲು ತುಮಾಷೆಕ್ಕೆ ಹೋಗಿ ಕಾಲಿಗೆ ವೀರಿಸಲ್ಲಿ ಬೆಳೆದಿರುವ ಸತ್ತೆ ಸುತ್ತಿ ಕೊಂಡು ಮೃತಪಟ್ಟನು. ಈ ವಾರದಲ್ಲಿ ಇಲ್ಲಿ ಮೂರು ಇಪ ಒಳ್ಳೇ ಮಳೆಯಾದಕಾರಣ ಒಣಗಿಹೋಗಿದ್ದ ಭೂಮಿಯೆಲ್ಲಾ ಎಲ್ಲಿ ನೋಡಿದರೂ ಹಸುರಾಗಿ ಕಾಣುತ್ತಾವೆ. ಈಗ್ಯೆ ಮುಖ್ಯ ತಿಂಗಳಂ ಕ್ಷಲೂ ಮುಚ್ಚಿ ಇದ್ದ ಮಿಷ್ಟ ಜೆಣ್ಣು ಮಳ್ಳಕ್ಕ ಪೂತಕಾಲೆಗಳು ಮೇ ತಿಂಗಳು ಎರಡನೇ ತಾರೀಖಿನಿಂದ ತೆರೆಯಲ್ಪಡುವವು. ಪ್ರತಿ ವಿಶ್ವ ವಿ ಅಕಾಶದಲ್ಲಿ ಹರಿಡಾಡುವ ನೋಡವನ್ನೂ ಬೇಳುವ ತನಿಗಳನ್ನೂ ನೋಡಿದರೆ ಈ ಪ್ರಾಂತ್ಯ ಮಳೇಕಾಲ ಪ್ರಾರಂಭಿಸಿದಂತೆ ಕಾ ಣುತ್ತೆ.

ಅರಕಲಗೂಡು.—ಈ ಪೂರಲ್ಲಿ ಸಾಯಂಕಾಲ ಸೋಡವಾಗಿ ಮಳೆ ಮತ್ತು ಸಿಡಿಲಿನ ಅಬ್ಬರ ಜಾಸ್ತಿಯಾಗಿರುತ್ತೆ. ಸಿಡಿಲಿನ ಏಟಿನಿಂ ದ ಒಂದು ಎನ್ನೆಮ್ಮೆ ಕಾಲಸವಟ್ಟಣವನ್ನು ನೇರಿತು. ಏಪ್ರೆಲ್ ೩೦ ನೇ ತಾರೀಖು ಬುಧವಾರ ಈ ಪೂರಿಗೆ ನಾಲ್ಕು ನೈಲಿ ಜೂರದಲ್ಲಿ ರುವ ಮೂರೂರು ಸಂತೆಗೆ ಹೋಗಿಪ್ಪನವರಲ್ಲಿ ಒಬ್ಬ ನೈಕ್ಯಕ ಹುಡುಗ ಹು ಳುದುರಿಯಮೇಲಿನಿಂದ ಬಿದ್ದು ಸತ್ತುಹೋದನು. ಅದನ್ನು ಪೋಲೀಸು ಅಧಿಕಾರಿಗಳು ಹೋಗಿ ವಿಚಾರಣೆ ಮಾಡಿಕೊಂಡು ಖಿ ಗರು. ಈ ಗ್ರಾಮದಲ್ಲಿ ಸಂತೆಯು ಗ್ರಾಮದಲ್ಲಿ ನಡೆಯುತ್ತಿದ್ದು ಈಗ ಊರಿನ ಹೊರಗೆ ಸ್ಥಳಾಂತರವಾಗುತ್ತಾ ಇದೆ. ಈ ಸಂತೆಯು ಏನೋ ಕಾರಣಾಂತರದಿಂದ ಈಗ ಒಂದು ವಾರದ ಹಿಂದೆ ಗ್ರಾಮದಲ್ಲಿಯೇ ಜರ್ಗಿಯಿತು. ಆ ಸಾಯಂಕಾಲವೇ ಇಲ್ಲಿನ ಆಕ್ಟಿಂಗ್ ಅಮುಲ್ದಾರರ ಆ ಎತ್ತುಗಳು ಆ ದಾರಿಯಲ್ಲಿ ಹೆದರಿದ್ದರಿಂದ ಯಜಮಾನ್ರಕಾರ ಪೂರಿನ ಹೊರಗೆ ನಡಿಯಬೇಕೆಂದು ಟಾಂ ಟಾಂ ಹಾಕಿಸಿದರು. ಪೂರಲ್ಲಿ ಸಂ ತೆ ನಡಿಪದ್ದರಿಂದ ಅನೇಕ ಜನ ಪಸಗಳಿಗೆ ಖಿತಳ ಸಂತೋಷವಾಗಿ ಪ್ತು ಮತ್ತು ಮಳೆ ಭರುಕ್ಕೂ ಅನುಕೂಲವಾಗಿತ್ತು. ಮಳೆ ವಿಶೇಷ ವಾಗಿರುವ ಮಲನಾಮಗಳಲ್ಲಿ ಗ್ರಾಮಗಳಲ್ಲಿ ಸಂತೆಗಳು ಕಟ್ಟುವ ಸಂಪ್ರದಾಯ ಬಹಳವಾಗಿದೆ. ಆದ್ದರಿಂದ ಇಲ್ಲಿನ ಆಮುಲ್ದಾರರು ಅನೇಕ ಗರೀಬರಾದ ಬಿಲ್ಲರೆ ವ್ಯಾಪಾರಗಳಮೇಲೆ ಕನಿಕರವಿಟ್ಟು ಸಂತೆಯನ್ನು ಮಾಮೂಲು ಮೇರೆ ಗೇಟಿಯಲ್ಲಿಯೇ ನಡಿಯುವಂತೆ ಮಾಡಿದರೆ ಅನೇಕ ಜನಗಳಿಗೆ ಉಪಕಾರವಾಗಿರುತ್ತೆ. ಸುಂಕದ ಸಾವಾಸುಗಳು ಒಂಬೇಕೆಯನ್ನಿಯೂ ಈ ಆಗಲವಾದ ರಸ್ತೆಯಲ್ಲಿ ಬಾಧುವಾಗಿ ನೆಟ್ಟಗೆ ಎಂದೇ ನಾಲಾಗಿ ಹೂರಿಸಿದರೆ ಮಧ್ಯದಲ್ಲಿ ಖಿಂಡಿಗಳು ಸಲೀಸಾಗಿಯೂ ಹೋಗಬಹುದು ಹೀಗೆ ಸವ್ಯ ಜನವಾ ದ ಅಮುಲ್ದಾರರು ಏರ್ಪಡಿಸುವದರಿಂದ ತಮ್ಮ ಕೀರ್ತಿಯು ಇನ್ನು ಪ್ರಕಾಶಗೊಳ್ಳಬಹುದು.

ನೆಲಮಂಗಲ.—ನೊವೆಂ ೭೭—೪—೧೯೦೪ ರ ದಿನ ಶಂಕರಾ ಚಾರ್ಯರ ಆರಾಧನೆ ಆಯಿತು. ಆ ದಿನ ಉದಿಸಲ್ಲಿ ನಮ್ಮ ಆಕ್ಟಿಂಗ್ ಅಮುಲ್ದಾರ್ ಮೆಸ್ರಿ ಎಂ ಆರ್ ಜಾನಜ್ಜನವರ ಬುದ್ಧಿ ಗಮನಿಕೆ ಯಿಂದ ನಾಲ್ಕು ದೇವರುಗಳಿಗೆ ಬೆಳಿಗ್ಯೆ ಅರ್ಚನೆ, ಅಭಿಷೇಕ, ಊ ತ್ಸವಾದಿಗಳು ನಡದವು—ಕವಿ ವಿಷ್ಣು ಎಂಬ ಭೇದವನ್ನೆಣಿಸದೆ— ಈಶ್ವರ ದೇವರ ಉತ್ಸವವೂ, ಆಂಜನೆಯ, ವೆಂಕಟರಮಣಸ್ವಾಮಿ, ಕೇಶವ ದೇವರು ಮುಂತಾದ ದೇವರ ಉತ್ಸವಗಳೂ ನಡೆದವು. ಮಧ್ಯಾನ್ನ ಬ್ರಾಹ್ಮಣಾರಿಗೆ ಸಂತರ್ಪಣೆ ಆಯಿತು. ವೈಷ್ಣವರು ಶ್ರೀ ವೈಷ್ಣವರು ಸಹ ಭೋಜನಕ್ಕೆ ಬಂದಿದ್ದರು. ಸ್ಮಾರ್ತ ವೈದೀಕರು ಶ್ರೀ ವೈಷ್ಣವರು, ಶ್ರೀ ವೈಷ್ಣವರು, ಭೋಜನಕ್ಕೆ ಹೋದ ಕಡೆಗೆ ತಾವು ಭೋಜನಕ್ಕೆ ಹೋಗುವದಿಲ್ಲವೆಂದು ಭೇದವನ್ನೆಣಿಸದೆ ಎಲ್ಲರೂ ಹಯಮಡಾಡಿದರು. ಆ ದಿನ ಸಾಯಂಕಾಲ ಶ್ರೀ ವಿಜಯಂಗಿ ಮಠದ ಸರ್ವಾಧಿಕಾರಿಗಳು ಶ್ರೀ ಶಂಕರಾಚಾರ್ಯರ ಜೀವನ ಚರಿತ್ರೆಯು ವಿಷಯವಾಗಿ ಉಪನ್ಯಾಸ ಮಾಡಿದರು. ನಂತರ ಮಂಗಳಾರತಿ ಪ್ರಸಾ ದಗಳು ಆದವು. ಈ ರೀತಿಯಲ್ಲಿ ನಿರ್ವಿಘ್ನವಾಗಿ ಶ್ರೀ ಶಂಕರಾ ಚಾರ್ಯರ ಆರಾಧನೆಯು ನಡೆಯಿತು—ಇದರಂತೆ ಹಾ ೦೫ ರಲ್ಲಿ ಈ ಊರಿನಲ್ಲಿ ಶ್ರೀಮಜ್ಜ ಯುವರಾಜರಿಗೆ ಪಾಹಿ ಲೆ ಪಾಸಿಗಾಪಾದ್ದಕ್ಕೆ ಸಂತೋಷಾರ್ಥವಾಗಿ ಇಲ್ಲಿನ ಪ್ರಜೆಗಳು ಉತ್ಸಾಹಕಾರ್ಯಗಳನ್ನು ನಡೆಯಿಸಿದರು.—ಆ ದಿನ ಸಾ ೭ ರಂತೆ ಹಿಂದೆ ಪ್ರಥಮ ಅರ್ಚನೆ, ಅಭಿಷೇಕ, ಉತ್ಸವ, ಮತ್ತು ಬ್ರಾಹ್ಮಣರ ಸಂತರ್ಪಣೆ ನಡೆದ್ದಲ್ಲದೆ (೧) ವೈಷ್ಣವು, ಲಿಂಗಾಯತರು, ಮತ್ತು ತುಮುಳಿಗರಿಲ್ಲಾ ಭೋಜ ನವು, (೨) ಮುಸಲ್ಮಾನರು ಮುನಿಸಿಪಲಿಟಿಗಳಲ್ಲಿ ಸದಾಜ್ಯ, (೩) ಶಾಲ್ಲಾ ಕ್ ಬ್ಬೇರಿ ಮುನಿ ವೈಗೂರು ಆರನುನಂದಪ ಬಿರುದಾಂಕಿತವಾದ ಬಂಪಟಗಳಿಂದ ಅಲಂಕರಿಸಲ್ಪಟ್ಟ ಚಕ್ರರವು, (೪) ಆ ಚಕ್ರವರ್ತಿಯಲ್ಲಿ ನೇರಿದ ಎಲ್ಲಾ ಜನಗಳಮುಂದೆ ಆ ಬಾವುಟಗಳಿಗೆ ತಾಲ್ಲೂಕ್ ಪೋ ಲೀಸಿನವರು ಕವಾತ್ತುಮಾಡಿ ಮರ್ಯಾದಾರ್ಥವಾಗಿ ಖಿಂಡೂಕಗಳನ್ನು ಹಾರಿಸಿದ್ದು, (೫) ಸ್ಕೂಲ್ ವಿದ್ಯಾರ್ಥಿಗಳಿಗೆ ಮಿಠಾಯಿಗಳನ್ನು ಹಂಚಿದ್ದೂ, ಇವುಗಳಿಲ್ಲಾ ಬಹಳ ವಿಜೃಂಭಣೆಯಿಂದ ನಡದವೆ.—ಅಲ್ಲದೆ ಶ್ರೀಮನ್ಮಾ ಯುವರಾಜರ ಶ್ರೇಷಾರ್ಥವಾಗಿ ಎಲ್ಲಾ ತಾಲ್ಲೂಕ್ ಜೆಲ್‌ಕ್ವಾರ್ಟರ್‌ನಲ್ಲಿ ಮತ್ತಾನಲ್ಲದೆ, ಕ್ಯಾವುಗೆಂಪ್ಪು, ಬಿಳಗಂಗೆ ಮುಂತಾದ ಸ್ಥಳಗಳ್ಲಿಯೂ ಹೆಚ್ಚು ಜನನೆ, ಈಸಬಾ ನೆಲಮಂಗ ಲದಲ್ಲಿ ನಡದಂತೆಯೇ ಉತ್ಸವ ಸಂತರ್ಪಣೆ ಮುಂತಾದವುಗಳೆಲ್ಲಾ ನಡದವು. ತ್ಯಾಮಗೊಂಡ್ಲಿನಲ್ಲಿ ೬೦೦ ಜನ ಬ್ರಾಹ್ಮಣರಿಗೂ, ೬೦೦ ಮಂದಿ ಇತರರಿಗೂ ಅನೇಕ ಮುಸಲ್ಮಾನರಿಗೂ ಭೋಜನವೂ ನಡದ ದ್ದಲ್ಲದೆ ಬ್ರಾಹ್ಮಣರಿಗೆ ದಕ್ಷಣೆಯನ್ನೂ ಕೊಟ್ಟರು. ಸ್ಕೂಲ್ ವಿದ್ಯಾ ರ್ಥಿಗಳಿಗೆ ಮಿಠಾಯಿ ಮುಂತಾದವೆಲ್ಲಾ ನೆಲಮಂಗಲದಂತೆಯೇ ನಡಿ ಯಿತು—ಅಂತೂ ನಮ್ಮ ತಾಲ್ಲೂಕಿನಲ್ಲಿ ಈಚೆಗೆ ಇಂಥಾ ಪಲ್ಲಿಕ್ ಉ ತ್ಸಾಹ ಕಾಲಗಳಲ್ಲಿ ಜನೆ ಗಡಿಬಿ ನಡೆಯುತ್ತಾ ಇದೆ. ಕೆಲವು ದಿನ ಗಳ ಹಿಂದೆ ಈ ತಾಲ್ಲೂಕ್ ಬನವನಹಳ್ಳಿಯಲ್ಲಿ ಶ್ರೀ ವೆಂಕಟರಮ ಣಸ್ವಾಮಿಯ ರಥೋತ್ಸವ ಕಾಲದಲ್ಲಿ ನಡೆದಂತೆ ರಥೋತ್ಸವ ಕಾಲ

ಗಳಲ್ಲಿಯೂ, ರಾಮನವಕ್ಕೆ ಪ್ರೀತಿ ತೋರಿಸಬೇಕಾದ ಕಾಲಗಳಲ್ಲಿ ಯೂ, ಆಚಾರ್ಯರ ಆರಾಧನೆ ಕಾಲಗಳಲ್ಲಿಯೂ, ಇನ್ನೂ ಇಂಥಾ ಕಾಲಗಳಲ್ಲಿಯೂ ಅನ್ನ ದಾನವು ವಿಶೇಷವಾಗಿ ನಡೆಯುತ್ತಿದೆ.—ಇಂಥಹ ಕಾಲಗಳಲ್ಲಿಲ್ಲಾ ತಮ್ಮ ತಾಲ್ಲೂಕಿನ ಜನಗಳ ಪ್ರೀತಿಗೆ ಪಾ ತ್ರರಾದ ಸಮ್ಮ ಅಮಲ್ದಾರ್ರು ತಮ್ಮ ಇಷ್ಟಾನುಸಾರ ಜನಗಳ ಸಹಾ ಯದೊಪನೆ ಎಲ್ಲಾ ಕಾರ್ಯಗಳನ್ನು ವಿಶ್ಯಂಭಣೆಯಿಂದ ನಡಸುತ್ತಿ ದಾರೆ.

ಬಾತ್ಮೀದಾರರಿಗೆ ನೋಟೀಸು.

ಸೆಸರು ವಿಳಾಸಗಳ್ಳಿದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುಪಳಿಕೆಗೋ ಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕ ದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆ ಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಬೇಳ್ಳ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ನಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪದುವ ಅಭಿಪ್ರಾಯಗಳಿಗೆ ನಾವು ಹೊಣೆಗಾರ ರಾಗುವದಿಲ್ಲವೆಂಬುದಕ್ಕೆ ಸಂಪಾದಕನನ್ನು ಸಳಲರೂ ತಿಳಿಯತಕ್ಕದ್ದು.—ಎಡಿ.

ಕರೆಸ್‌ಪಾಂಡೆನ್ಸ್.

ಬ್ರಹ್ಮಸಮಾಜ—ಪ್ರಶ್ನೆಗೆ ಉತ್ತರ.

ಅಯ್ಯಾ,

ಮಾರ್ಚಿ ತಿಂಗಳು ೧೦ನೇ ತಾರೀಪಿನಲ್ಲಿ ಮೆ॥ ಸಂಜುಂಡೈ ಯ್ಯನವರು ಬ್ರಹ್ಮ ಸಮಾಜದವರ ಆಡ್ರೆಸ್ಸನ್ನು ಕೇಳಿದಾರೆ. ಬೆಂಗ ಳೂರು ಪೇಟೆ ಬ್ರಹ್ಮ ಸಮಾಜದ ನೆಕ್ರಿಟರಿಗೆಂದು ಬರೆದರೆ ಆಟಂಕ ಯಿಲ್ಲದೆ ವಿರೂಪವು ಸೇರುತ್ತಿತ್ತು. ಅದರೂ ಬ್ರಹ್ಮ ಸಮಾಜದ ವಿಷ ಯವಾಗಿ ಕೆಲವು ವಿಷಯಗಳನ್ನು ತಿಳಿದುಕೊಳ್ಳಲಪೇಕ್ಷಿಸುವವರ ಕಾರಣ ಅವರಿಗೆ ಬೆಂಗಳೂರು ನಿವಿ ಬ್ರಹ್ಮೋ(ಫ್ರೀಂಡ್ಸ್‌ಲ್ ನಿಷ್ಕ ನೆಕ್ಟರಿಗೆ ಎಂಬುದಾಗಿ ವಿಳಾಸ ಬರೆದು ಆರ್ಧಾಣೆ ಟಪ್ಪಾಲು ಸ್ಟಾಂ ಪನ್ನು ಅದಕವಾಸಿ ಕಳುಹಿಸಿದರೆ ಜಾವ ಅಂಥವಲ್ಲಾದರೂ ಅವರ ಸಂದೇಹ ನಿವರ್ತಿಯಾಗಬಹುದೆಂದು ಇದರಿಂದ ಅವರಿಗೆ ತಿಳಿಸು ತ್ತೇನೆ. ಈ ಫ್ರೀಸ್ಟಲ್ ಮಿಷನ್ ಮೂಲಕವಾಗಿ ಬ್ರಹ್ಮ ಸಮಾಜದ ಇಂಗ್ಲಿಷ್, ತೆಲುಗು, ಅರವ, ಕನ್ನಡ ಪುಸ್ತಕಗಳೂ ಅಮೇರಿಕ ಮತ್ತು ಇಂಗ್ಲಾಂಡು ಯೂರೋಪಿಯ.ನು ಪುಸ್ತಕಗಳೂ ಬಹಳ ಸುಲ ಭ ಕ್ರಯಕ್ಕೆ ಆಂದರೆ ಆರ್ಧಾಣೆ ನುತ್ತು ಒಂಪಾಣೆ ಸ್ಟ್ಯಾಂಪುಗಳ ಬೆಲೆಗೆ ಕಳುಹಿಸಲ್ಪಡುವವು. ಯಾವ ಸಂಸ್ಕೃತ ಮಂತ್ರಗಳು ಕರೆ ಸ್‌ಪಾಂಡೆನ್ಸ್ ಇವಲ್ಲವಲಾರದೆಂದು ನನಗೆ ಗೊತ್ತು. ಯಾಕೆಂದರೆ ಈ ಪ್ರಕಾರವಾಗಿ ಇದುವರೆಗೂ ಯಾರಲ್ಲಿಯೂ ಕರೆಸ್ಪಾಂಡೆನ್ಸ್ ಇಟ್ಟಿಲ್ಲ.

ಬೆಂಗಳೂರು, ಬಿ. ಸಿ. ಗೋಪಾಲರಾಪ್ತು.
೧೯—೪—೦೫

ರಾಜಧಾನಿಯಲ್ಲಿ ಮ್ಯುನಿಸಿಪಲ್ ವಿಚಾರಿಂಗ.

ಕಳೆದ ಶನಿವಾರ ಬೆಳಗ್ಗೆ ಮೈಸೂರು ಸಿಟಿ ಮ್ಯುನಿಸಿಪಲ್ ಕ ಮಿಷನರು ಟೌನ್‌ಹಾಲಿನಲ್ಲಿ ಸಭೆಸೇರಿ, ತಿಂಗಳುಕಟ್ಟಿದ ವಿಚಾರ ಗಳನ್ನು ನಡಿಸಿದರು. ಕಳೆದ ಮಾರ್ಚಿ ತಿಂಗಳಲ್ಲಿ ಮ್ಯುನಿಸಿಪಾಲಿಟಿ ಗೆ ಎಲ್ಲಾ ರಾಖಮುಗಳಿಂದಲೂ ರೂ ೧೫,೫೯೯—೦೦—೦ ಸೈ ವಿಸೂಲಾಯಿತು. ಮ್ಯುನಿಸಿಪಲ್ ಕಾಯಿದೆಯು ೧೬,೦೦೦ ರೂ ಪಾಯಿತನಕ ವಸೂಲಾಗದೆ ಉಳಿದಿತ್ತು. ಈಚೆಗೆ ಆಸ್ತಿ ಕಿಸ್ತಿ ದಾರರನ್ನು ವಸೂಲಿ ಕೆಲಸಕ್ಕೆ ನೇಮಿಸಿದಾರಭ್ಯ ಕಳೆದ ಮಾರ್ಚಿ ಆಖೈರ್ ವರೆಗೆ ೧೫,೦೦೦ ರೂಪಾಯಿ ವಸೂಲಾಯಿತು. ಮಾರ್ಚಿ ತಿಂಗಳ್ಲಿ ಜನನ ೧೧೩; ಮರಣ ೨೭೮ ಈ ಪೈಕಿ ಪ್ಲೇಗ್ ೯, ಕಿಬು ಬು ೩, ಜ್ವರ ೬೦.

೨. ಸುಂಕ ತೀರ್ವೆಗಾಗಬೇಕಾಗಿರುವ ಜಿಲ್ಲೆ ಪೊಲೀಸಾಪ ಪ್ರಾರ್ಥನೆಗಳಿಗೆ ವರ್ತಕರು ಒಂದಾನವಿ, ಸುಂಕ ತೀರಿಸಿದಮೇಲೆ ಅವರು ಅವೇ ಜವಳಿಯನ್ನು ಇನ್ನೊಂದು ಊರಿಗೆ ಬಿಕರಿಗಾಗಿ ತೆ ಗೆದುಕೊಂದು ಹೋದರೆ ಅಲ್ಲೂ ಸುಂಕವನ್ನು ಕೊಡಬೇಕೆಂಬ ನಿ ಬಂಧವಿದೆ. ಇದರಿಂದ ವರ್ತಕರಿಗೆ ಹಿಂಸೆಯೂ ನಷ್ಟವೂ ಹೆಚ್ಚಾ. ಈ ಧಾರಣೆ ತೆರಿಗೆಯನ್ನು ವಸೂಲ್ಮಾಡಿದಹಾಗೆ ಸರ್ಕಾರದವರು ಹುಕುಂ ಕೊಟ್ಟಿದ್ದರು. ಆದರೆ ಸರ್ಕಾರದ ಹುಕುಮನ್ನು ರೂಢಿ ಸುವುದು ಸ್ವಲ್ಪ ಕಷ್ಟವೆಂದು ಈಮಧ್ಯಂದಕಾರಣ ವೈಸ್‌ಪ್ರಿಯಿಂದ ಟರು ಆದಷ್ಟೆ ಪ್ರತಿಯಾಗಿ ಸೂಚಿಸಿದ್ದೇನೆಂದರೆ—ಈಗ ಮೈಸೂರಿಗೆ ಬರುವ ಜನಗಳಿಗೆ ನಾವು ನುಂಗಿಸುವನ್ನು ನಳಲ್ಯಾಹುತ್ತೇನೆ. ಅರು ತಿಂಗಳೊಳಗಾಗಿ ಬಿಕರಿ ಆಗದೆ ಇರುವ ಸರಗುಗಳನ್ನು ವರ್ತಕ ರು ಇತರ ಕಡೆಗಳಿಗೆ ತೆಗೆದುಕೊಂಡು ಹೋಗುವುದಾದರೆ ಅವರು ಆಂಥಾ ಸರಗುಗಳಿಗೆ ಕೊಟ್ಟರುವ ಸುಂಕವನ್ನು ಮ್ಯುನಿಸಿಪಾಲಿಟಿ ಯಿಂದ ವಾಪಸು ಪಡೆಯಬಹುದಾಗಿದೆ. ಈ ಭಾಗನ್ನು ವರ್ತಕರಿಗೆ ತಿಳಿದಿರುವಂತೆ ತೋರುವುದಿಲ್ಲ. ತಿಳಿದಿದ್ದರೆ ಅವರಿಗೆ ಹುಬಾರಿ ತೆರಿ ಗೆ ಬೀಳುತ್ತಿರಲಿಲ್ಲ. ಮತ್ತು ಹೀಗೆ ಸುಂಕವನ್ನು ವಾಪಸು ಪಡೆಯು ಬಹುದಾದ ರಿಯಾಯತಿ ಮೈಸೂರು ಮತ್ತು ಬೆಂಗಳೂರು ಮ್ಯುನಿ ಸಿಪಾಲಿಟಿಗಳ್ಲಿವರಿತಕ್ಕ ವರ್ತಕರಿಗೆ ಮಾತ್ರ ಲಭ್ಯವಾಗಿರುವುದು. ಈ ರಿಯಾಯತಿಯನ್ನು ಸಮಸ್ತ ಮ್ಯುನಿಸಿಪಾಲಿಟಿಗಳಿಗೂ ಜಾರಿಗೆ ತಂದರೆ ವರ್ತಕರ ಆಕ್ಷೇಪಣೆಯೇನೂ ಇರುವುದಿಲ್ಲ ಎಂಬುದೇ. ಬೆಂಬರುಗಳು ಈ ಅಭಿಪ್ರಾಯವನ್ನು ಅನುಮೋದಿಸಿ, ಮೈಸೂರು ಬೆಂಗಳೂರು ಮ್ಯುನಿಸಿಪಾಲಿಟಿಗಳ್ಲಿ ಜಾರಿಯಲ್ಲಿರಬಕ್ಕ ಮವನ್ನು ಇತರ ಮ್ಯುನಿಸಿಪಾಲಿಟಿಗಳಲ್ಲೂ ಜಾರಿಗೆ ತರಬೇಕೆಂ ಸರ್ಕಾರದವರನ್ನು ಕೇಳಿಕೊಳ್ಳಬೇಕೆಂದು ತೀರ್ಮಾನಿಸಿ ದರು.

೩. ರಾಜಧಾನಿಯಲ್ಲಿ ಕೆಲಸರು ಕುಡಿಯುವ ನೀರಿನ ಪಲ್ಲಿ ಪ್ಪು ತಮ್ಮ ಮನೆಗಳಿಗೆ ಇಡಿಸಿಕೊಂಡಿದಾರೆ. ಈ ಪಲ್ಲಿಗ ಒಂದು ಅಂಗುಲದ ತಿರುಪನ್ನು ಇಡಿಸಿಕೊಂಡಿರುವವರು ವರು ಕ್ಕೆ ೫೫ ರೂಪಾಯನಂತೆಯೂ, ಅರ್ಧ ಅಂಗುಲದ ತಿರುಪು ಇ ಸಿಕೊಂಡಿರುವವರು ೧೫ ರೂಪಾಯನಂತೆಯೂ ಮ್ಯುನಿಸಿಪಾ ಗೆ ನೀರಿನ ತೆರಿಗೆ ಕೊಡುತ್ತಿದಾರೆ. ಈಗ ೫೫ ರೂಪಾಯಿ ಕ್ಕೆ ವವರು ಪಲ್ಲಿಗಳ ಬಾಯಿಯನ್ನು ಕಡಿಮೆಮಾಡಿ, ಎಂದರೆ ಅರ್ಧ ಅಂಗುಲದ ತಿರುಪನ್ನು ಇಡಿಸಿಕೊಂಡಲ್ಲಿ ತೆರಿಗೆಯು ೨೫ರಿ ೧೫ ಕ್ಕೆ ಕಡಿಮೆಯಾಗುವುದೆಂದು ತಿಳಿದು, ಆರ್ಜಿ ಬರೆದುಕೊಳ್ಳ ತ್ತಾರೆ. ಇಂಥವರಿಗೆ ತಿರುಪನ್ನು ಬದಲಾಯಿಸಿ ಕೊಡಬಹುದು ಎಂಬುದಾಗಿ ವೈಸ್ ಪ್ರಸಿಡೆಂಟರು ಬೋರ್ಡಿನವರನ್ನು ಕೇಳಿದರು. ಮೆಂಬರುಗಳು ಈ ಸಂಗತಿಯನ್ನು ಚರ್ಚಿಸಿ ತೀರ್ಮಾನ ಮಾ ಡುವೆದೇನಂದರೆ—ಹಾಗೆ ಅರ್ಧ ಅಂಗುಲದ ತಿರುಪುಗಳನ್ನು ಹಚ್ಚುಕೊಡಬೇಕೆಂದು ಕೇಳುವವರಿಗೆ ನೀರಿನ ಪಲ್ಲಿಯನ್ನೂ ಅರ್ಧ ಅಂಗುಲಕ್ಕೆ ಬದಲಾಯಿಸುತ್ತೆವೆಂದು ತಿಳಿಸಬೇಕೇಕಲೂ, ಇನ ಮುಂದೆ ಪಲ್ಲಿ ಇಡಿಸಿಕೊಳ್ಳಬೇಕೆಂದು ಅಪೇಕ್ಷಿಸುವವರು ಮನೆ ಗೆ ಅರ್ಧ ಅಂಗುಲ ಪಲ್ಲಿಹಾಕಿದರೆ ಅರ್ಧ ಅಂಗುಲದ ತಿರುಪನ ಒಂದು ಅಂಗುಲದ ಪಲ್ಲಿಹಾಕಿದರೆ ಒಂದು ಅಂಗುಲದ ತಿರುಪನ ಇಟ್ಟುಕೊಡಬೇಕೇಕಲೂ ಗೊತ್ತುಮಾಡಿದರು.

೪. ಗಾಡಿ, ಕುದುರೆ, ಎತ್ತು ಮೊದಲಾದವುಗಳ ಮೇಲೆ ಮ್ಯು ನಿಸಿಪಾಲಿಟಿಯವರು ಹಾಕಿರುವ ತೆರಿಗೆಯು ದರಗಳು ಈಗ ಬಾ ಕಡಮೆಯಾಗಿವೆ, ಮ್ಯುನಿಸಿಪಲ್ ಕಾನೂನಿನಲ್ಲಿ ಹೇಳಿರುವಂತೆ ಸೂಲ್ಯಮಿತ್ತಾ ಇಲ್ಲ ಎಂಬುದಾಗಿ ವೈಸ್ ಪ್ರೆಸಿಡೆಂಟರು ತಿಳಿ ರು. ಮೆಂಬರುಗಳು ಈ ವಿಷಯವನ್ನು ಚರ್ಚಿಸಿ, ಸರ್ಕಾರ ವರು ಹೊಸ ಮ್ಯುನಿಸಿಪಲ್ ಕಾನೂನನ್ನು ಜಾರಿಗೆ ತರುವತನಕ ಗಿರುವ ದರಗಳೇ ಖಾಯಮಾಗಿರಬೇಕೆಂದು ತೀರ್ಮಾನ ಮಾ ಡಿದರು.

೫. ಕಿಬುಬು ಹಾಕುವವರನ್ನು ಮ್ಯುನಿಸಿಪಾಲಿಟಿಯವರು ಸಂ ಳಿ ಕೊಟ್ಟು ನೇಮಿಸಿದಾರಷ್ಟೆ. ಕಿಬುಬಿನ ಇಂಜೆಕ್ಷನ್ನರು, ಆ ನ ರರು ತಮ್ಮ ಹುಳುಆ ಪ್ರಕಾರ ಕೆಲಸಮಾಡುತ್ತೇಕೆಂದು ಕಾಗದ ತ್ರ ನಡಸುತ್ತಿದಾರೆ. ಈ ಕಿಬುಬು ಹಾಕುವವರು ಯಾವ ದಿನ ಯ ಆಸ್ಪತ್ರೆಯಲ್ಲಿರ್ತಾರೆ, ಮಾಕ್ಕುಳಿಗೆ ಕಿಬುಬು ಹಾಕುತ್ತಾರೋ ಪ್ರಬಲಿ ಗೆ ಗೊತ್ತಾಗಿ ತಿಳಿಯಲಿದೆ ಇವೆ. ಆದ್ದರಿಂದ ಈ ನೌಕರರು ಪೈ ಪ್ರಸಿಡೆಂಟರ ಹುಕುಂನಂತೆ ಕೆಲಸ ಮಾಪಬೇಕೇಕಲೂ. ಅಯಾ ಯಾ ವಾರಗಳಲ್ಲಿ ಕ್ಲುಪ್ತವಾದ ಆಸ್ಪತ್ರೆಗಳಲ್ಲಿರ್ತಾರೆ ಮಕ್ಕಳಿಗೆ ಕಿ ಬುಬು ಹಾಕುವಂತೆ ಹುಕುಂ ಮಾಪಬೇಕೇಕಲೂ ಮೆಂಬರ್.ಗಳು ತೀರ್ಮಾನಮಾಡಿದರು.

೬. ರಾಜಧಾನಿಯು ಈರನಗರೆ, ಸದರಬ್ಬಾದು, ಅಗ್ರಹಾರ ಲ್ಲಿರುವ ಆಸ್ಪತ್ರೆಗಳಿಗಳಿಗೆ ನೀರು ಹಾಕುವವರಿಗೂ, ಗುಡ ಸರಿಗೂ, ಸಂಬಳ ಮಾಡಿಕೊಪಬೇಕೆಂದು ಸಿವಿಲ್ ಸರ್ಜ ನ್ ಸೂಚಿಸಿದರು ಮಾರ್ಚಿ ಸಂಬಳವನ್ನು ೨೦೦೦ ಕ್ಕೆ ರು ಹಾಕುವವರಿಗೆ ೩ ರೂಪಾಯು ಸಂಬಳವನ್ನು ಏರಿಸಿಕೆ ಕೇಳಿದರು ಇದು ಅವಶ್ಯವೆಂದು ಕಮಿಟಿಯಿಂದ ಅಂಗೀ ಗ್ಯ ಬಪ್ಪು ಸಮ್ಮತಿ ಕಾಕಿದರು.

೭. ಎಕ್ಸಿಕ್ಯುಟಿವ್ ಇಂಜನಿಯರು ಬೆಳಿಗ್ಗೆಯಿದ ನೀರಿನ ಪಾನೆಯನ್ನು ಕನಪಿಮಾಡಿ, ರಿಪೋರ್ಟು ಬರೆದಿದಾರೆ ಈವರೆ ಟನ್ನಲ್ಲಿ ೫.೫೫ರಷ್ಟು ನೀರನ್ನು ಪಟ್ಟಣದ ಪ್ರಜೆಗಳು ಸೇ ದನರೂ ಮನೆ ಕಟ್ಟುವೆದಕ್ಕೂ, ತೋಟಗಳನ್ನು ಆಬಾದ ಸ್ಥ ಕೊಳ್ಳುವದಕ್ಕೂ ಬಹಳವಾಗಿ ಉಪಯೋಗಿಸುತ್ತಿದಾರೆ ಹಾಗೂ ದು ನಮುನ್ನಲ್ಲನೆಂತಲೂ ಬರೆದಿದಾರೆ. ಛೇಳ್ ಇಂಜನಿಯ ಈ ದುವ್ಯಯವನ್ನು ಮ್ಯುನಿಸಿಪಾಲಿಟಿಯವರು ನಿಲ್ಲಿಸಲು ಎ

ವಿಷಯವೆಂಬುದನ್ನೂ, ಈ ಸಂಗತಿಯನ್ನು ಗವರ್ನಮೆಂಟಿಗೆ ಕಳುಹಿಸುವುದೇ ಕರ್ತವ್ಯವೆಂಬುದನ್ನೂ ತೀರ್ಮಾನ ಮಾಡಿದರು.

ಸೈಕಲ್ ಸವಾರರ ಪ್ರಯೋಜನಕ್ಕೆ ಮಂಡಿ ಮಾರ್ಕೆಟ್ಟಿನ ಸುತ್ತಮುತ್ತಲಿನ ರಸ್ತೆಗಳಲ್ಲಿ ಆಯಾ ಬೀಟಿನವರೇ ಮೇಲ್ಚಾವಣಿಯನ್ನು ಹಾಕಿಕೊಂಡು, ಬೀಟಿಗೆ ಹಣವನ್ನು ಪಬ್ಲಿಕ್ ಹಾಕಿಕೊಳ್ಳುತ್ತಾರೆಂದು ತಿಳಿದುಬಂದಿದೆ. ಮೆಂಬರುಗಳು ಈ ವಿಚಾರವು ಅನುಕೂಲವಾಗಿದೆ ಎಂದು ಒಪ್ಪಿಕೊಂಡಿದಾರೆ.

ಮೆ॥ ಸುಬ್ಬಕೃಷ್ಣರಾಯರಿಗೆ ಕಾಲೇಜ್ ರೋಡಿನಲ್ಲಿ ಸೇರಿರುವ ಮ್ಯುನಿಸಿಪಾಲಿಟಿಯವರು ಕಂಪೌಂಡ್ ಕಟ್ಟಿಸಿಕೊಡುವುದಕ್ಕಾಗಿ ಆ ಭಾವಿ ಇದ್ದ ಸ್ಥಳದಲ್ಲಿ ಹತ್ತು ಜನರಿಗೆ ಅಡ್ಡವಾಗುವಂಥಾ ಸನ್ನಿಧಿಯನ್ನು ಕಟ್ಟಿಸಿ, ತೊಟ್ಟಿಯನ್ನು ಇಡಿಸಲು ಮೆಂಬರುಗಳು ತೀರ್ಮಾನಿಸಿದಾರೆ.

ಗಾಡಿಧನಿಯು ಪ್ಲೇಗ್ ಆಫೀಸಿನಲ್ಲಿ ಕೆಲಸಮಾಡುವ ಕೆಲವು ಸ್ನೇಹಿತರನ್ನು ಬಾಯುಂಡಾರರೆಂದು ಎತ್ತಿತೋರಿಸಿದ್ದಾಗಿ ಸಿವಿಲ್ ಸರ್ಜನ್ ರವರು ವಿಚಾರಿಸುವುದಾಗಿ ಹೇಳಿದರು. ಮ್ಯುನಿಸಿಪಾಲಿಟಿಯವರು ಸಮಾಧಾನವನ್ನು ಒಪ್ಪಿಕೊಂಡರು.

ದೇವರಾಜಮಾರುಕಟ್ಟೆಯಲ್ಲಾದಲ್ಲಿರುವ ಹಿಂದುಸ್ಥಾನಿ ಪಾಠಶಾಲೆಗೆ ಸಹಾಯವಾಗಿರುವುದರಿಂದ ತಿಂಗಳಿಗೆ ೫೦ ರೂಪಾಯಿನಂತೆ ಸಹಾಯ ಕೊಡಬೇಕೆಂದು ಸ್ಯಾಂಕ್ಷನ್ ಮಾಡಿದರು.

ಸರ್ವೇ ಪಾಸಣ್ಣನು ಬಹುಕಾಲ ಪರಿಚಯವಾಗಿ ಕೆಲಸಮಾಡಿರುವುದರಿಂದ ತನಗೆ ಪೆರ್ಮನೆಂಟ್ ಕೊಡುವಂತೆ ಮೆಂಬರುಗಳು ಒಪ್ಪಿಗೆ ಕೊಡಬೇಕೆಂದು ಆರ್ಜಿ ಬರೆದುಕೊಂಡಿದ್ದನು. ಮೆಂಬರುಗಳು ಸಮ್ಮತಿ ಸಾಕಿರುತ್ತಾರೆ.

ಮೈಸೂರು ಗೆಜೆಟ್ ಸಂಗ್ರಹ.

ಬ್ರಿ॥ ಸಿ॥ ಸಿ॥ ರೆಗ್ಯುಲೇಷನ್ ೧೪೯ನೇ ಆರ್ಟಿಕಲ್ ಅನುಸರಿಸಿ ಪುರಾತನ ಚಿನ್ನದ ಗಣಿಗಳ ಸಿವಿಲ್ ಸರ್ಜನ್ ಮೆ॥ ಕೃಷ್ಣಸ್ವಾಮಯ್ಯನವರಿಗೆ ಅವರು ಉಪಯೋಗಿಸಿ ಕೊಳ್ಳುವ ತಾರೀಕಿನಿಂದ ೩೦ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಬ್ರಿ॥ ಸಿ॥ ಸಿ॥ ರೆಗ್ಯುಲೇಷನ್ ಅನುಸರಿಸಿ ರಾಜಧಾನಿಯಲ್ಲಿರುವ ಪೋಸ್ಟ್‌ಮಾಸ್ಟರ್ ಜೋಡ್ಡರ್ ಆಫ್ ಪೋಸ್ಟಿಗಳ ಚೀಫ್ ಕ್ಲರ್ಕರಾಗಿರುವ ಮೆ॥ ಸೀತಾರಾಮಯ್ಯನವರಿಗೆ ೧೯೦೫ನೇ ಮೇ ೧೦ರಿಂದ ಆರು ವಾರಗಳು ಉಪಯೋಗಿಸಿಕೊಳ್ಳುವ ತಾರೀಕಿನಿಂದ ಹತ್ತು ದಿನ ಪ್ರಿವಿಲೆಜ್ ರಜಾ ಕೊಟ್ಟಿದೆ. ಅವರ ಗೈರ್ಹಾಜರಿ ಕಾಲದಲ್ಲಿ ಮೈಸೂರು ಪೋಸ್ಟ್‌ಮಾಸ್ಟರ್ ಜನರಲ್ ಆಫೀಸಿನ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಪೋಸ್ಟಾಫೀಸಸ್ ಮೆ॥ ಡಿಕ್ರೂಸ್‌ರವರು ಅವರ ಆಫೀಸಿನ ಕೆಲಸವನ್ನು ನಡೆಸತಕ್ಕದ್ದು.

ಚಾಮರಾಜನಗರ ಡಿ॥ ಚಿಕ್ಕನಾಯಕನಹಳ್ಳಿ ತಾ॥ ಆ॥ ಮೆ॥ ಬಿ॥ ಸುಬ್ಬಣ್ಣಯ್ಯರಿಗೆ ೧೯೦೫ನೇ ಮಾರ್ಚಿ ೧೪ರಲ್ಲಿ ಕೊಟ್ಟಿದ್ದ ೧೦ ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಒಂದು ತಿಂಗಳು ಹೆಚ್ಚಿಸಿದೆ. ಅವರ ಗೈರ್ಹಾಜರಿಯಲ್ಲಿ ತಾಲ್ಲೂಕು ಕಿರಸ್ತೇದಾರ್ ಸೀ॥ ಕ್ಲಾಸ್ ಮ್ಯಾಜಿಸ್ಟ್ರೇಟ್ ಆಫೀಕಾರನನ್ನು ವಹಿಸಿ ಮೊದಲಿನಂತೆ ಕೆಲಸ ನೋಡತಕ್ಕದ್ದು.

ಕೆರೆಗ್ಗ ತಾ॥ ಆ॥ ಸ॥ ಮೆ॥ ಬೊಳ್ಳಣ್ಣನವರಿಗೆ ೧೯೦೫ನೇ ಫೆಬ್ರವರಿ ೧೪ರಲ್ಲಿ ಕೊಟ್ಟಿದ್ದ ೧೦ ದಿನಗಳ ಪ್ರಿವಿಲೆಜ್ ರಜವನ್ನು ೨೫ ದಿನಗಳು ಹೆಚ್ಚಿಸಿದೆ.

ಅತಿಥ್ಗೊ ತಾ॥ ತೀರ್ಥಹಳ್ಳಿ ತಾ॥ ಆ॥ ಮೆ॥ ಎಸ್. ವೆಂಕಟ್ಟಯ್ಯನವರಿಗೆ ೧೯೦೫ನೇ ಡಿಸೆಂಬರ್ ೪ರಲ್ಲಿ ಕೊಟ್ಟಿದ್ದ ೨೦ ದಿನಗಳ ಪ್ರಿವಿಲೆಜ್ ರಜವನ್ನು ಅವರ ಅಪೇಕ್ಷೆಯ ಪ್ರಕಾರ ಸಾಕಾಗಿದೆ.

೧೯೦೫ನೇ ಫೆಬ್ರವರಿ ೨೯ರಿಂದ ಕೊಂಪೌಂಡರಿನವರ ಚೀಫ್ ಆಫೀಸರ ಮೆ॥ ವೈಜೂರಿ ಚಟ್ಟಯ್ಯನವರಿಗೆ ಕೊಟ್ಟಿದ್ದ ರಜವನ್ನು ಮತ್ತೂ ಇನ್ನೂ ಒಂದು ತಿಂಗಳು ಹೆಚ್ಚಿಸಿತ್ತು.

ಕಾಳಂಗೂರು ತಾ॥ ಆ॥ ಮೆ॥ ರಂಗನಾಥರಾಯರಿಗೆ ಮೈಸೂರು ರೆಗ್ಯುಲೇಷನು ಪ್ರಕಾರ ೧೯೦೫ನೇ ಜನವರಿ ೨೦ ರಿಂದ ೩೦ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು. ಆಗ್ಗೆ ತಾ॥ ಕಿರಸ್ತೇದಾರ್ ಸೀ॥ ಕ್ಲಾಸ್ ಮ್ಯಾಜಿಸ್ಟ್ರೇಟ್ ಆಫೀಸನ್ನು ವಹಿಸಿದ್ದರು.

ಅಡಿ॥ ಕ॥ ಮೆ॥ ಕೆ. ಎಸ್. ದೊರೆಸ್ವಾಮಿ ಅಯ್ಯರವರು ಹಾಸನ ಮತ್ತು ಬೇಲೂರಿನ ಚಾರ್ಜನ್ನು ಸಕಲೇಶಪುರದ ಸಬ್ ಡಿವಿಜನ್ ಆಫೀಸರು ಮೆ॥ ಬಿ ಆರ್. ಡಬ್ಲ್ಯೂ. ವೆದರಾಲ್ ಸಾಹೇಬರಿಗೆ ೧೯೦೫ನೇ ಮಾರ್ಚಿ ೧೪ರಲ್ಲಿ ವಹಿಸಿದರು.

ಅಡಿ॥ ಕ॥ ಮೆ॥ ಕೆ. ಚಾಂಡಿಯವರಿಂದ ಮೆ॥ ಟಿ. ಆನಂದರಾವ್ ಬಿ. ಯವರು ೧೯೦೫ನೇ ಮಾರ್ಚಿ ೧೪ರಲ್ಲಿ ಮೈಸೂರು ಡಿವಿಜನಿನ ಆಫೀಸು ಚಾರ್ಜನ್ನು ವಹಿಸಿದರು.

ಮೆ॥ ಕೆ. ಎಂ. ವಾಸುದೇವರಾವ್ ಎ. ಸಿ. ಇ. ಯವರನ್ನು ೧೯೦೫ನೇ ಫೆಬ್ರವರಿ ೨೨ನೇ ಕ್ವಾಸ್ ಸೀ॥ ಆ॥ ಎಂಜಿನಿಯರಾಗಿ ೨೦೦೫ನೇ ಏಪ್ರಿಲ್‌ವರೆಗೂ ನೇಮಿಸಿ ಸ್ಪೆಷಲ್ ಡ್ಯೂಟಿಯ ಮೇಲೆ ಸೂ॥ ಇಂಜಿನಿಯರ್ ಆಫೀಸಿಗೆ ಕಳುಹಿಸಿದೆ.

ವಿದೇಶ ವರ್ತಮಾನಗಳು.

ಪಟ್ಟಣ ಆಫೀಸಿನ ಗಣಿಗಳಲ್ಲಿ ಕೆಲಸ ಮಾಡುವುದಕ್ಕೆ ೪೦,೦೦೦ ಕೆಲಸದವರನ್ನು ಕರೆಸಿಕೊಳ್ಳಬೇಕೆಂದು ಅಲ್ಲಿನ ಸರ್ಕಾರದವರು ಸೂಚನೆ ಮಾಡಿದ್ದಾರೆ.

****

ಕಪ್ಪು ಜರ್ಮನ್ ಯುದ್ಧದಲ್ಲಿ ಮಡಿದುಹೋದ ಜರ್ಮನ್ ಸೈನಿಕರಿಗೆ ಮತ್ತು ಅವರ ಬಂಧುಗಳಿಗೆ ಒಂದು ಧೈರ್ಯ ಏರ್ಪಾಡಾಗಿದೆ ಯುದ್ಧ. ಇಷ್ಟಕ್ಕೆ ಬೋಕಿಯೋ ನಗರದಲ್ಲೇ ೧೫೬ ಲಕ್ಷ ರೂಪಾಯಿ ಕೂಡಿ ಇದೆ.

****

ಸ್ವಿಟ್ಸರ್‌ಲ್ಯಾಂಡಿನಲ್ಲಿ ಪರ್ವತದ ಮೇಲಿನಿಂದ ಮಂದುಗಡ್ಡೆಗಳು ಕೆಳಗೆ ಅಪಾಯವಾಗಿ ಉರುಳಿ ಬಂದು ಗ್ರೆಬೆಯೆಲ್ ಎಂಬ ಗ್ರಾಮವನ್ನು ಮುಳುಗಿಸಿತು. ೩೦ ಜನ ಹತರಾದರು; ೫೬ ಮನೆಗಳು ಮುರಿದು ಬಿದ್ದವು.

****

ಅಮೇರಿಕಕ್ಕೆ ಸೇರಿದ ಟಿಳ್ಸಾಸ್ ಡಿಸ್ಟ್ರಿಕ್ಟಿನಲ್ಲಿ ಅಪೂರ್ವವಾದ ಪ್ರವಾಹ ಬಂದು ನೂರಾರು ಮನೆಗಳನ್ನು ಕೊಚ್ಚಿಬಿಟ್ಟಿದೆ. ೩೦—೫೦ ಜನರು ತೀರಿಹೋದರು. ೨೦೦—೩೦೦ ಪ್ರಜೆಗಳು ನಿರ್ಗತಿಕರಾಗಿ ಬೀದಿಪಾಲಾಗಿದ್ದಾರೆ.

****

ಚೋಳಿ ಸ್ಕೂಲುಗಳಲ್ಲಿ ಈಗ ಸಾಯಂಕಾಲ ೭ರ ಲಾಗಾಯು ತು ೦೦ ಘಂಟೆ ವರಿಗೂ, ಸುಪ್ಪಾಹ್ನ ೩ ಘಂಟೆ ಲಾಗಾಯಿಂದ ೫ ಘಂಟೆ ವರಿಗೂ ಪಾಠಗಳು ನಡೆಯುತ್ತವೆ ಸದ್ಯದ ಇನೆಯಪ್ಪ. ಹುಳಿ ಗಳಲ್ಲಿ ವಿದ್ಯಾರ್ಥಿಗಳು ಬೆಳಿಗ್ಯೆ ಹೊತ್ತಿಗೆ ಸರಿಯಾಗಿ ಸ್ಕೂಲಿಗೆ ಬರಪೆ ಲೇಟ್ ಮಾಡಿಕೊಂಡು ಬರುವುದು ಎಲ್ಲಾ ಕಡೆಯಲ್ಲಿಯೂ ಸಾ ಧಾರಣವಾಗಿದೆ ತಾಲ್ಲೂಕು ಜಾಗಗಳಿಗಿಂತ ಹುಳಿಗಳಲ್ಲಿ ರತಕ್ಕ ಜನರಿಗೆ ಇತರ ಕೆಲಸಗಳು ಹೆಚ್ಚಾಗಿರುವುದೇ ಇದಕ್ಕೆ ಕಾರಣವಾಗಿದೆ. ಹೀಗೆ ವಿದ್ಯಾರ್ಥಿಗಳಲ್ಲಿ ಕೆಲವರು ಹೊತ್ತಿಗೆ ಸರಿಯಾಗಿ ಬರುತ್ತಲೂ, ಕೆಲವರು ತಡಮಾಡಿಕೊಂಡು ಬರುತ್ತಲೂ ಇರುವದರಿಂದ ಎಲ್ಲಾ ಬಾಲಕರಿಗೂ ಒಂದೇ ಸಮಯವಾಗಿ ಪಾಠಗಳನ್ನು ಸಡಿಲಿಸುವ ಪ್ರಕ್ಕೆ ಮಾಸ್ತರುಗಳಿಗೆ ತುಂಬಾ ಅಡಚಣೆಯುಂಟಾಗುವ ಕಾರಣ ಹಳ್ಳಿ ಸ್ಕೂಲಿನ ವಿದ್ಯಾರ್ಥಿಗಳು ಅಭಿವೃದ್ಧಿಗೆ ಬರುವುದಕ್ಕೆ ಇದು ಒಂದು ತೊಂದರೆಯಾಗಿರುವ ಹಾಗೆ ಕಾಣುತ್ತೆ. ಆದ್ದರಿಂದ ನನ್ನ ಭಿಪ್ರಾಯದ ಪ್ರಕಾರ ಮಹಾರಾಜ ಸರ್ಕಾರದವರು ಇನ್ನು ಮುಂದೆ ಜೋಬಳ್ಳಿ ಸ್ಕೂಲುಗಳಲ್ಲಿ ಪ್ರಾರ್ಥನಾಕಾಲ ೬ ರಿಂದ ೧೦ ಘಂಟೆ ವರಿಗೆ ಎಂಬುದಕ್ಕೆ ಬದಲಾಗಿ ೧೦ ಘಂಟೆ ಲಾಗಾಯು ೫ ಘಂಟೆ ವರಿಗೆ ಎಂತಲೂ, ಮಧ್ಯಾಹ್ನ ಈಗಿನ ಆಜ್ಞಪ್ತಿಯಂತೆಯೇ ೩ ರಿಂದ ೫ ಘಂಟೆ ವರಿಗೂ ಪಾಠಗಳು ನಡೆಯುವಂತೆ ಹುಕುಂ ಹೊರಡಿಸಿದಲ್ಲಿ ಹೋಬಳಿ ಸ್ಕೂಲುಗಳಲ್ಲಿ ಬಾಲಕರೆಲ್ಲರು ಕ್ರಮವಾಗಿ ಜರುಗಾಬುನುವೆಪಕ್ಕೂ, ಪಾಠಗಳು ಒಂದೇ ಸಮವಾಗಿ ನಡೆಯುವುದಕ್ಕೂ ಅವಕಾಶ ಉಟ್ಟಾಗಿ ಹಳ್ಳಿ ಸ್ಕೂಲುಗಳು ಈಗ್ಗಿಂತಲೂ ಉತ್ತಮ ಸ್ಥಿತಿಗೆ ಬರುವುದೆಂದು ಹಾರೈಸುತ್ತೇನೆ.

ಬಾಲವಿದ್ಯಾರ್ಥಿಪರ್ಥಕ.

ನೆಲಮಂಗಲದ ವಿಚಾರವು.

ಅಯ್ಯಾ,

ಕಳೆದ ತಿಂಗಳು ೭೦ ನೇ ತಾ ತನ್ನು ಪತ್ರಿಕೆಯಲ್ಲಿ ಕಂಡಂತೆ ಬೀಕಾರ ರಾಮದಾರರು ಈ ಊರಿಗೆ ದಯಮಾಡಿದ್ದಾಗ್ಯೆ ಅವರಲ್ಲಿ ಭಕ್ತಿಯುಳ್ಳ ಸಾಶ್ವೀಕರೆಲ್ಲಾ ಸೇರಿ ತನ್ನ ಶೈಲಪುಷ್ಪ ಚಂದಾ ಹಾಕಿ ಅವರಿಗೆ ಒಪ್ಪಿಸಿದರು. ಈ ಚಂದಾಪಟ್ಟಿಗೆ ನನ್ನು ಅನುಲ್ಲಾ ರಖಂ ಕಿರಸ್ತೆದಾರರೂ ಸೇರಿದ್ದರೆಂತ ಕೇಳುತ್ತೇವೆ. ಆದವಾತ್ರ ಸ್ಕೂಲ್ ಅವರುಗಳು ಶೈಕರು, ಪಟೇಲ್ ಠಾನುಭೋಗರು ಗ್ರಾಮಸ್ಥರು ಮುಂತಾದವರಿಂದ ಕಾಣಿಕೆಯನ್ನು ವಸೂಲ್ ಮಾಡಿದ ಹಾಗಾಯಿ ತೇ ? ಸರ್ಕಾರದ ನೌಕರರಾದ ಮಾತ್ರನೇ ಚಂದಾ ಹಣ ಕೊಡಬೇಕಾದದ್ದೇ ? ಅವರು ಮಾಡಿದ ಅವರಾಧವೇನು ? ಕಾಣಿಕೆಯನ್ನು ಕೊಡಿಸಿದ್ದರೆ ಕ್ರಿಮಿನಲ್ ಪ್ರಾಸಿಕ್ಯೂಷನ್ ಮಾಡುತ್ತೇನೆಂತ ಹೆದರಿ ಸಿದರೇ ? ಇದಕ್ಕೆಲ್ಲಾ ಈಗಿನ ಕಾಲದಲ್ಲಿ ಯಾರಾದರೂ ಹೆದರಿಯಾರೇ ?

ಈ ಊರಿನೊಳಕ್ಕೆ ತ್ಯಾಮಗೊಂಡ್ಲು ಮುಂತಾದ ಸ್ಟೇಗ್ ತಗಲಿದ ಸ್ಥಳಗಳಂಥ ಬಕೆಗಳಿದೆಯೆಂದು ಸರ್ಕಾರದವರು ಸಾರಿಬಿಟ್ಟಿರೆ. ಆಕಸ್ಮಾ ಈ ಊರಿನ ಜನಗಳು ಮೊನ್ನೆ ತಾನೇ ಬಳಿಕ ಕಷ್ಟವನ್ನು ಅನುಭವಿಸಿ, ಸೇರಿಕೊಂಡಾಡುವದನ್ನು ಮರೆತು ಸರ್ಕಾರದವರ ಪೃಷ್ಟಕ್ಕೆ ಬೀಳದಂತೆ (?) ಗುಟ್ಟಾಗಿ ಆ ಪ್ರಾಂತ್ಯದ ಜನಗಳನ್ನು ಸೇರಿಸಿಕೊಳ್ಳುತ್ತಿದ್ದಾರೆಂಬುದು ಬಹಳ ಭೀತಿಯನ್ನು ಕೆಲವರಲ್ಲಿ ಉಂಟುಮಾಡಿದೆ. ಸರ್ಕಾರದವರಿಗೆ ಮ್ಯುನಿಸಿಪಲ್ ಮೆಂಬರುಗಳೂ, ಗ್ರಾಮಪಾಧ್ಯಕ್ಷರುಗಳೂ ಮುಂತಾದವರ ಸಹಾಯವಾಗದೇ ಹೋದರೆ ಅವರ ಪ್ರಯತ್ನಗಳೆಲ್ಲಾ ನಿಷ್ಪ್ರಯೋಜನವಾಗುತ್ತವೆ. ಕೊಸಿಗೆ ಕೆಡುವವರು ಸರ್ಕಾರದವರೋ ಊರಿನ ನಿವಾಸಿಗಳೋ ?

ಪೊಲಬು ಈ ಊರಿನ ಮುನಸಿಫ್ ಜೋರ್ಟಾ ಆಗಿದ್ದ ಬಂಗಲೆಯು ಪೇಟ್ಟಾರ್ಡಗಲ್ಲಿ ಒಂದು ಅರಳಿಯ ಸಸಿಯು ಹುಟ್ಟಿಕೊಂಡು ಆ ಕಟ್ಟಡಕ್ಕೆ ಬಹಳ ಅಪಾಯವನ್ನು ತರುವಂತಿದೆ. ಇಲ್ಲಿನ ಡಿ. ಬಿ. ಡಬ್ಲ್ಯಿಯೂ. ಇಲಾಖೆಯವರು ತಮಗೆ ಸೇರಿದ ಕಟ್ಟಡವನ್ನು ನೋಡಿ ಅದನ್ನು ಕೊಡ್ಡೆ ತೆಗಿಸಬೇಕಾಳು.

ಈ ಊರಿನ ಹಣ ಬಹಳ ಕೆಟ್ಟಾರ್ಡಗಿದೆ ಯಾವಾಗಲೂ ಕೆಟ್ಟ ಗಾಳಿ, ಸೊಣಿ, ಬಸಲು ಅಪರೂಪವಾಗಿರುವದು. ಇವುಗಳಿಂದ ಬಹಳ ಬೇಜಾರಾಗಿದೆ. ಊರಲ್ಲೆಲ್ಲಾ ಕೆಣ್ಣಿ ಉಪದ್ರ, ಧಿಕ್ ಜ್ವರಗಳು ಕಾಡುತ್ತಿವೆ.

ಯು. ಪ ಕ.

ಸಂಸಾರಿಯು ಕ್ರೀಸ್ತ ಸ್ವಾಮಿಯ ಮೇಲು ಪಜ್ಞೆಯನ್ನು ಅನುಸರಿಸುವುದು ಹೇಗೆ ?

ಅಯ್ಯಾ,

ಶ್ರೀ ಯೇಸು ಸ್ವಾಮಿಯು ದೇವರ ಕುಮಾರನಾಗಿ ಸರ್ವಾವತಾರವನ್ನೆತ್ತಿ ಭೂಲೋಕಕ್ಕೆ ಸಂಬಂಧವಾದ ಕಷ್ಟಗಳನ್ನೆಲ್ಲಾ ಅತನು ಇನುಭವಿಸಿ ಎಲ್ಲಾ ತರಹಾವಾದ ಸಾಪಗಳನ್ನು ಸಹಾ ಜಯಿಸಿರುವ ದರಿಂದ ಆತನ ಮೂಲಳಿನೇ ಮನುಷ್ಯರು ಕಥ್ಯತಿ ಹೊಂದಬೇಕೆಂಬ ಚಿತ್ತ ಬೈಬಲ್ಲಿನಿಂದಲೂ ಕ್ರೈಸ್ತರ ಬೋಧನೆಗಳಿಂದಲೂ ತಿಳಿದು ಬರುತ್ತದೆ. ಇಂಥಾ ಮಹಾ ಪುರುಷನ ಜೀವಮಾನದ ಚರಿತ್ರೆಯನ್ನು ಮನುಷ್ಯರಾದ ನಾವುಗಳೆಲ್ಲರೂ ಒಂದು ಮಾದರಿಯಾಗಿಟ್ಟುಕೊಳ್ಳ ಬೇಕೆಂದು ಸಜಾ ಗೊತ್ತಾಗುತ್ತೆ.

ಆದರೆ ದೇವರ ಕುಮಾರನು ಸರ್ವಾವತಾರವನ್ನೆತ್ತಿ ಈ ಲೋಕದಲ್ಲಿದ್ದಾಗ್ಯೆ ಮನುಷ್ಯರಂತೆ ಆತನು ಮದುವೆ ಮಾಡಿಕೊಂಡು, ಮಕ್ಕಳುಮರಿಗಳನ್ನುಂಟುಮಾಡಿ ಸಂಸಾರಕ್ಕೆ ಸಂಬಂಧವಾದ ಕಷ್ಟಗ ಳನ್ನು ಅನುಭವಿಸಿರುವುದಿಲ್ಲ.

ಈ ಭಾಗದಲ್ಲಿ ಮನುಷ್ಯರು ಜತನನ್ನು ಮಾದರಿಯಾಗಿ ಜ್ಞಾಗೆ ಇಟ್ಟುಕೊಳ್ಳಬೇಕು? ಭಯವಿಟ್ಟು ತಮ್ಮ ಪತ್ರಿಕಾ ಮೂಲಕ ತಿಳಿಸಿ.

ಶೆ. ನಂಜುಂಡಯ್ಯ,
ಹೊಳೆ ನರಸೀಪುರ. ಸ್ಟೂಡೆಂ.

[ಮನುಷ್ಯನು ಬ್ರಹ್ಮಚರ್ಯವೇ ಮೊದಲಾದ ಯಾವ ಶ್ರೇಷ್ಠ ಮಟ್ಟದಲ್ಲಿ ಇದ್ದರೂ ಈ ಜೀವಮಾನ ಕಾಲದ ಅಸಂಖ್ಯಾತವಾದ ಪ್ರತಿ ಸನ್ನಿ ವೇಶ ಭಾಗವನ್ನೂ ಯೇಸು ಸ್ವಾಮಿಯು ಆಚರಣೆಯಲ್ಲಿಟ್ಟು ತೋರಿಸಿದ್ದ ಪ್ರಕಾರವೇ ಆಚರಿಸುತ್ತಾ ಬರಬೇಕೆಂಬುದು ಕ್ರೈಸ್ತ ಮತ ಬೋಧನೆಯಲ್ಲಾವೆ. ಒಬ್ಬ ಪುರುಷನು ಪ್ರಪಂಚದಲ್ಲಿರತಕ್ಕ ಪ್ರತಿ ಒಬ್ಬ ಮನುಷ್ಯನಿಗೂ ಅವನವನ ಸ್ಥಿತಿಗತಿ ಅಧೀನ್ಯಗಳಿಗೆ ಅನುಗುಣವಾಗಿ ಸದಿಲು ಮೇಲುಪಟ್ಟ ಪಾಠ ಕೊಡತಕ್ಕವನು ಗಂಡಸೆಂದು ಇಟ್ಟುಕೊಳ್ಳೋಣ. ಆಗ್ಗೆ ಈ ಗಂಡಸು ಪದನು ಪ್ರಪಂಚದಲ್ಲಿರುವ ಸಮಸ್ತ ಹೆಂಗಸರಿಗೂ ಅವರವರ ಪ್ರತಿ ವಿಷಯ ಅಧೀನ ಪ್ರತಿ ಸಂಪರ್ಕದ ಸಂತತಿಯ ಸೂತ್ರಗಳನ್ನೂ ತಾನೇ ಆಚರಿಸಿ ತೋರಿಸಿ ಹೋಡುವುದಕ್ಕಾದೀತೇ ? ಆದುದರಿಂದ ಸರ್ವ ಸಾಧಾರಣವಾಗಿ ಗಂಡಸೂ ಹೆಂಗಸೂ ಯಾವ ಸ್ಥಿತಿಗತಿಯುಳ್ಳವರೇ ಆಗಲಿ ಕ್ರೈಸ್ತನು ತೋ ಕೊಟ್ಟಿರುವ ಸದ್ಬೋಧೆಯಂತೆಯೂ, ಆತನು ಆಚರಿಸಿ ತೋರಿಸಿ ಸಾಮಾನ್ಯ ಸದಚಿಯಂತೆಯೂ ಕ್ರೈಸ್ತ ಮತವನ್ನು ಅನುಸರಿಸಿ ಮನೋಮಾಕ್ಯಾಯಗಳಲ್ಲಿ ಸದ್ಭಕ್ತರೂ ಸದಾಚಾರಿಗಳೂ ಸಜ್ಜನರೂ ಆಗಬೇಕೆಂಬುದೇ ಕ್ರೈಸ್ತಮತ ಸಾರಾಂಶವು.—ಎಡಿ]

ಮಾ ನೀ. ಬಾಲರ ಧರ್ಮಸಂಘವು.

ಅಯ್ಯಾ,

ತಮ್ಮ ಬ್ಲಾಸ್ಫೆಮಾದ ಪತ್ರಿಕೆಯೊಳಗೆ ಈ ಮೇಲ್ಕಂಡ ಸಂಘದ ವಿಷಯವಾಗಿ ಕೆಲವು ಮಾತುಗಳ ಹಿಂದೆ ವ್ಯಾಪಟಿಸಿದುದನ್ನು ಓ ನೋಡಿ ಅತ್ಯಾನಂದವಟ್ಟನು. ತನ್ನ ಬಾತ್ಮಿದಾರರು ನಿಜವಾಗಿ ತಿ ಳುವಂತೆ ಎಲ್ಲವೂ ಸರಿಯಾಗಿಯೇ ಇರುತ್ತದೆ; ಆದರೆ ಇಷ್ಟಕ್ಕೆ ತ್ಯಂತ ಅಭಿಮಾನವಿಂದ ವಿಕ್ಷಿಪವಾಗಿ ಸಹಾಯಮಾಡಿ, ಸಂಘವನ್ನು ಪೋಷಣೆಮಾಡಿ, ಈ ಕಾರ್ಯದಲ್ಲಿ ಆರಂಭದಿಂದಲೂ ಮುಂಚೂಣಿ ಗಳಾಗಿದ್ದುಕೊಂಡು ಇರುವ ದೇವರತ್ಯಲರೊಳಗೆ ಮಾ ವಾ. ವೀ ಸುಬ್ರಹ್ಮಣ್ಯಶೆಟ್ಟರೂ ಅವರ ಸಹೋದರರುಗಳೂ ಮುಖ್ಯರಾಗಿ ರೆಂದು ತನ್ನ ಬಾತ್ಮಿದಾರರು ಕಾಣಿಸಬೇಕಾಗಿದ್ದಾರು, ಒಂದುವೇ ಅವರು ಮರೆತುಬಿಟ್ಟಂತೆ ತೋರುತ್ತಿದೆ

ಮಹನೀಯರಾದ ಮಾ. ವೀ. ಸುಬ್ರಹ್ಮಣ್ಯಶೆಟ್ಟರು ಮತ್ತು ಸಹೋದರರು ನನ್ನು ದೇವದಲ್ಲಿನ ವಿಕ್ಟೋರಿಯನರಿಗೆ ಒಪ್ಪಗಿರುವ ಸ ರ್ಥಕೆಯನ್ನು ಚೆನ್ನಾಗಿ ಗ್ರಹಿಸಿ, ಇವರ ಕಷ್ಟನಿವಾರಣೆ ಮಾಡಬೇ ಂದು ಒಂದು ಸುಲಭೋಪಾಯವನ್ನು ನಿರ್ಧಾರ ಮಾಡಿಕೊಂಡಿ ರುವರು. ಈ ಉಪಾಯವೆ ನನ್ನು ದೇವದಲ್ಲಿನ ಸಕಲರೂ ಸಮಾನ ರುಪಾದಾಗಿಯೂ ಬಹು ಜನಕ್ಕೆ ಉಪಕಾರುಪ್ರವಾಪದಾಗಿಯೂ ಇರುತ್ತದೆ. ಇದು ಸರ್ವಸಾಮಾನ್ಯವಾಗಿದ್ದರೂ, ಇದನ್ನು ಕಂಡಿ ಹಿಡಿದು ಇಸ್ಪಷ್ಟವಾದ ಆಹರಣೆಯಲ್ಲಿ ತಂದಿರುವವರು ಇವರನ್ನು ಬಿ ಟ್ಟರೆ ಬೇರೊಬ್ಬರು ಅತಿವಿರಳ. ಈ ವಿಷಯದಲ್ಲಿ ಸಕಲರೂ ಇವ ರೆಲ್ಲಾ ಮೇಲುಪಟ್ಟಣವನ್ನು ಅನುಸರಿಸುವುದೇ ಧರ್ಮಬದ್ಧ ವಿದ್ಯಾಬುದ್ಧಿಯುಳ್ಳವರಿಗೆ ಧನನಿರುವೆದು ಅವಶ್ಯಕ; ಧನವಿಲ್ಲದವರಲ್ಲಿ ಧರ್ಮಬುದ್ಧಿ ಕೂಡ ಸಾಮಾನ್ಯ. ಇನೆರವರ ಸಮ್ಮೇಳನದಿಂದುಂಟಾಗುವ ಸುಖವನ್ನು ಅನುಭವಿಸುವವರಿಗೆ ತಿಳಿಹುಬೇಕೇ ಹೊರತು ಬರೆದು ತಿಳಿಸಬೇಕಾದರೆ ಆಸಾಧ್ಯ. ಈ ವಿಷಯಗಳಲ್ಲಿ ಖಚಿತವಾಗಿ ಅನುಭವಸ್ಥರಿಗೆ ಮೇಲ್ಕಂಡ ಸುಬ್ರಹ್ಮಣ್ಯಶೆಟ್ಟರು ಮತ್ತು ಸಹೋದರರು ಕನ್ನಡ ಕ್ರೈ ಯಲ್ಲಾದಮಟ್ಟಿಗೂ ಈ ಧರ್ಮಕಾರ್ಯಕ್ಕೆ ಸ್ವದನವಾಗಿ ತಮ್ಮ ಸುಮನ ಧನಗಳನ್ನು ವಿನಿಯೋಗಿಸುತ್ತ ಬರುತ್ತಿರುವುದಾರೆ

ಈ ಮೇಲ್ಕಂಡ ಕಾಣಿಸಿರುವ ಉಪಾಯವು ಇನ್ನೆ ಮೆಗೆ ಕೆಟ್ಟ ಪು ಬೂರೀ ಕುಟುಂಬ. ಇದರಲ್ಲಿ ಬಂದು ಚಿನ್ನ ವೋರು ನೆಂದಲು ಗೊಂಡು ಪ್ರತಿಯೊಬ್ಬರೂ ತಮ್ಮ ಸ್ವಂತಕ್ಕೆಂದು ನಿಯಮಿಸಿಕೊಂಡಿ ಹಣವಲ್ಲಿ (ಇಪ್ಪತ್ತೈ ನಿಮಿಷಗಳಿಪ್ಪಿ) ಸಲ್ಪವನ್ನು ಧರ್ಮಕಾರ್ಯಕ್ಕಾ ಗಿ ವಿನಿಯೋಗಿಸಲು ತಮಲ್ಲಿಯೇ ಒಬ್ಬನಾಬ ಸಂಘದ ಖಜಾನೆಚಿಯಾ ವರಕ್ಕೆ ಪ್ರತಿ ಶುಕ್ರವಾರದಂದು ಕೊಟ್ಟು, ಅವರಿಂದ ರಸೀದು ಪಡೆ ಯಬೇಕು. ಇವರ ಸಂಖ್ಯಾತಿಶಯದಿಂದ ಈ ಪ್ರಕಾರವಾಗಿ ಸ್ವಲ್ಪ ಸ್ವಲ್ಪವಾಗಿ ಕೂಡುವ ಹಣವು ಅಲ್ಪಕಾಲದಲ್ಲಿಯೇ ಸಾರಾಧ್ಯವಾಗಿ ಬೆ ಳೆದುಬರುವುದು. ಹೀಗೆಯೇ ಇದು ದೈವಕೃಪೆಯಿಂದ ಅಭಿವೃದ್ಧಿ ಯಾಗುತ್ತ ಬಂದಲ್ಲಿ ಈಗಿನಿಂತ ಮಹತ್ಕಾರ್ಯಗಳನ್ನು ಸಂಪಾದಿ ಸಿಕೊಳ್ಳಬಹುದು. ಸದ್ಯ ದೇವದಲ್ಲಿ ಇಂತಹ ದೊಡ್ಡ ಸಂಸ್ಥಾಗಳು ಅನೇಕವಿರುವಿದರಿಂದ ಆ ಕುಟುಂಬಗಳಲ್ಲಿರುವ ಇಂತಹ ಉಪಾಯ ವನ್ನೇ ಅನುಸರಿಸುತ್ತ ಬಂದಲ್ಲಿ ಧರ್ಮ ಸಂಘಗಳು ಅನೇಕವಾಗಿ ಏ ರ್ಪಟ್ಟು, ಎಷ್ಟು ಜನ ವಿಕ್ಷಿಪ್ತವಿದವರಿಗೆ ಮಾರ್ಗವಾಗುವುದು !

ಇದೂ ಅಲ್ಲದೆ ಮೇಲೆ ಕೆಟ್ಟವರುಗಳು ಕೋಲಾರದ ಗಣಿಗಳ ಸೀ ಮೆಯಲ್ಲಿ ಭೂರೀ ವರ್ತಕರಾಗಿದ್ದುಕೊಂಡು, ಪ್ರಜಾನುರಾಗಿಯೂ ಕ್ಷಾರಾಗಿಯೂ ಕೆಸರುವಾಸಿ ಪಡೆದವರಾಗಿಯೂ ಇರುವೆದರಿಂದ ಆ ಪ್ರಾಂತ್ಯದಲ್ಲಿನ ಈಟುಬ್ಯಾಕ್ಟುದಾರರುಗಳೂ ವಕೀಲರುಗಳೂ ಜವಿಜಾ ನುದಾರರೂ ವರ್ತಕರೂ ಸದಕಾರಿ ಉದ್ಯೋಗಸ್ಥರೇ ಮೊದಲಾದವರ ದಲ್ಲಿ ತಮ್ಮ ಲೋಕವ್ಯವಹಾರವನ್ನು ವಿನಿಯೋಗಿಸಿ, ಅನರೆಲ್ಲಾ ಧರ್ಮಮಾರ್

ಪಡ್ತರಿಲೂ, ದೊಡ್ಡಿಗೆ ಒಂದು ಭಾಗದಲ್ಲಿಯೂ ಮೇಲ್ಚಾವಣಿ ಇಲ್ಲದುದರಿಂದಲೂ ತೊಡೆಯುದ್ದದ ಹೊಳಸಲ್ಲಿ ರಾಸುಗಳು ನಿಂತು ಕೊಂಡು, ತಲೆಯ ಮೇಲೆ ನಿರಂತರವಾಗಿ ಮಳೆ ಸುರಿಯುತ್ತಿದ್ದರೆ, ಅವು ಎಷ್ಟು ಸಾಧಸ್ಥೆತವಾಗಿರುವವೆಂಬುದನ್ನು ಸಮ್ಮ ವೈಸ್ ಪ್ರಸಿ ಡೆಂಟರು, ಮ್ಯುನಿಸಿಪಲ್ ಕಮಿಷನರುಗಳೂ ಆಲೋಚಿಸಿ ಬಾರದೇ ? ಹೊಸದಾಗಿ ದೊಡ್ಡ ಭಾವಣಿ ಇಡಿಸಿ ಸೊಪ್ಪಿ ಕಟ್ಟಿಸಬೇಕೆಂದು ಹಣ ಸಹ ಸ್ಯಾರ್ಜ್ಜ ಆಗಿ ೩—೪ ನರುಷಗಳಾದರೂ ಸುಮಗು ಸ್ಯಾಕೆಗಳ ವಿಷಯದಲ್ಲಿ ಪ್ರಯ ಬಾರದ್ದು ವ್ಯಸನತ್ತೆ.—ಈ ಊರಿನಲ್ಲಿ ಪ್ಲೇಗು ಪ್ರಾರಂಭವಾದ ಒಂದು ತಿಂಗಳಲ್ಲಿ ೬೦—೬೫ ಮಂದಿ ಅದಕ್ಕೆ ಬಲಿಯಾಗುತ್ತಾದರು. ಈಗ ಮಳೆ ಸುರಿಯುತ್ತಿದ್ದಾಗ್ಯೂ ಸುವಾರು ಒಂದೆರಡು ವಾರಗಳಿಂದ ವಿಶೇಷ ಗಲಾಟೆ ಇಲ್ಲ. ಊರಲ್ಲಿ ಆಗಾಗ ಇಲ್ಲ ; ಪುನ್ಹಾನಲ್ಲಿ ವಾಸಿಸೋಣವೆಂದು ಹೇಗಾದರೂ ಮಾಡಿ ದುಡ್ಡು ಕೊಡುತ್ತೇನೆಂದರೂ ಬಿಡುವರು ಸಿಕ್ಕುವದಿಲ್ಲ. ಗೌರ್ನ್‌ಮೆಂಟ್ಸಸವರು ಬಿಡುವರನ್ನು ತರಿಸಿ ಪ್ರಜೆಗಳಿಗೆ ಅನುಕೂಲವಡಿಸಿಕೊಡ ಬೇಕೆಂದು ತುಂಬಾ ಕೊಟ್ಟಿದ್ದರೂ ಫಲವಾಗದೆ ಇದೆ.—ತನ್ನ ಗದ್ದಿಗೆ ಕಳ್ಳಿ ತಿನ್ನುವದಕ್ಕೆ ಬಂತೆಂದು ಜ್ಯೋತಿ ಪಣದ ಚಿನ್ನ ಕಟ್ಟುವ ಒಂದು ಮುಳಗಂದಿಯನ್ನು ಹೊಡೆದು ಕೊಂದು ಹಾಕಿದ ಅಮ್ಮುಲ್ ಗನಿ ನಮಗೆ ಒಂದು ತಿಂಗಳು ತಡವಾಗಿ ತಂದ ಸುದ್ದಿಯಾಯಿತು.

ಚಿಕ್ಕಮಗಳೂರು.—ಕೋವಿಯಲ್ಲಿ ಸುವಾರು ಎಂಟು ಜನರು ಪ್ಲೇಗಿನಿಂದ ಮೃತಪಟ್ಟರು. ಅವ್ವರಲ್ಲಿ ಆರೇಳರು ಮನೆಗಳನ್ನು ಬಿಟ್ಟು ಬೇರೆಬೇರೆ ಕಡೆಗಳಿಗೆ ಹೊಲಿಸಿಕೊಂಡರಷ್ಟೆ. ಆ ಸೈಕೆ ಎಲ್ಲರಿಗೆ ಗುಡಿಸಲಿನಲ್ಲಿಯೇ ರೋಗ ತಗಲಿದಸಂತರ ಮಳೆ ಹಾಳಾದು ಬೆಳೆಯಾಂದಾದ ಭೀತಿಯನ್ನು ಸಹಿಸಲಾರದೆ ತಾವು ಇದ್ದ ಮನೆಗಳನೇ ಬಂದರು. ಈಗ ರೋಗಿಗೆ ಗುಣವಾಗುತ್ತದೆ. ಪೇಟೆಯಲ್ಲಿ ಕೆಲವರಿಗೆ ರೋಗಗಳಲಿತ್ತು, ಅವೆಲ್ಲರೂ ಬೇವರ ದಯದಿಂದ ಗುಣವಾಗುತ್ತಿರುವದನ್ನು ನೋಡಿ, ಊರಿನ ಜನರಿಗಿದ್ದ ಭಯವು ಸ್ವಲ್ಪಮಟ್ಟಿಗೆ ಇಮ್ಮಿಯಾಗಿದೆ ಎಂದು ಹೇಳಬಹುದು. ಹರಿಮಗಳೂರಿನಲ್ಲಿಯೂ ಅದರ ಸಮಿಪದ ಳ್ಳಿರುವ ಒಂದು ಗ್ರಾಮದಲ್ಲಿಯೂ ರೋಗವು ಇನ್ನೂ ಇರುತ್ತದೆ — ಇಲ್ಲಿ ಹೊಸದಾಗಿ ಇಟ್ಟಿರುವ ನೇಟಿವ್ ಆಸ್ಪತ್ರೆಯಲ್ಲಿ ರೋಜೀನಾ ಸರ್ಕಾರಿ ಮೊದಲ್ತು ಸ್ಥಾಂಪಿಯುತೆ ಎಂದು ಬಿಷಧಿಯನ್ನು ತೆಗೆದು ಕೊಳ್ಳುತ್ತಲಿರುವರು.—ಇಲ್ಲಿ ಮಳೆಯು ಎಡಬಿಡದೆ ಸಾರಾಂಶದಲೂ ಬಿಡದೆ ಸುರಿಯುತ್ತಲೇ ಇರುವದು. ಇದು ಮಲೆನಾಡು ; ಆದ್ದರಿಂದ ಈ ಕಾಲದಲ್ಲಿ ಈ ಪ್ರಾಂತ್ಯ ಮಳೆ ಯಾವಾಗಲೂ ಹೀಗೇ ಸುರಿಯುವದು ಪದ್ಧತಿ. ಈ ಕಾಲದಲ್ಲಿ ಮುನಸಿಪಾಲಿಟಿಯವರು ಊರಿನ ಪಾಕೇಜ ವಿಷಯದಲ್ಲಿ ಸ್ವಲ್ಪ ವಿಗಾಕೊಡುವದು ಒಳ್ಳೇದು. ನೈ ಥ ಪ್ರಸಿಡೆಂಟರು ಈ ಊರಿಕೆ ಸುತ್ತಲೂ ಇರುವ ಬೆಲ್ಲ ಪುತ್ತು ಪ್ರಸ್ತಿನ ಭಾಗದಲ್ಲಿರುವ ನೀರಿನ ಕಾಲಿನೆ, ಈ ಪ್ರಾಂತ್ಯವಾರಿಕ್ಕೆ ಬಂತಾವರ್ತಿಯಾದರೂ ಹೋಗಿ ನೋಡುತ್ತಲಿದ್ದರೆ ಸಾರ್ವಜನರು ಬರುತ್ತಾರೆಂಬ ಭೀತಿ ಸನ್ಣ ಸಣ್ಣ ಕೆಲಸಗಳಲ್ಲಿ ಹುಟ್ಟ ಆಯಾ ಸ್ಥಳಗಳನ್ನು ಗರೀಜಾಗದಂತೆ ನೋಡಿಕೊಳ್ಳಬಹುದು.

ಅರಕಲಗೂಡು.—ಈ ವಾರದಲ್ಲಿ ಸ್ವಲ್ಪ ಸೋನೆ ಕಮ್ಮಿಯಾಗಿದೆ. ಆದರೂ ಸಂತೆಯು ಏಪಸರು ಮಳೆ ಬಂದು, ಜನಗಳಿಗೆ ಕಷ್ಟ ತಪ್ಪಿದಲ್ಲ. ಈ ಊರಲ್ಲಿ ಬೆಳವ್ತಿ ಸ್ಥಳಗಳಲ್ಲಿ ಲಾಂಪ್ರಗಳಲ್ಲ. ಕತ್ತಲೆಯಲ್ಲಿ ಸಂಚಾರ ಮಾಡುವದು ಕಷ್ಟವಾಗಿದೆ. ಲಾಂಪ್ರದ ವಿಷಯ ಕಂಟ್ರಾಕ್ಟ್ ತೆಗೆದ್ದಾಗಿ ಮೊದಲೇ ಬರಿಯಲ್ಪಟ್ಟಿತ್ತಷ್ಟೆ ; ಆ ಮನುಷ್ಯನ ಜರ್ಜಿ ಇನ್ನು ವ್ಯವಸ್ಥೆಯಾಗಲಲ್ಲ. ಅವನು ಈ ವಿಷಯವಾಗಿ ಮೇಲಕ್ಕೆ ಬರೆದುಕೊಂಡಿದ್ದ ಅರ್ಜಿಗಳು ಈ ತಾಲ್ಲೂಕಿನಲ್ಲಿ ಎಂದಿನ ತಾಲ್ಲೂಕಿನವರು ಇನ್ನೂ ನಿಗಾ ಕೊಡಲಿಲ್ಲ. ಇತರ ಕೃಳಗಳಲ್ಲಿ ಮುನಸಿಪಲ್ ಲಾಂಪ್ರಗಳನ್ನು ಕಟಾಬ್ಸಕ್ಕೆ ಕೊಟ್ಟ ಮಿತ್ತಾರೆ. ಅಮಾನಿಯಲ್ಲಿ ಮಾಡುವದಕ್ಕಿಂತ ಕಂಟ್ರಾಕ್ಟ್ ಕೊಡುವದು ಸರ್ಕಾರಕ್ಕೆ ಲಾಭವಾಗಿಯೂ ಜನಗಳಿಗೆ ಅನುಕೂಲವಾಗಿಯೂ ಇದ್ದರೂ ಈ ವಿಷಯವನ್ನು ಈ ತಾಲ್ಲೂಕಿನವರು ವ್ಯವಸ್ಥೆ ಮಾಡಿಲ್ಲ ಇರುವರು.—ಪೇಟೆಯಲ್ಲಿ ಸಂಪೂರ್ಣ ಪ್ರವಾಹ ಬಂದ ವರ್ಷದಿಂದ ಟಪಾಲು ಹೋಗುವಷ್ಟಕ್ಕೆ ಜನಗಳು ಸಂಚಾರ ಮಾಡುವಷ್ಟಕ್ಕೂ ಎರಡು ದಿವಸಗಳು ತುಂಬಾ ಕಷ್ಟವಾಗಿತ್ತು. ಈ ಊರಲ್ಲಿ ಒಟ್ಟಿಗೆ ವ್ಯಾಪಾರ ನಡಿಯೋವಂಥ ವರ್ತಕರೆಲ್ಲಾ ಸೇರಿ ಮರಿಗಾಳಿ ಆಫೀಸ್ ಇಟ್ಟುಕೊಳ್ಳುವಷ್ಟಕ್ಕೆ ಏರ್ಪಾಡು ಮಾಡ ಬಾರದೇ ?—ಊರು ಮಧ್ಯೆ ಸ್ಮಶಾನವಿದೆ. ಇದನ್ನು ಬೇರೆ ಸ್ಥಳದ ವ್ಯವಸ್ಥೆ ಮಾಡಿಕೊಡಲು ಸಾರ್ವಜನಿಕರಿಗೆ ಆರೋಗ್ಯಕ್ಕೆ ಅನುಕೂಲವಾಗುವದು —ಈ ಊರಲ್ಲಿ ೩೦೦ ಕುರುಬರ ಮನೆಗಳಿವೆ. ಇವರುಗಳೆಲ್ಲಾ ಒಂದಿಗೆ ನೆಯಾಗಿಲಿಂದ ಜೀವನ ಮಾಡುತ್ತಾರೆ ಆವರ ಬಂಧುವಾಳವಿಲ್ಲದೆ ಕನೇಕಳು ಭೂಮಿಯ ಹತ್ತ ಇರಾರೆ ಒಂದು ಕಾರ್ಬಾನೆಯನ್ನಿಟ್ಟು ಈ ಕುರುಬರಿಗೆ ಉದ್ಯೋಗವನ್ನು ಕೊಟ್ಟರೆ ಕನೇಕ ಕುಟುಂಬಗಳು ತಯಾರಾಗುವವು. ಇದರಿಂದ ಕುರುಬರಿಗೆ ಜೀವನವಾಗುವದಲ್ಲದೆ, ಪಡಗಳಿಗೂ ಉಲ್ಲೋಗವಾಗುವದು. ರಾಮನಾಥಪುರ, ಚಂಗರವಳ್ಳಿ ಪ್ರಾಂತ್ಯಗಳಲ್ಲಿ ಬೋಂಡಿನಿಂದ ಒಳ್ಳೆ ದಪ್ಪನಾದ ಚಾಪೆಗಳನ್ನು ನೇಯುತ್ತಾರೆ

ಚನ್ನೆನಾಯಕನಹಳ್ಳಿ.—ಈ ಪ್ರಾಂತ್ಯ ಅಗಾಧ್ಯೆ ಮಳೆಯಾಗಿ ಎಳ್ಳೆ ಬೆಳೆ ಆಗಲೇ ಬೆಳೆದು ಚನ್ನಾಗಿ ಕೋಳಿಗುತ್ತಿರುವದರಿಂದ ಈ ಬಾರಿ ಅಲ್ಪಸ್ವಲ್ಪವಾದರೂ ಫಲವು ನಿರೀಕ್ಷಿಸಲ್ಪಟ್ಟಿದೆ. ಸಂತೆ ಮಲ್ಲಿ ಹಾಗೂಣವಾಸಿಗಳು ಅನುಕೂಲವಾಗಿದ್ದರೂ ತಂವರ ಹತ್ತ ಕೆಲಸ ಮಾಡುವ ಮಗುಸ್ಥ ಲಾಭ ಕ್ಕಿ ಆಕರಿಸುವ ಪುಣ್ಯಾತ್ಮರ ಸಂಖ್ಯೆ ಅಧಿಕವಾಗುತ್ತಿರಲಾಗಿ ಬಡವರಿಗೆ ಅನಾನುಕೂಲವೇ ಪ್ರಾಪ್ತವಾಗಿದೆ. ಕಂತೆಯಲ್ಲಿ ಕಟ್ಟಿ ಎತ್ತುವ ಹಕೀರರು ಮೊಲಾದವರ ಅವಾಂತ ವನ್ನು ಹೇಳಲಾಗದು. ಇವರಿಂದ ಕೊಳ್ಳುವವರಿಗೂ ಮಾರುವವರಿಗೂ ಅಭ್ಯಂತರವಾಗುವಷ್ಟರಿಂದ ಪೊಲೀಸಿನವರು ಈ ವಿಷಯ ಪೆ ಟ್ಟಿಗೆ ನಿಗಾ ಕೊಡುವದು ಯುಕ್ತವಾಗಿದೆ.—ಜಪಲು ಪ್ಲೇಗ್ ಕಾಲದಲ್ಲಿ ಊರ ಹೊರಗೆ ಜೋಪಡಿಗಳನ್ನು ಕಟ್ಟುಕೊಂಡು ಬೇರೆ ಬೇರೆ ಕೆಡೆ ನೀರನ್ನು ಉಪಯೋಗಿಸುತ್ತಿದ್ದಾಗ್ಯೂ ಪ್ರಾಯಶಃ ಎಲ್ಲರೂ ಸುಖವಾಗಿದ್ದರೆಂದು ತೋರುತ್ತದೆ. ಆಹರೆ ಊರಿಗೆ ಬಂದ ಸಂತರ ಕೆರೆಯ ನೀರನ್ನು ಉಪಯೋಗಿಸುತ್ತಿದ್ದರಿಂದ ಜ್ವರಾಧ್ಯವಡ್ಡಗಳು ಬರಲು ಕಾರಣವಾಯಿತು. ಈ ಊರಿನ ಜನರಿಗೆ ಕೆರೆಯೇ ಮುಖ್ಯಧಾರ, ಕೊಳೆ ಕಲ್ಮಷಗಳ ನೀರಂತು ನಿಂತ ಸ್ಥಳದಲ್ಲಿಯೇ ನಿಂತು ಕೆಟ್ಟುಹೋಗಿದೆ ಕೆರೆಯಿಂದ ಇದಕ್ಕೆ ನೀರು ಬರುವ ಸ್ಥಳವೆಲ್ಲಾ ಮುಚ್ಚಿಹೋಗಿರುವದರಿಂದ ಇದನ್ನು ಉಪಯೋಗಿಸುವವರು ಖಾಯಿಲೆ ಬೀಳದೆ ಹೋಗಲಿಲ್ಲವೆಂದು ತೋರಿಸುತ್ತದೆ ಸರ್ಕಾರದವರಾಗಲಿ ಮುನ್ಸಿಪಾಲಿಟಿಯವರಾಗಲಿ ಪ್ರಾಣವನ್ನು ಪ್ರೀತಿಸುವ ಮನುಷ್ಯರಿದ್ದಾಗಲೀ ಕೊಂಚೆ ಸೇವೆಗಳಿಗೆ ಮಧ್ಯ ಇಟ್ಟಿರುವ ಕಟ್ಟುಪಾಲಿನ ಒಂದು ಸೀನೀರಿನ ಭಾವಿಯನ್ನು ಕಟ್ಟಿಸಿಕೊಟ್ಟರೆ ಅವರೇ ಜನರ ಆರೋಗ್ಯ ಭಾಗ್ಯವನ್ನು ಕಾಪಾಡಿದಂತಾಗುವದು.—ಪರಸ್ಥಳೀಯರಾದ ಸರ್ಕಾರಿ ನೌಕರರಿಗೆ ಇಲ್ಲಿ ತಕ್ಕಂಥ ಮನೆಗಳು ಸಿಕ್ಕುವದು ದುರ್ಲಭವಾಗಿದೆ. ಇಂಥವರು ಪ್ಲೇಗ್ ಕಾಲದಲ್ಲಿ ಜೋಪಡಿ ಕಟ್ಟುಕೊಳ್ಳಬೇಕಾದರೆ ಪೇಚಾಡಬೇಕಾಗಿದೆ. ಅದಕಾರಣ ಈ ಊರಿನ ಹಣಗಾರರಾದರೂ ಒಳ್ಳೇ ಮೈದಾನದಲ್ಲಿ ಯೋಗ್ಯವಾದ ಮನೆಗಳನ್ನು ಕಟ್ಟಿಸಿ ಬಾಡಿಗೆಗೆ ಕೊಡುವಷ್ಟಾದರೆ ಲಾಭ ಸಂಪಾದಿಸ ಬಹುದೆಂದು ಸೂಚಿಸುತ್ತೇನೆ

ತರೀಕೆರೆ.—ಇಲ್ಲಿ ಪ್ಲೇಗ್ ನಿಂತುಹೋಗಿ ೫—೬ ತಿಂಗಳಾಗಿತ್ತು. ಜನರು ತಮ್ಮ ವ್ಯಾಪಾರಗಳಿಂದ ಊರಿಗಳಿಗೆ ಬರುತ್ತಾ ಇದ್ದರು. ಇಷ್ಟರಲ್ಲಿಯೇ ಪ್ಲೇಗು ಕ್ಯಾಂಪಿನಲ್ಲಿಯೂ ಊರಲ್ಲಿಯೂ ತಲೆದೋರಿದೆ. ಕ್ಯಾಂಪಿನಲ್ಲಿಯೇ ಈಗ ೨—೩ ಮರಣಗಳಾಗಿವೆ. ಇನ್ನೂ ಇಬ್ಬರು ಕಾಯಲೆ ಆಗಿದ್ದಾರೆ. ಊರಲ್ಲಿ ಕೆಲವುಕಡೆ ಪೇಚೆ ಗಳಲ್ಲಿ ಇರಿಗಳು ಬೀಳುತ್ತಿತ್ತು. ಈಗ ಇಬ್ಬರು ಸತ್ತರು. ಇನ್ನೂ ಇಬ್ಬರು ಕಾಯಲೆಯಾಗಿರುತ್ತಾರೆ. ಮಳೆ ಈಗ ೨ ವಾರಗಳಿಂದ ಬಿಡಿಪಾಗಿದೆ. ಜನರು ಈ ಕಾಲದಲ್ಲಿ ಮನೆಗಳನ್ನು ಬಿಟ್ಟು ತೆರಿಗಿ ಕ್ಯಾಂಪುಗಳಿಗೆ ಹೋಗಲು ಭೀತಿಯನ್ನುಂಟುಮಾಡಿರುತ್ತದೆ.—ಈ ಊರಿನ ರೈಲ್ವೆ ಸ್ಟೇರ್ಷ ಹತ್ತ ಪ್ರಯಾಣಕರು ಬಂದು ಇಳಿಯುವದಕ್ಕಾಗಿ ಒಂದು ಛತ್ರವನ್ನು ಕಾಲ್ಟೆಗೆಡನೆಂದು ಸಾಹುಕಾರನು ಕಟ್ಟಿಸಿರುತ್ತಾನೆ. ಇದು ಕಟ್ಟಿಸಿ ಬಹು ಕಾಲವಾಗಿದ್ದರೂ ಇದರಲ್ಲಿ ಈ ಊರಿನ ನಿವಾಸಿಗಳೇ ಆಗಿಂದಾಗ್ಗೆ ಬಂದು ಆಶ್ರಯಿಸಿಕೊಳ್ಳುತ್ತಾರೆ. ಈಗ ಕ್ಯಾಂಪುಗಳಲ್ಲಿ ವಾಸವಾಡಿದಂಥ ಪ್ಲೇಗ್‌ಸೊಕ್ಕು ಹಿಡಿದ ವರೆಲ್ಲಾ ಛತ್ರವನ್ನು ಆಶ್ರಯಿಸಿರುತ್ತಾರೆ ಪ್ರಯಾಣಕರಿಗೆ ಇಲ್ಲಿಯವರೆಗೆ ಜಾಗವೇ ಇಲ್ಲವೆಂದು ಹೇಳಬೇಕಾಗಿದೆ. ಇದರಿಂದ ಊರಲ್ಲಿ ಬಹಳ ಬೇಗ ಪ್ಲೇಗ್ ಪ್ರಬಲವಾಗುತ್ತದೆ ಎಂಬುವದಕ್ಕೆ ಸಂಶಯವಿಲ್ಲ. ಸರ್ಕಾರದವರು ಈ ವಿಷಯದಲ್ಲಿ ನಿಗಾಕೊಡಬೇಕಾಗಿದೆ —ಇಲ್ಲಿ ಪ್ರತಿವಾರವೂ ನಡಿಯುವ ಸಂತೆ ದೊಡ್ಡದು. ಪ್ಲೇಗ್ ಗಲಾಟೆಗೆ ಮೊದಲು ಬಂದಾಕ್ಷಭ್ಯದಿಂದ ಊರಿಗೆ ಆಚೆ ಮುಖ್ಯಾಲು ಮೈಲಿ ದೂರದಲ್ಲಿ ಒಂದು ಮೈದಾನದಲ್ಲಿ ನಡಿಯುತ್ತಿದೆ. ಜನರು ಕ್ಯಾಂಪುಗಳನ್ನು ಇದಕ್ಕೆ ಹತ್ತರಹಲ್ಲಿಯೇ ಕಟ್ಟುಕೊಂಡಿರುತ್ತಾರೆ ಈಗ ಆ ಸ್ಥಳಗಳಲ್ಲಿಯೇ ಪ್ಲೇಗ್ ಆಗಿರುತ್ತದೆ. ಆಪಲ್ಲಿ ಈಗ ಮಳೆಗಾಲ. ಮಳೆ ಬಂದರೆ ಸಂತೆಯಲ್ಲಿ ನಿಲ್ಲುವದಕ್ಕೆ ಒಂದು ಮರೆಯಾದ ಜಾಗವೂ ಇಲ್ಲ. ಇದಕ್ಕಾಗಿ ಊರಲ್ಲಿ ಒಂದು ದೊಡ್ಡ ಮಾರ್ಕಟ್ಟು ಕಟ್ಟಬೇಕಾಗಿದೆ. ಈಗ ಅದು ಹಾಳುಬಿದ್ದಿದೆ ಇಲ್ಲಿನ ವರ್ತಕರೂ ಮತ್ತು ಬೇರೆಬೇರೆ ದೊಡ್ಡಮನುಷ್ಯರೂ ಆರ್ಜಿಗಳನ್ನು ಬರೆದು, ಸಂತೆಯು ಈ ಮಾರ್ಕಟ್ಟಿನಲ್ಲಿಯೇ ಆಗಬೇಕೆಂದು ಹೆಚ್ಚು ಪ್ರಾತಿನಿಧ್ಯವರ್ತನ್ನೂ ಅಭಿಪ್ರೇಟು ಅವಿನಾಸರನ್ನೂ ಇಲ್ಲಿನ ಅಮಲ್ದಾರರಲ್ಲಿ ಕಳುಹಿಸಿದ್ದಾರೆ. ಅಮಲ್ದಾರರು ಈ ವಿಷಯವಾಗಿ ಬಹಳ ಆಲೋಚನೆ ಮಾಡಿ ಕೊಂಡಿರುವಂತೆ ತೋರಿಬರುತ್ತದೆ. ಆದರೆ ಇಲ್ಲಿಯವರೆಗೆ ಯಾವ ಅಡ್ಡಿ ಆಟಂಕವಿಲ್ಲದೆ ಸಲೀಸಾಗಿ ಬಂದು ಕೇರಿಯಿಕೊಂಡಿದ್ದಾರೆ. ಇದಕ್ಕೆ ಕಾರಣವೆ ಗೊತ್ತಾಗಲಿಲ್ಲ.—ಈ ಊರಿನ ಮುನಿಸಿಪಾಲಿಟಿಯು ವಿಚಾರಣೆಯು ಅಷ್ಟು ಮುತುವರ್ಜಿಯಿಂದ ನಡಿಸಲ್ಪಟ್ಟುವಂತೆ ಕಾಣುವದಿಲ್ಲ ಜನರು ರಸ್ತೆ ವಿಧ್ಯದಲ್ಲಿ ಹೇಸಿಗೆ ಮುಂತಾದದ್ದನ್ನು ಮಾಡಿದ್ದರೂ ಆ ದಿನವೆಲ್ಲಾ ಆದು ಹಾಗೆ ಬಿದ್ದಿದ್ದಾಗ್ಯೂ ಅದನ್ನು ಎತ್ತುವದನ್ನಾದರೂ ಅಥವಾ ಅದನ್ನು ವಿಚಾರಿಸುವವನ್ನಾದರೂ ಕಾಣದಿರುವದೇನೂ ಅಷ್ಟು ಆಶ್ಚರ್ಯ ಪಡತಕ್ಕ ವಿಷಯವಲ್ಲ. ವಕ್ತು ಮುನಿಸಿಪಲ್ ಆಜ್ಞಾವಾನ್ನು ರೈಲಿಗೆ ಹೋಗುವ ರಸ್ತೆ ಪಕ್ಕದಲ್ಲಿ ಸಾರಿದ್ದಾರೆ. ಅದರಿಂದ ಬರುವ ಪ್ರಯಾಸನೆಯು ಆ ಬೀದಿಯಲ್ಲಿ ತಿರುಗಾಡುವವರ ಮತ್ತು ಪಕ್ಕದಲ್ಲಿ ಅಂಗಡಿ ಮುಂಗಟ್ಟು ಇಟ್ಟುಕೊಂಡಿರುವವರ ಮೂಗುಗಳಲ್ಲಿ ಮುಟ್ಟಿಕೊಳ್ಳುವಂತೆ ಭಯಂಕರವಾಗಿದ್ದಾಗ್ಯೂ ಆ ವಿಷಯವನ್ನು ಗಮನಕ್ಕೆ ತರುವವರಿಲ್ಲ. ತಾರೀಕೇ ಅಮಲ್ದಾರರು ವಿಶೇಷವಾಗಿ ಗ್ರಾಮಾಂತರಗಳ ಮೇಲೆ ಸರ್ಕೀಟ್ ಹಯವಾಡಿರುವವರಿಂದ ಟರ್ನ್ ಗಸ್ತು ಮಾಡಿ, ಆಹರ ಪಾಕೇಜ್ ಮುಂತಾದ ಸ್ಯಾನಿಟರಿ ವಿಷಯಗಳನ್ನು ನೋಡಿಕೊಳ್ಳುವಂತೆ ಭಸಸ್ಥಳಿಯ ಸರ್ಕಾರದವರು ಹೆಸ್ಪಡಲ್ಲೇ ಏರ್ಪಾಡು ಮಾಡಿಸಿದರೆ ಜನಗಳಿಗೆ ತುಂಬಾ ಮೇಲಾದೀತು. ಆಗಲೇ ಈ ಊರಿಗೆ ಸವಿಾಪ ಇಗಿರುವ ಒಂದೆರಡು ಗ್ರಾಮಗಳಲ್ಲಿ ಪ್ಲೇಗ್ ಕೇಸುಗಳೂ ಆಧಂತೆ ಕೇಳುತ್ತೇವೆ. ತಾಪಸ ಮಾಡಿಸಿದರೆ ಪಣ್ಣಾ ತಾಪ ಪಡಬೇಕಾದೀತು.—ನೀಲಿ ವೆಂಕಟಾಚಾರಿಯರು ಈ ಊರಿನಲ್ಲಿ ಸುಮಾರು ನಾಲ್ಕು ವರ್ಷಗಳಿಂದ ಸಬ್ ರಿಜಿಸ್ಟ್ರಾರ್ ಆಗಿದ್ದು ಆಳ ಸ್ವಾತ್ತಾಗಿ ಆತ್ತಿಗುಪ್ಪೆಗೆ ವರ್ಗವಾಗಿ ಹೋದರು. ಅವರು ತುಂಬಾ ಸಜನಿಗಳೂ, ನಿಗರ್ವಿಗಳೂ, ಜನಾನುರಾಗಿಗಳೂ ಆಗಿದ್ದರು. ಇಂಥವರು ಹೋದದ್ದಕ್ಕಾಗಿ ಜನರು ತುಂಬಾ ವ್ಯಸನಪಡುತ್ತಿದ್ದಾರೆ. ಅವರು ಹೋಗುವ ಹಿಂದಿನ ದಿನ ಎಲ್ಲರೂ ಸೇರಿ ಭೋಜನ, ಹರಿಕೆ, ಸಂಗೀತ ಮುಂತಾದವುಗಳನ್ನು ಮಾಡಿಸಿ, ಅವರ ವಿಷಯವಾಪ ತಮ್ಮ ಪ್ರೀತಿಯನ್ನು ಪ್ರಕಾಶಗೊಳಿಸಿದರು.

ಮೊಂಡ್ಯ.—ಈ ಊರಲ್ಲಿ ಪ್ರತಿ ಗುರುವಾರದಲ್ಲಿಯೂ ಸಂತೆ ಮಾಳದಲ್ಲಿ ಜನರು ಸಂತೆಸಡಿಸುತ್ತಾರೆ. ಅಲ್ಲಿ ಅನುಕೂಲವಾಪ ಸ್ಥಳವು ನೆರಳೂ ಇದೆ. ಆದರೆ ದೊಡ್ಡ ವರ್ತಕರು ಮತ್ತು ಅಲ್ಲಿಗೆ ಹೋಗದೆ ಪೇಟೆಯಲ್ಲಿ ಪಮ್ಮತನ್ನ ಅಂಗಡಿಗಳಲ್ಲಿಯೇ ವ್ಯಾಪಾರ ನಡಿಸುತ್ತಾರೆ. ಇನ್ನು ಕೆಲವು ಸಣ್ಣಸಣ್ಣ ವ್ಯಾಪಾರಗಾರರು ಸಂತೆ ನೋಳಕ್ಕೆ ಹೋಗದೆ, ಪೇಟೆಯ ಮಧ್ಯ ರಸ್ತೆಯಲ್ಲಿ ಉಭಯ ಪಾರ್ಶ್ವಗಳಲ್ಲಿಯೂ ಕೂತುಕೊಂಡು, ವ್ಯಾಪಾರಮಾಡುತ್ತಾರೆ ಮತ್ತು ಪೋಸ್ಟಾಫೀಸಿನ ಬಳಿಯಲ್ಲಿಯೂ ವ್ಯಾಪಾರಕ್ಕಾರದೆಯಿಂದ ಕಾದು, ಕವರುಗಳನ್ನು ಕೊಂಡುಕೊಳ್ಳಲೂ ಕಾಗದ ಬಂದಿಷ್ಟರೆ ವಿಚಾರಿಸಲೂ ಅವಕಾಶವಿಲ್ಲ. ಅದು ಪಬ್ಲಿಕ್ ರೋಡಾದ್ದರಿಂದ ಕುದುರೆ ಗಾಡಿಗಳೂ ಸುಸೂತಾಗಾಡಿಗಳೂ ಆಗಾಗ್ಗೆ ಸಂಚರಿಸುತ್ತಿವೆ ಜನರ ಗಲಾಟೆಯ ದೆಸೆಯಿಂದ ಎತ್ತುಗಳುಬೆದರಿ ಕುದುರೆಗಳಂದಂತೂ ಬೆದರಿ ಮನುಷ್ಯರಿಗೆ ನಷ್ಟವಾಪತ್ತು ಆಶ್ಚರ್ಯವಲ್ಲ. ಮತ್ತು ಆ ಜನರು ತಮ್ಮ ವ್ಯಾಪಾರದ ದೆಸೆಯಿಂದ ರಸ್ತೆಯಲ್ಲಿಗಳನ್ನು ರಸ್ತೆಯ ಉಭಯ ಪಾರ್ಶ್ವಗಳಲ್ಲಿಯೂ ಜಾಕಿ ಗಲೀಜುಮಾಡುತ್ತಾರೆ. ಇದರಿಂದ ಗ್ರಾಮಾಂತರವು ಕೆಡುವದು ಇತರರಿಗೆ ಇಂಥಾ ಅವಾಸುಕಳ ಒಗಳೂ ಇರುವದರಿಂದ ಆ ಸಣ್ಣ ವ್ಯಾಪಾರಸ್ಥಳಕ್ಕೆ ಸಂತೆಗೆ ಕಳುಹಿಸಿ, ಅಲ್ಲಿ ವ್ಯಾಪಾರಮಾಡುವಂತೆ ಏರ್ಪಾಡುಮಾಡಿದರೆ ಅವರ ವ್ಯಾಪಾರ ಕುಂಠಿತವಿಲ್ಲದೆ ನಡಿಯುತ್ತದೆ. ಗಾಡಿಗಳು ಕುದುರೆಗಳು ಧಾರಾಳವಾಗಿ ಸಂಚಾರಮಾಡಬಹುದು. ಮತ್ತು ಈಗಿನಂತೆ ಗಂಡರ ರ ಗುಂಪು ಹೆಂಗಸರ ಗುಂಪು ಮುಯರ್ದೆ ಇಲ್ಲದೆ ಒಬ್ಬರು ಮೇಲೊಬ್ಬರು ಬೀಳುವದು ತಪ್ಪುತ್ತೆ. ಇಷ್ಟನ್ನು ಕೃಪುಮಡಿಸುವವರು ಯಾರು ? ಜಕಗಳ ಸುಖವನ್ನು ನೋಡಿಕೊಂಡು ಕೃಪುಮಡಿಸಿದರೆ, ಮುನಸಿಪಾಲಿಟಿಯವರೇ ಮಾತಬಹುದು. ಇಲ್ಲವಾದರೆ ಸನ್ಮ ಅ ಮಲ್ದಾರರು ಪೊಲೀಸ್ ಇನ್‌ಸ್ಪೆಕ್ಟರಿಗೆ ತಿಳಿಸಿದರೆ ಅವರಿಂದ ನಾಧ್ಯವಾಗಿ ಜನೋಪಕಾರವಾಗುತ್ತೆ. ಈ ವಿಧಯವನ್ನು ಕೃಪುಮಡಿಸಲು ಒಬ್ಬರಿಗೆ ಮೊದಲು ಸಪ್ಪ ಆಗಬೇಕಾದ ಅವಶ್ಯವಿಲ್ಲ. ಅದಕ್ಕೆ ಮುಂಚೆಯೇ ಮಾತಾದರೆ ಒಳ್ಳೆದು —ಸಂತೆಯಲ್ಲಿ ಕೇರುಗಳು ಬಹು ಹೆಚ್ಚು ಕತಿಪೆಯಾಗಿವೆ. ಬಡವಬಗಳು ರಾಗಿಯಂಬುನ್ನು ಸಂತೆಯಲ್ಲಿ ಎಂಟು ಕೇರಿಸಂತೆ ತಂದು, ಮನೆಯಲ್ಲಿ ಅಳತೆ ಮಾಡಿದರೆ ಆರುವರೆ ಕೇರು ಆಗುತ್ತೆ. ರಾಗಿ ಮಾರುವವರು ಪೊಲೀಸಿನವರನ್ನು ಕಂಡರೆ ಮುದ್ದೆಯು ಕೇರನ್ನು ತೋರಿಬುತ್ತಾರೆ. ಆವರು ಇಲ್ಲವಿದ್ದರೆ ೩ ಮಾನಿಸ ಕೇರಿನಲ್ಲಿ ಅಳೆಯುತ್ತಾರೆ. ತೊಗದ ಬಟ್ಟೆಗಳೂ ಹೀಗೆಯೇ ಇವೆ. ಕಟ್ಟ ಅನುಭವಿಸುವವರಿಗೆ ಇದೆಲ್ಲಾ ಗೊತ್ತಾಗುತ್ತೆ. ಹಿಂದೆ ಅನೇಲ್ದಾರ

ಇದು ಗುಣಕಾರಿ.

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

2

ಈ ಮಾತ್ರೆಗಳಂ ಪ್ರತಿ ದಿವ ತಾಂಬೂಲದೊಡನೆ ೨—೩ ನ್ನು ಉಪಯೋಗಿಸುತ್ತಾ ಖಂಡರ ಬಾಯಿಯು ಪುಗರ್ಗಂಧ, ಮಲಬದ್ಧ, ಅಜೀರ್ಣ, ಹೊಟ್ಟೆ ನೋವು, ಹೊಟ್ಟೆ ಯುಬ್ಬರ, ಕಿಬ್ಬೊಟ್ಟೆ ನೋವು ; ಕಣ್ಣು ಕೈ ಕಾಲುರಿ, ನೆಗಡಿ, ಕೆಮ್ಮು, ಗಂಟಲಲ್ಲಿ ಕಟ್ಟುವ ಕಫ, ವಾಂತಿ ಪಿತ್ತ ಅರೋಚಕ, ಅವಿಶ್ರಿ, ಹಡಪ್ಪ ನಿಶ್ಯಕ್ತಿ, ತಲ್ಲಣ ನೋವು, ವಾಯು, ಎದೆ ನೋವು, ಇವೆಲ್ಲವೂ ಪರಿಹಾರವಾಗಿ ಪ್ಲೇಗು ಜ್ವರ ಜ್ವರಗಳಿಗೆ ಅಸ್ಪದಕೊಡದೆ, ಅನ್ನಾರಹು, ಎಡೆ ಮಿಡಿಪು ಪರಗಳಿಗೆ ಸರಿಯಾದ ಔಲವನ್ನು ಕೊಟ್ಟು, ರಕ್ತ, ಧಾತು, ಧೈರ್ಯಗಳನ್ನು ಹೆಚ್ಚಿಸುವುದಕ್ಕೆ ಇವೇ ಮೊದಲನೇ ಮಾತ್ರೆಗಳು. ಆ ಪ್ರದೇಶದಲ್ಲಿಯಾದ ವಸ್ತುವಾವುದೂ ಸೇರಿಲ್ಲವಾದುದರಿಂದ ಬಾಯಿ ಹುಣ್ಣಾಗುವುದಾಗಲಿ, ಉಗ್ರಹಿತಿಸಿದಾಗಲಿ ಇಲ್ಲ. ನೈಜವಾದ ಇಪರ ಗುಣಗಳನ್ನು ಪರೀಕ್ಷಿಸುವವಳ ಪ್ರೋತ್ಸಾಹದಿಂದಲೇ ಧನವ್ಯಯ ಪ್ರಯೋಗಗಳು ಸಾರ್ಥಕವಾಗಬೇಕಾಗಿದೆ. ಅನುಮಾನಪಡ ಸಹ. ಕ್ರಯ:—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ಆರು ಕುಪ್ಪಿಗಳಿಗೆ ವರೆಗೆ ವಿ. ಪಿ. ಚಾರ್ಜು ೫ ಆಣೆ.

ಬಾಧಾಪಹಾರಿಣಿ:—ಡಬ್ಬಿ ಒಕ್ಕೆ ಕ್ರಯ ೪ ಆಣೆ.

ಉಜ್ಜಿದೊಡನೆ ತಲೆನೋವು, ಅರೆತಲೆನೋವು, ವಾಯು, ಉಳುಕು, ಭಳುಕು, ಬಾವು, ಗೆಡ್ಡೆ, ಕುರು, ಗಂದುಗಳ ನೇವಲು, ಇವೆಲ್ಲಾ ಗುಣವಾಗುತ್ತವೆ. ಪರ್ವಾಂತರ ಉಪಯೋಗಿಸ ಬಹುದು.

೪ ಡಬ್ಬಿಗಳನ್ನು ಒಂದೇ ಹೆಸರಿಗೆ ತರಿಸಿಕೊಂಡರೆ ಒಂದು ಡಬ್ಬಾ ಹೆಚ್ಚಾಗಿ ಕೊಡಲ್ಪಡುತ್ತದೆ ೫ ಡಬ್ಬೀ ವರೆಗೆ ವಿ. ಪಿ. ಚಾರ್ಜು—೫ ಆ. ಇವು ಸಿಕ್ಕುವ ವಿಳಾಸಗಳು —೧. ಕೆ. ಎಸ್ ಕೃಷ್ಣಶಾಸ್ತ್ರಿಗಳು, ೨೪೪೬ ಸಂ., ಹಳ್ಳದಬೀದಿ, ಮೈಸೂರು. ೨ ಹೆಚ್. ವೆಂಕಟ್ ಕೃಷ್ಣಯ್ಯ ಅಂಡ್ ಬ್ರದರ್ಸ್, ಸಂಜಿಸಗೂಡು.

೩. ಪಾಳ್ಯದ ವೆಂಕಟಾಚಲ ಪಂಡಿತರು, ಶ್ರೀ ನಿಕಾರಾಧನ ವೈದ್ಯಕಾಲಾ, ಕೊಳ್ಳೇಗಾಲ.

ಜ್ವರಹರಿ. 35

ಇದು ಸಾಧಾರಣ ಜ್ವರ, ಹಳೇಜ್ವರ, ಪೊರೇಜ್ವರ, ಪಿತ್ತಜ್ವರ, ಕಫಜ್ವರ, ವಾತಜ್ವರ, ಹಳ್ಳ ಹಿಡಿಯುವಪದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುರಾಮತ್ ಇಲಾಖಾ ಸಬ್ ಡಿವೀಜ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೩೦ ಬಾಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನರಲ್ಲಿ ಕಾಹಿಲೆ ಬಿಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೩೦ ಬಾಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ.—ಸೀಸೆ ೧ ಕ್ಕೆ ೪ ಆಣೆ, ೧ ರೂ., ೧—೪ ರೂ., ೫ ೨—೧೨ ಆ., ೧೦ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮಂಕಪೂರ್.



ಈ ಔಷಧವು ಅಪೇಕ್ಷಾ, ಕೀತಳೇದಿ, ಸಾಧಾರಣ ಹೊಟ್ಟೆಹಳೆಯುವದು, ವಾಂತಿಭೇದಿ, ನಾನಾತರವ ಹೊಟ್ಟೆನೋವ್ಗಳಿಗಳು—ಮುಂತಾಪ್ತಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂಬಾವರ್ತಿ ಜೊರಗೆ ಆಗುವಾಸ್ಥೆ ಹೊಟ್ಟೆನೋವು ಮುಂತಾಪ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ನಿನ್ನೆಯ ಒಮಂ ಕರ್ಪೂರವನ್ನು ನಾನೂ ನನ್ನ ಹಾಜೀದಾರರೂ ಮುಟ್ಟುನಿಸಿದ ಲ್ ಅರ್ಧತೃಯಲ್ಲಿ ಅನೇಕ ಪರುಷಗಳಿಂದಲೂ ಕಾಲರಾ, ಅಜೀರ್ಣ ಫೀವರ್, ಬಿಜೋರ್ ರೋಗಿಸ್ಥರಿಗೆ ಕೊಡುತ್ತೇವೆ. ಕೊಟ್ಟು ತಿಂಡರೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಬಲ್ಲೇ ಔಷಧವೆಂತ ಬರೆದಿದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಪಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರ್ಥಲ್ಲಿ ವಿಕೇಪ:—

ಪೆತ್ರಿಯುಪಕ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಳಂಪ್ ಆಫೀಸ್ ಲೈನ್, ಮದರಾಸ್. ಬ್ರಾಂಚ್, ಮದರಾಸ್.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ನೋಟೀಸು.

ತಾರೀಖು ೫ನೇ ಮಾಹೆ ಜುಲೈ ೧೯೦೪.

ಮೈಸೂರು ಸಿಟಿ ಮ್ಯುನಿಸಿಪಲ್ ರೆಗ್ಯುಲೇಷನ್ ೭೨ ಮತ್ತು ೭೩ನೇ ಸೆಕ್ಷನ್‌ಗಳಾನುಸರಿಸಿ, ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—

ಮೈಸೂರು ಸಿಟಿ ಹಿಲ್ಲೆ ಮೊದಲ್ಗೊಂಡ್ಕೆ ಸೇರಿನ ಕಟ್ಟೆ ಡೆಗಳು, ಅಂಗಡಿಗಳು, ಬಾವಿ ಜಾಗಗಳು ಮತ್ತು ಗಾಣಗಳು, ಇವುಗಳಿಗೆ ದಾಖಲಾಗಬೇಕಾದ ಕಂದಾಯದ ಮೊಕ ರೂರಾತಿಯು ಪೂರೈಸಲ್ಪಟ್ಟು, ದಾಖಲಾಗಿರುವ ಕಂದಾಯಗಳ ತಪಸೀಲು ಪಟ್ಟಿಗೆ ತೋರಿಸುವ ಅಸೆಸ್‌ಮೆಂಟ್ ಬುಕ್ಕು ರಂಗಾಚಾರ್ಲುಯವರ ಮೆಪೋರಿಯಲ್ ಹಾಲಿನ ಲಿರುವ ಮ್ಯುನಿಸಿಪಲ್ ಆಫೀಸಿನಲ್ಲಿ ಕಲೆಕ್ಟನ್ ಡಿಪಾರ್ಟ್‌ಮೆಂಟಿನಲ್ಲಿ ಇಡಲ್ಪಟ್ಟಿರುತ್ತೆ. ಅಪೇಕ್ಷೆಯುಳ್ಳವರು ಆಫೀಸು ಇರತಕ್ಕ ದಿವಸಗಳಲ್ಲಿ ಬಂದು ನೋಡಿಕೊಂಡು ಹೋಗಬಹುದು, ಮೇಲ್ಕಂಡ ಅಂದಾಜಿ ಮತ್ತು ಕಂದಾಯಗಳನ್ನು ಪುನರ್ವಿಮರ್ಶೆಮಾಡಲು ಪ್ರೆಸಿಡೆಂಟ್ ಸಾಮೇಬರವರು ೧೯೦೫ನೇ ಇಸವಿ ಜುಲೈ ತಾರೀಖು ೫ನೇ ಬುಧವಾರದ ದಿವಸ ಮೀಟು ಮಾಡುತ್ತಾರೆ. ಹಾಲಿ ದಾಖಲಾಗಿರುವ ಕಂದಾಯವನ್ನು ಪುನರ್ವಿಮರ್ಶೆಮಾಡಬೇಕೆಂದು ಅಪೇಕ್ಷಿಸುವವರು ಪುನರ್ವಿಮರ್ಶೆಮಾಡುವ ತಾರೀಖಿಗಿಂತಲೂ ಮೊದಲು ಏನಸ ಮುಂಚಿತವಾಗಿ ಅರ್ಜಿ ಕೊಡಬೇಕು; ತಿಳಿಯುವದು.

K. Srinivasa Rao.
for President.

ಹೊಳೆಮೊಸಳೆ.



ತಕ್ಷಣ ಪರಿಹಾರ.

ತಗಲುತ್ತಲೇ ನೋವೆ ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅಡವನೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಕೊಟ್ಟಾ, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇಟ್ಟಿರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತೊಂದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವದಾಕ್ಷಿಗಳಿಗೆ ಮಹತ್ತಾಗಿ ಸಿಕ್ಕುತ್ತಕ್ಕ ಔಷಧ. ಇದನ್ನು ಉಪಯೋಗಿಸಿದ ಹೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ಸರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹುಣ್ಣುನೋವು, ಮುಖ ನೋವು, ಊದುಗಳು, ಗೆಡ್ಡೆಗಳು, ಪಣಗಳು, ಹುಳುಕಡ್ಡಿ, ಸೊಳ್ಳೆ ಸುತ್ತು ಚೀಳು ಕಡಿದಪ್ಪು, ಚಿಪ್ಪಿರುವಪು, ಬೆಂಕಿಯಲ್ಲಿ ಸುಟ್ಟು ಕೊಂಡಪ್ಪು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತಹೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತರ ಸೇರುವದಿಲ್ಲ.

ಕ್ರಯ:—ಸಣ್ಣ ಡಬ್ಬಿ ೧ ಕ್ಕೆ ೧ ರೂ., ಹೊಡ್ಡಕ್ಕೆ ರೂ. ೨—೪ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೪ ಆಣೆ ಬಾಬ್ತು ಡಬ್ಬಿಪದಲ್ಲಿ ೧ ರೂ. ಡಬ್ಬುದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ೫ ರೂ. ೨—೪ ಆ. ಡಬ್ಬಾವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

****

ಹೋಮೋಸಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಹೋಗಿಸತಕ್ಕದ್ದು. ಹೊರ್ಸ್ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋನೋಸಿಯರ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕೆಂತಲೂ ಇದರಲ್ಲಿ ಇನ್ನೆರಡು ಗುಣಗಳುರ್ಲ್ಲ ಹೊಸ ಭಾಗವಿರುತ್ತೆ. ಇದನ್ನು ಜರ್ಮನಿಯ ಬಹು ಬೇಗನೆ ಸೇದಿಕೊಳ್ಳಲ್ಲದ್ದು. ಡಬ್ಬಾಗಳಲ್ಲಿ ತುಂಬಿ ೪ ಆಣೆಗೂ, ೧ ರೂ. ಗೂ ಒಂದರಂತೆ ಬಿಕ್ರಿ ಮಾಡಲ್ಪಡುವದು. ೯೦ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಪಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ಕೋಟಿಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ —ಹೋಮೋಸಿಯಾ ಕಂಪನಿ, ೩೩ ಸೆಳಂಪು ಬೀಚ್ ಸ್ಟ್ರೀಟ್, ಮದರಾಸ್.

ಮೈಸೂರು ಶೀಮೆಯಲ್ಲಿ ಪ್ಲೇಗಿನ ಸ್ಥಿತಿ.

24—6—1904 ರಿಂದ 1—7—1904 ರ ವರೆಗೆ.

ಸ್ಥಳ.	ಪ್ಲೇಗ್ ಹಗಲಿ ಹುಟ್ಟಿ.	ಪ್ಲೇಗ್ ಸತ್ತ ಹುಟ್ಟಿ.	ಹಿಂದಿನದಾ ಸಂಖ್ಯೆಗಳ
ಬೆಂಗಳೂರು ಜಿಲ್ಲೆ	1	1	5
ಮೈಸೂರು ,,	0	0	2
ಚೆಂಗಳೂರು ಡಿಸ್ಟ್ರಿಕ್ಟ್	99	69	75
ಮೈಸೂರು ,,	142	107	88
ಕೋಲಾರ್ ,,	83	47	44
ಕೋಲಾರ್ ಚಿನ್ನದ ಗಣಿಗಳು	9	4	4
ತುಂಕೂರು ಡಿಸ್ಟ್ರಿಕ್ಟ್	7	4	6
ಹಾಸನ ,,	11	9	15
ಚಿತ್ರದುರ್ಗ ,,	12	24	13
ಕಡೂರ್ ,,	13	7	32
ಶಿವಮೊಗ್ಗ ,,	45	29	26
ಜುಮ್ಲಾ	122	301	308

ಶಾರ್ವರಿವಾರದ ಕಳ ೧೪—೭ನೇ ಕೃಷ್ಣಪಕ್ಷದ ಸಂವತ್ಸ ಆವಾಢ ಶುದ್ಧ ಪಾಡ್ಯಮಿ ಗುರುವಾರದಿಂದ ಆಷಾಢ ಶುದ್ಧ ಅಷ್ಟ ಖುದ್ಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೪ನೇ ಇಸವಿ ಜುಲೈ.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಮಿ ನಪ ತೀ
11	ಗುರು *	ಪೂರ್ಣಮಿ	8-25	ಸ್ವ	31 11	3
15	ಶುಕ್ರ ‡	ಪಿಡಿಗೆ	2 58	ಉಪರಿ	54-2	1
16	ಶನಿವಾ	ಬ್ರಿತಿ	30 30	ಪು	26-34	2
17	ರವಿವಾ †	ಪಂಚಮಿ	11 38	ಪ್ಪು	22-22	3
18	ಚಂದ್ರ	ಕೃಷ್ಣ	38 6	ಹ್ಯಾ	18 8	4
19	ಭಾಜ	ಸಪ್ತಮಿ	12-52	ಪ್ಲ್ಯಾ	14-26	5
20	ಬುಧ	ಅಷ್ಟಮಿ	27-50	ಚ್ಚಿ	11-55	6

* ಚಂದ್ರೋದಯ, ನಂದನಗೂಡಿನಲ್ಲಿ ಮಹಿಳೆಯರೇಯೋತ್ಸ ‡ ದಕ್ಷಿಣಾಯನ ಪ್ರತ್ಯಾಕಾಲ. † ಸ್ಕಂದಪಂಚಮಿ. ಕೊಳ ಷಷ್ಟಿ.

ಬೇಳೆ ಧಾರಣೆ.

ದಿನಸು.		ಮೈಸೂರು.	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ಒಕ್ಕೆ	ರೂ.	೪-೨—೦	೯—೪
ಕೆಂಬಣತಿ ಅಕ್ಕಿ ಅವಲ್	,,	೪—೦	೯—೪
,, ಪುಯಂ	,,	೩—೧೮—೦	೯—೦
ಜಾಪಾನ್ ಅಕ್ಕಿ	,,	೩—೬—೦	೧೦—೦
ಸಣ್ಣಕ್ಕಿ ಅವಲ್	,,	೧೦ ೧೮—೦	೧೦—೪
,, ಪುಯಂ	,,	೧೦—೨ ೦	೧೦—೪
ತೊಗರೀ ಬೇಳೆ ಪಲ್ಲಾ ಒಕ್ಕೆ	,,	೧೦—೪—೦	೧೨—೪
,, ಪುಯಂ	,,	೧೦—೪—೦	೧೦—೦
ಹೈ ದಾಗಿ ಪಲ್ಲಾ ಒಕ್ಕೆ	,,	೩ ೪—೦	೩—೦
ಕಾರಾಗಿ	,,	೩—೦—೦	—೪
ಜೋಳ	,,	—೦—೧೮—೦	೪—೨
ಹಲಸಂದೆ ಪಲ್ಲಾ ಒಕ್ಕೆ	,,	೩—೪—೦	೬—೦
ಬಿಳೇ ಅವರೆ	,,	೬—೪—೦	೩—೦
ಹೆಸರು	,,	೯—೦—೦	೪—೦
ಉದ್ದು	,,	೩ ೦೮—೦	೪—೦
ಕಡಲೆ	,,	೩-೦೪—೦	೩—೦
ಎಳ್ಳು	,,	೧೦ ೦೮ ೦	೩—೦
ಹುರುಳಿ	,,	೪—೩ ೦	೪—೪
ಹರಳು ೦೦೩ ಸೇರಿಗೆ	,,	೯—೦—೦	೫—೦
ಸೀಗೇಕಾಯಿ ಮಣ ಒಕ್ಕೆ	,,	೧—೪—೦	೧—೦
ನೆಲಸಿಸಕಾಯಿ	,,	೪—೦—೦	೩—೦
,, ಪುಯಂ	,,	೩—೦೦—೦	—೪
ಪಲ್ಲ ದೊಡ್ಡ ಅಚ್ಚು	,,	೪—೬—೦	೪೦—೦
ಒಳ್ಳೆಚ್ಚಿ ಮಣ ಒಕ್ಕೆ	,,	೩—೪ ೦	೩—೦
ಹರಳೆಚ್ಚಿ ,,	,,	೩—೦೪—೦	೩—೦
ಕೊಚ್ಚುಂಬರಿ ಪಲ್ಲ ಒಕ್ಕೆ	,,	೪—೪—೦	೪—೦
ಉಪ್ಪು ,,	,,	೯—೦—೦	೪—೦
ಹುಣಸೇ ಹಣ್ಣು	,,	೦—೦—೦	೦—೦
,, ಹಳೆದು	,,	೦—೦೪—೦	೦—೦
ತುಪ್ಪ	,,	೧೧ ೪—೦	೯—೪
ಸೀಮೆಯೆಂಣ್ಣೆ ಪಿಟ್ಟಿ ಒಕ್ಕೆ	,,	೩—೯—೦	೩—೪
ತೆಂಗಿನಕಾಯಿ ೧೦೦ ಕ್ಕೆ	,,	೪—೪—೦	೩—೦
ಆಳದೇಕಾಯಿ ಮಣ ಒಕ್ಕೆ	,,	೦—೦೪—೦	೦—೧
ಅಂಟ್ವಾಳಪಕಾಯಿ ಮಣ ಒಕ್ಕೆ	,,	೦—೦೪—೦	೦—೦
ಹೆಸ್ನ (ಪೌ) ಕೆಂಪು	,,	೧೫—೪—೦	೧೫—೩
,, ,, ಪಸಿನಿ	,,	೧೫—೪—೦	೧೫—೩
,, ,, ಗಟ್ಟಿ ಹೊಲ ಒಕ್ಕೆ	,,	೨೬—೦—೦	೨೪—೦
ಬೆಲ್ಲ ಗಟ್ಟಿ ತೊಲ ೧೦೦ ಕ್ಕೆ	,,	೩೨—೦—೦	೨೩—೦

Printed and Published by the Rev. W. B. Trewhella Proprietor and the Manager, Wesleyan Mission Press Mysore. 14/7/1904

ವೃತ್ತಾಂತ ಪತ್ರಿಕೆ.

REGISTERED M. 20

ಯು ಗಾದುದ್ದು — ಕ್ರಯ ಗಾದುದ್ದು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೯ — ಮೈಸೂರು—ಸನ್ ೧೯೦೫ ನೇ ಇಸವಿ ಜುಲೈ ತಾರೀಕು ೨೦ ನೇ ಗುರುವಾರ. — ಸಂಖ್ಯೆ ೪

ಭಾರತ! ರಾಮಾಯಣ!! ಭಾಗವತ!!!

೩

ಶ್ರೀಕೃಷ್ಣರಾಜಶ್ರೀಬಾಮರಾಜೇಂದ್ರ ವಿಲಾಸಗಳೆಂಬ ಮಹಾ ಗ್ರಂಥ, ರಾಮಾಯಣ, ಭಾಗವತ ಕನ್ನಡ ಟೀಕುಗಳು ಸನ್ಮಲ್ಲಿ ಪ್ರಸಾರಪಡಿಸಲ್ಪಟ್ಟಿವೆ. ಬೇಕಾದವರು ಕ್ರಯದ ಪಟ್ಟಿಗೋಸ್ಕರ ಬರೆಯಿರಿ. ಯಂ. ರುಪ್ಪಸ್ವಾಮಿ ಅಂಡ್ ಸನ್ಸ್, ಲಾಲ್ ಬಾಗ್ ರೋಡ್, ಬೆಂಗಳೂರು ಸಿಟಿ.

ಅನುಭವಸಾರ.

ಗ್ರಂಥಕರ್ತರು —ನಿಜಗುಣಯೋಗಿಗಳು.

ಟಿಪ್ಪಣಿಕರ್ತರು —ನು. ರಾ. ರಾಗಿ ಸಂಪಿತ ಪಿ. ಆರ್. ಕರಿಬಸವಯ್ಯಸ್ವಾಮಿಗಳು.

ವ್ಯಾಪಾರಗಾರರು —ಮ್ಯಾನೇಜರ್, ಸಿ. ಎಲ್ ಎಸ್. ಬುಕ್ ಡಿಪೋ, ಮೈಸೂರು.

ಪುಸ್ತಕದ ಕ್ರಮ —ಪೆನ್ನರಡು ಆಣೆ. (ವಿ. ಪಿ ಪಿ. ಮೂಲಕ ೦—೧೫—೨).

ವಿಶೇಷಗಳು —ನೋಡಿದರೆ ಗೊತ್ತಾಗುವದು.

ROBINSON'S PATENT BARLEY.

ರಾಬಿನ್ಸನ್ಸ್ ಯವರ ಬಾರ್ಲಿ ರಂಟ್ಟು.

ಸರ್ಕಾರಿಯಲ್ಲಿ ರಿಜಿಸ್ಟರಾಗಿದೆ.

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಬೆಳೆಯಿಂದ ತಯಾರಿಸಿದೆ. ಹಸ್ತ ಸ್ಪರ್ಶದಿಂದ ಆಗದ್ದಲ್ಲ

ಈ ಹಿಟ್ಟನ್ನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮಂದದ ಸಜ್ಜಿ ಮಾಡಿ ಬಿಸಿ ನೀರು ಸಾಕಿ ಕಾಲು ಗಂಟೆ ಹೊತ್ತು ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ರುಚಿಯ ಪಾನವಾಗುವದು.

ಇದಕ್ಕೆ ಸ್ವಲ್ಪ ಜಾಜಿಕಾಯಿಯನ್ನು ಮಿಶ್ರಮಾಡಿದರೆ ಮುಕ್ಕಳಿಗೆ ಹೆಚ್ಚು ಪ್ರಿಯವಾದ ಆಹಾರವಾಗುತ್ತದೆ.

ಇದು ಜ್ವರದಿಂದ ಸಾಮಾನ್ಯವಾಗುತ್ತಿರುವವರಿಗೆ ಬಲಕಾರಣಂಥ ಮತ್ತು ಶಾರೀರಾಂತಿಯನ್ನು ಹೊಡುವಂಥ ಪಥ್ಯವಾಗಿರುತ್ತದೆ

ಇದಕ್ಕೆ ಸ್ವಲ್ಪ ನಿಂಬೇ ಜುಗಿಯನ್ನೂ ಸಕ್ಕರೆಯನ್ನೂ ಸೇರಿಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ.

ಎಚ್ಚರಿಕೆ.—ಈ ಸ್ತುತಿಸಿದ್ದವಾದ ಪದಾರ್ಥವಂತೆ ಹೋಲಿಸಿ ದೋಷದ ಸಮ್ಮನ್ನು ಕೆಲವರು ಮೂತುತ್ತಾರಾತ್ತ ಖಾತ್ರಿಯಾದ ಸಮ್ಮ ಹಿಟ್ಟು ತುಂಬಿದ ಡಬ್ಬಿಯ ಮೇಗಡೆಯಲ್ಲಿ ಮೇಲ್ಕಂಡ ವ್ಯಾಪಾರನ್ನೂ ಕೆಳಗೆ ಸನ್ನು ರುಜುವನ್ನೂ ನೋಡಿ ತೆಗೆದುಕೊಳ್ಳಬೇಕು.

ವಿದ್ಯಾರ್ಥಿಗಳಿಗೆ ಮಾತ್ರ ಬಹುಮಾನ.

೨

೧೯೦೬ನೇ ಇಸವಿಯು ನವಂಬರು ತಿಂಗಳಲ್ಲಿ ನಡೆಯುವ ಮೈಸೂರು ಲೋವರ್ ಸೆಕೆಂಡರಿ ಪರೀಕ್ಷೆಗೆ ಅಟ್ಟುಕೊರ್ಡ ಕೊಡುವ ಪ್ರತಿ ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿಯು ಮುಂದಿನ ಆಗಸ್ಟು (೧೯೦೬) ತಿಂಗಳು ಲಾಗಾಯ್ತು ವಸಂಬರು (೧೯೦೬) ಅಕ್ಟೋಬರು ವರೆಗೆ ತಿಂಗಳು ಒಂದಕ್ಕೆ ೪ ಆಣೆಯಂತೆ ಕೆಳಗಿನ ವಿಳಾಸಕ್ಕೆ ಚಂದಾ ಕಳುಹಿಸಿಕೊಟ್ಟರೆ ಇಹರಿಂದ ಪೂರಾ ಆಗುವ ಒಟ್ಟು ಹಣವಲ್ಲಿ ೪ ಕಡಿಮೆ ಬರದಂತೆ ಬರುವ ಮೊಬಲಗನ್ನು ಚಂದಾ ಕಳುಹಿಸಿಕೊಟ್ಟವನ ಪೈಕಿ ಮೇಲಿನ ಮೈಸೂರು ಲೋವರ್ ಸೆಕೆಂಡರೀ ಪರೀಕ್ಷೆಯಲ್ಲಿ ಯಾವ ತರಗತಿಯಲ್ಲಾದರೂ ಪ್ಯಾಸಾಗುವ ಎಲ್ಲಾ ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿಗಳಿಗೂ ಸಮಸಮಾನಿ ಹಂಚಿ ಕೊಡಲ್ಪಡುವದು. ಯಾವ ಭಾಷೆಯನ್ನಾದರೂ ಮೊದಲನೇ ಭಾಷೆಯನ್ನಾಗಿ ತೆಗೆದುಕೊಂಡಿರಬಹುದು. ಇನಲಿಂದ ಕಷ್ಟಪಟ್ಟು ವ್ಯಾಸಂಗ ಮಾಡಿದವರಿಗೆ ೩ ವಿಧವಾದ ಪ್ರಯೋಜನವಾಪಡಿಸಾಗುವುದು—ಮೊದಲನೆಯುದು, ಪ್ಯಾಸಾಗುವೆದು, ಎರಡನೆಯುದು, ಬಹುಮಾನ ಸಿಕ್ಕುವೆದು ಚಂದಾ ಕಾತಿಯನ್ನು ಪ್ರತಿ ತಿಂಗಳ ಆಬೆರಿನೊಳಗೆ ಕಳುಹಿಸತಕ್ಕದ್ದು. ಅಥವ ಅವರವರ ಅನುಕೂಲಕ್ಕೆ ತಕ್ಕಹಾಗೆ ಅರ್ಧಾರ್ಧ ಸಾದರೂ ಕಳುಹಿಸಬಹುದು. ಬಹುಮಾನವೆಷರೀಜ್ಞಾ ಧರಿಸಿರುವ ಪ್ರಕಾರ ಮೈಸೂರು ಗೆಜೆಟ್ಟಿನಲ್ಲಿ ಹಾಕಲ್ಪಟ್ಟಕೂಡಲೆ ಆಯಾಯ ವಿಳಾಸಕ್ಕೆ ವಿ.ಪಿ ಆರ್ಡರ್ ಮೂಲಕ ಕವಿನರ್ ವಜಾಮಾಡಿಕೊಂಡು ಕಳುಹಿಸಲ್ಪಡುವೆದು. ವಿಳಾಸ —ವಿ. ನಾಗೇಶರಾವ್,

ಜೆಮ್ಮಾಸ್ಟರು, ತಾಲ್ಲೂಕು ಬ್ರಾಂಚ್ ಸ್ಕೂಲ್,
ತಲಕಾಡು, ಮೈಸೂರು ಡಿಸ್ಟ್ರಿಕ್ಟ್

ದೊಡ್ಡ ಬಳ್ಳಾಪುರದ ಮುನ್‌ಸಿಫ್ ಕೋರ್ಟು.

೩

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ.—

ದೊಡ್ಡಬಳ್ಳಾಪುರದ ಮುನಸಿಫ್ ಕೋರ್ಟಿನಲ್ಲಿ
೧೯೦೫-೧೯೦೬ನೇ ಇಸ್ವಿ ಅಸಲ್ ನಂಬರು ೨೬೪.

ವಾದಿ	ಪ್ರತಿವಾದಿಗಳು
ದೊಡ್ಡ ಬಳ್ಳಾಪುರದ ಕಸಬಾ ಪಲ್ಲಿರತಕ್ಕವರುಗಳು ಎನೆ ಪಾನಪ್ಪರೆಟ್ಟಿ, ಎನೆ ಅವಪೆ ನಂಜುಂಡಪ್ಪ, ೩ನೆ ಪಾನಪ್ಪನವರ ಮಾಬಣ್ಣ, ೪ನೆ ವನಪ್ಪನಹಳ್ಳಿ ಮುಳ್ಳಯ್ಯ ವಗೈರೆ.	ದೊಡ್ಡ ಬಳ್ಳಾಪುರದ ಕಸಬಾ ಪಲ್ಲಿರತಕ್ಕವರುಗಳು ಎನೆ ಪಾನಪ್ಪರೆಟ್ಟಿ, ಎನೆ ಅವಪೆ ನಂಜುಂಡಪ್ಪ, ೩ನೆ ಪಾನಪ್ಪನವರ ಮಾಬಣ್ಣ, ೪ನೆ ವನಪ್ಪನಹಳ್ಳಿ ಮುಳ್ಳಯ್ಯ ವಗೈರೆ.

(೧) ಮೇಲ್ಕಂಡ ನೊಕದ್ದವಿನಲ್ಲಿ ವಾದಿಯು ದೊಡ್ಡ ಬಳ್ಳಾಪುರದಲ್ಲಿರುವ ಶ್ರೀ ರಾಮಲಿಂಗ ಚಪ್ಪೆಡೇಶ್ವರ ದೇವಸ್ಥಾನಕ್ಕೆ ವಾದಿಯು ಪಾರಂಪರ್ಯವಾಪ ಹಕ್ಕುದಾರನೆಂದು ಸ್ಥಾಪಿಸು, ೩ನೆ ಪ್ರತಿವಾದಿಯನ್ನು ಸದರಿ ಕೆಲಸದಿಂದ ನಿವರ್ತಿಸಾತಿ ವಾದಿ ಸ್ವಾಧೀನಸಕ್ಕೆ ಸವುಕರಿ ಕೊಡಿಸಬೇಕು.

(೨) ನಾವಿಯ ಹಕ್ಕು ಸ್ವಾಧೀನದ ವಿಷಯದಲ್ಲಿ ಪ್ರತಿವಾದಿಗಳು ಅವರ ಗುಂಪಿಗೆ ಸಂಬಂಧಪಟ್ಟ ಎಲ್ಲಾ ಜನಗಳೂ ಮತ್ತು ಆಬೇ ವಿಷಯದಲ್ಲಿ ಸಮ್ಮಂಧಪಟ್ಟವರು ಯಾವಾಗಲೂ ಪ್ರತಿಕೂಲವಿದೆ ಅಥವಾ ಅಡ್ಡಿಪಡಿಸಿದೆ ಇರುವಂತೆ ಆಟಂಕವಡಿಸದಂತೆ ಇಂಜೆಂಕ್ಷ ಕೊಡಿಸಬೇಕು.

(೩) ೩ನೆ ಪ್ರತಿವಾದಿ ಮತ್ತು ೬ ಆರು ಜನಗಳ ಕೃತ್ಯವಿಂದ ವಾದಿಗೆ ಉಂಟಾದ ೩ ಮೂರು ವರುಷದ ನಷ್ಟದ ಪರಿವರ್ತನೆಗಾಗಿ ೨೦೭—೦—೦ ರೂಪಾಯಿ ಮತ್ತು ಕೋರ್ಟು ಖರ್ಚು ಸಮತು ಕೋರ್ಟಿನವರಿಗೆ ಯುಕ್ತವಾಗಿ ತೋರುವ ಇತರ ಪರಿಹಾರಗಳನ್ನೂ ತನಿ ಡಿಕ್ರಿ ಕೊಡಿಸಬೇಕೆಂದು ದಾವಾ ದಾಖಲ್ ಮಾಡಿರುತ್ತಾನೆ

ಸದರಿ ಪೊಯಿದ್ದುನಿಯು ಇಮ್ಮಟ್ಟಿನೆ ೧೯೦೬ನೆ ಇನವಿ ಮಾರ್ಚಿ ೩ನೆ ತಾರೀಖಿಗೆ ಹೀರಿಂಗು ಇಟ್ಟಿರುತ್ತೆ. ಈ ಪೊಯಿದ್ದುಯಿಯಲ್ಲಿ ಹಕ್ಕುಳ್ಳ ಸಮಸ್ತ ಜನಗಳು ಮೇಲ್ಕಂಡ ತಾರೀಖು ನಿವಿ ೧೦ ಘಂಟೆಗ ಸರಿಯಾಗಿ ಕೋರ್ಟು ರೂಬರೂಯು ಹಾಜರಾಗಿ ಅವರವರ ಹಕ್ಕಿನ ವಿಷಯವನ್ನು ಕುರಿತು ಆಗಲಿ ಅಥವಾ ಸದರಿಯವರ ದಾವಾಕ್ಕೆ ವಿರೋಧವಾಗಲಿ ಹಾಜರ್ಜಾಪತ್ರವನ್ನಿಟ್ಟಿದೆ.

ತಾ ೩ನೆ ಮಾರ್ಚಿ ೧೯೦೬ನೆ ಇಸವಿ.

T. VENKOBA RAO,
Munsif.

ಬೆಂಗಳೂರು "ಸೂರ್ಯೋದಯ"

೨

ಈ ಪತ್ರಿಕೆಯು ಈಗ ಆಕ್ಟರ್ಯಾಂವಾಗಿಯೂ, ವಿಷ್ಣುಭಕ್ತಾಭಿಮಾನಿಯಾಗಿಯೂ ಬರೆಯಲ್ಪಡುವದು. ಚಂದಾದಾರರಾದವರಿಗೆ ಕಪ್ಯೂ ಜರ್ಮಾಯುಷ್ಯದ ಭೂಪತಿಯ ಪೂರ್ವಕಥೆಯ ಬಹುಮಾನ ಕೊಡಲ್ಪಡುವದು. ವಿಳಾಸ —ಬಿ. ನರಸಿಂಗರಾವ್, ಪ್ರೊಪ್ರೈಟರ್.

"ವೃತ್ತಾಂತ ಪತ್ರಿಕೆ" ಚಂದಾನಿರ್ಣಯ

ಸ್ಥಳಪರಿಗೆ (ಯೇಜೆಂಟ್ರುಂಡ ಪಡೆವವರಿಗೆ ಸಹ)

೧ ಪತ್ರಿಕೆ ೧೫ ತಿಂಗಳಿಗೆ ಅಡ್ವಾನ್ಸು...೧—೦—೦
ಹರಸ್ಥಳದವರಿಗೆ ೧೨ ತಿಂಗಳಿಗೆ ೧ ಪತ್ರಿಕೆ ಮುಂಗಡ.೦—೧೪—೦
,, ೬ ,, ,, ,, ...೦—೧೫—೦
,, ೧೨ ,, ೨ ,, ...೩—೧೦—೦

ವಿಳಾಸ —ಮ್ಯಾನೇಜರ್,
ವೃತ್ತಾಂತ ಪತ್ರಿಕೆ, ಮೈಸೂರು.

P. SUBBAROY'S

World Renowned and most Efficacious Ayurvedic Medicines

ಪಿ. ಸುಬ್ಬರಾಯಿಯವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾಗಿರುವ ಆಯುರ್ವೇದ ಔಷಧಗಳು.

೨

ಲಕ್ಷ್ಮೀಕರ ಕಸ್ತೂರಿಮಾತ್ರೆ

ಭೋಜನಾನಂತರ ತಾಂಬೂಲದಸಂಗಡ ೧—೨ ಮಾತ್ರೆಗಳನ್ನು ಸೇವಿಸಿದರೆ, ಬಾಯಲ್ಲಿ ದುರ್ಗಂಧವು ಹೋಗುವುದು. ಬೆಳಿಗ್ಗೆ ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ, ಅಜೀರ್ಣ, ಮಂದ, ಹಲ್ಲುವೇದನೆ, ಹೊಟ್ಟೆಯ ಉರಿ, ಅವುಗಳು ನಾಶಿಯಾಗುವೆವೆ. ಇದರಲ್ಲಿ ಆಫೀಮಿನೇಹಾಯವಾದ ಯಾವ ವಸ್ತುವೂ ಇಲ್ಲವಾದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ ಸುವರ್ಣ ಒರಳು ಮುಂತಾದ ಅಮೂಲ್ಯವಸ್ತುಗಳು ಸೇರಿರುವೆದರಿಂದಲೂ, ಎಳೇ ಮಕ್ಕಳಿಂದ ಮುದುಕರವರೆಗೆ ಎಲ್ಲರೂ, ತಾಂಬೂಲದೊಂವಿಗೆ ಅಥವ ಬರಿ ಬಾಯಲ್ಲಿ ಪಾಕಿಕೊಂಡು ಉಪಯೋಗಿಸಬಹುದು. ಜ್ವರ, ನೆಗಡಿ, ಕೆಮ್ಮುಲು ಮುಂತಾದವುಗಳಿಗೆ ಸನ್ನಿವೇಶಕ್ಕಳಿಂದ ದೊಡ್ಡವರಿಗೆ ೦ರಿಂದ ೪ ಮಾತ್ರೆಗಳಂತೆ ಕೊಟ್ಟರೆ ಕೂಡಲೆ ಗುಣ ಕಾಣುವದು. ಕ್ರಯ —ಸುವಾರು ೨೦೦ ಮಾತ್ರೆ ಬುಳ್ಳ ಸೀಸೆ ೦ಕ್ಕೆ ೪ ಆಣೆ. ೦ರಿಂದ ೬ ಸೀಸೆಗೆ ವಿ. ಪಿ ಭಾಂಗಿ ಬಾಬ್ತು ೫ ಆಣೆ.

ಯೋಗ್ಯತಾ ಪತ್ರಗಳು.

ಈ ಮಾತ್ರೆಗಳು ಅತ್ಯಂತ ಆಶ್ಚರ್ಯಕರವಾದವುಗಳೆನ್ನುವುದಕ್ಕೆ ಸ್ವಲ್ಪವೂ ಸಂಶಯವಿಲ್ಲ —ವಿ ಮಹಪದ್ ಸಮಾಚಾರಿ.

ಚಳಿಕಾಲದಲ್ಲಿ ಈ ಮಾತ್ರೆಗಳನ್ನು ಆಹಿರಲೆಯ ಸಂಗಡ ಹಾಕಿಕೊಂಡರೆ ಶೀತ, ತಲೆನೋವು, ಚಳಿ ಜ್ವರಗಳು ನಿವಾರಣೆಯಾಗುತ್ತವೆ ಬೇರೆ ಔಷಧ ಅವಶ್ಯವಿಲ್ಲ.—ದೇಶೋಪಕಾರಿ

ನಿಮ್ಮ ಈ ಮಾತ್ರೆಗಳು ಸರ್ವೋತ್ಕೃಷ್ಟವಾಗಿರುತ್ತವೆ, ಅದರಿಂದ ನನಗೆ ವಿಶೇಷ ಪ್ರಯೋಜನವಾಗಿರುವೆದು.—ಪೂರ್ಣಾರು ಪೋಲೀಸ್ ಇನ್‌ಸ್ಪೆಕ್ಟರ್

ನೀವು ನನಗೆ ಬೆಂಗಳೂರಿಗೆ ಕಳುಹಿಸಿದ ಮಾತ್ರೆಗಳು ಅನೇಕಾನೇಕ ದಿನರಿಗೆ ಬಹಳ ಒಳ್ಳೇ ಪ್ರಯೋಜನವನ್ನುಂಟುಮಾಡಿತ್ತು —ಹೆ. ಕೃಷ್ಣಯ್ಯಂಗಾರ್, ಕೇದಾಳ್ ದಿನಾರ್ ಪೇಷ್ಕಾರ್, ಕ್ವಿಲಾನ್.

Apply to —P. SUBBAROY,
Porto Novo, South Arcot.

ವಿಳಾಸ —ಪಿ. ಸುಬ್ಬರಾಯ್,
ಪೋರ್ಟ್‌ನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಗಣ್ಯತೆಸಂಜೀವಿನಿ.

16

೧ ರೂ. ೪ ಆ.; ವಿ. ಪಿ. ಚಾರ್ಜ್ ೩ ಆ.

ಕೆ. ಸರಸಿಂಹಯ್ಯ ಮತ್ತು ಕಂಪೆನಿ, ಮೈಸೂರು.

ಮಾವಿನ ಗಿಡಗಳು.

3

ಕಟ್ಟಿದ ಮಾವಿನ ಗಿಡಗಳು, ಕಟ್ಟಿದ ನಿಂಬೇ, ದಾಳಿಂಬರೇ, ಜಕ್ಕೂತ್ರೆ, ಕಿತ್ತಳೆ ಮುಂತಾದ ಗಿಡಗಳು, ಗುಲಾಬಿ ಮುಂತಾದ ಹುವ್ವಿನ ಗಿಡಗಳು, ತರಕಾರಿ ಬೀಜಗಳು ಸನ್ಮಲ್ಲಿ ಆತ್ಯುತ್ತಮವಾದವುಗಳು ಸಿಕ್ಕುತ್ತವೆ. ಈಗ ಗಿಡಗಳು ಹಾಕಲು ಸಕಾಲವಾಗಿರುವುದರಿಂದ ಈ ಕೆಳಗಿನ ವಿಳಾಸಕ್ಕೆ ಕ್ಯಾಟಲಾಗಿಗೋಸ್ಕರ ಬರೆಯಿರಿ.

ಯಂ. ರುದ್ರಪ್ಪ ಅಂಡ್ ಸನ್ಸ್.

ಲಾಲ್ ಬಾಗ್ ರೋಡ್, ಬೆಂಗಳೂರು ಸಿಟಿ.

ತಿರಿಗಿ ಬಂದಿರುತ್ತದೆ.

ಸ್ಟೀಮಿನ ದೆಸೆಯಿಂದ ಗೋವೆ ಪ್ರಾಂತ್ಯದೊಳಗೆ ಹೋಗಿದ್ದ ಉತ್ತಮ ರಬ್ಬರಿನ ಸ್ಟಾಂಪುಗಳನ್ನು ತಯಾರಮಾಡುವ ಕಂಪನಿಯು ಹುಬ್ಬಳ್ಳಿಗೆ ತಿರಿಗಿ ಬಂದಿರುತ್ತದೆ. ಈ ಕಂಪನಿಯಲ್ಲಿ ಬಹಳ ಕಡಿಮೆ ಬೆಲೆ, ಬಹುದಿನ ತಡಿಯುವ ಮತ್ತು ನೋಟಕ್ಕೆ ಸುಂದರವಾದ ರಬ್ಬರಿನ ಸ್ಟಾಂಪುಗಳು ಅನೇಕ ತರಹದವು ಮತ್ತು ಎಲ್ಲಾ ಭಾಷೆಯಲ್ಲಿ ತಯಾರ್ಮಾಡಿ ಸಿಕ್ಕುತ್ತವೆ. ಇದು ಮೈಸೂರು ಪ್ರಾಂತ್ಯದೊಳಗಿನ ಎಲ್ಲಾ ಜನರಿಗೆ ಗೊತ್ತು ಇದ್ದದ್ದೇ ಅದೆ. ಸ್ಟಾಂಪು ವಿ. ಪಿ. ಮೂಲಕ ರವಾನಿಸಲ್ಪಡುತ್ತೆ. ನೀವು ಕ್ಯಾಟಲಾಗು ತರಿಸಿಕೊಳ್ಳಿರಿ. ವಿಳಾಸ.—ಮಹಂದಪ್ಪರ ಮತ್ತು ಕಂಪನಿ,

ರಬ್ಬರ್ ಸ್ಟಾಂಪ್ ಮೇಕರ್ಸ್, ಫೋಟೋಗ್ರಾಫರ್ಸ್,

ಹುಬ್ಬಳ್ಳಿ, ಧಾರ್ವಾಡ ಜಿಲ್ಲಾ.

ಜೀವರಸಾಯಿ ಬೈದ್ಯಸಾರ —ಪ್ರಮು ರೂ. ೧.

ನೋಡಿರಿ, ಇದೊಂದು ನವೀನ ವೈದ್ಯಶಾಸ್ತ್ರ) ಕನ್ನಡದಲ್ಲಿ ಇಂಥಾ ಪುಸ್ತಕ ಬೇರೆ ಇಲ್ಲ. ಇದರಲ್ಲಿ " ಟಕ್ಯೂ ರೆಮೆಡೀಸ್ " ಅನ್ನಿಸಿಕೊಳ್ಳುವ ಹನ್ನೆರಡೇ ಸಿದ್ಧೌಷಧಗಳಿಂದ ಸಕಲ ವ್ಯಾಧಿಗಳಿಗೆ ಚಿಕಿತ್ಸೆಮಾಡುವ ಕ್ರಮವು ವಿವರವಾಗಿ ಹೇಳಿಯದೆ. ದೇಹದ ಅಂತರಿಂದ್ರಿಯಗಳ ಸಂಕ್ಷಿಪ್ತವರ್ಣನೆಯು ಚಿತ್ರಸಹಿತವಾಗಿ ಕೊಟ್ಟಿದೆ. ಈ ನವೀನ ವೈದ್ಯದಲ್ಲಿ ಪ್ರಯೋಗವಾಗುವ ಹನ್ನೆರಡು ಔಷಧಗಳು ನೀರುಪುದ್ದುಗಳಲ್ಲ, ಆಯುರ್ವೇದಕ್ಕೆ ಸರಿಯಾಗಿ ರಸಾಯನ ಶಾಸ್ತ್ರದ ಮೇಲೆ ತಪಾರಿಸಿದವುಗಳು ; ಭಸ್ಮಗಳಂತಿಲ್ಲ, ಕಾಷ್ಠಿಕಾರವಲ್ಲ ; ಇವುಗಳಿಂದ ರೋಗಗಳು ಕ್ಷಿಪ್ರ ಗುಣವಾಗುತ್ತವೆ ಎಂದು ವಿಲಾಯತಿ ಅಮೆರಿಕ ಖಂಡಗಳಲ್ಲಿಯೂ ಈ ದೇಶದಲ್ಲಿಯೂ ಅನೇಕ ವೈದ್ಯರ ಅನುಭವವಾಗಿದೆ ಈ ಪುಸ್ತಕದ ಆಧಾರದಿಂದ ಎಲ್ಲರೂ ತಮಗೆ ತಾವೇ ಚಿಕಿತ್ಸೆಮಾಡಿಕೊಳ್ಳಬಹುದು. ಪುಸ್ತಕ ಬೇಕಾದವರು " ಬಾಸಲ್ ಮಿಷನ್ ಬುಕ್ ಆಂಡ್ ಟ್ರಾಕ್ಟ್ ಡಿಪೊ ಸಿಟಿರಿ, ಮಂಗಳೂರು " (Basel Mission Book and Tract Depository, Mangalore) ಎಂಬ ವಿಳ್ಯಾಸಕ್ಕೆ ಬರೆಯತಕ್ಕದ್ದು. ಬಿಡಿಪ್ರತಿಗಳು " ಮರ್ಕಂಟೈಲ್ ಮಿಷನ್ ಬ್ರಾಂಚ್, ಮಂಗಳೂರು " (Mercantile Mission—Branch, Mangalore) ಇವರಲ್ಲಿ ದೊರೆಯುವವು. ಸಣ್ಣ ಕ್ಷೀಸಿಗೆ ಕ್ರಯ—ಅ. ೩—೫ಪೈ. ೬.

ನೋಟೀಸ್.

2

ಈ ಕೆಳಗೆ ಕುಡುವಮಾಡಿರುವವರು ಇದರಿಂದ ತಿಳಿಯಪಡಿಸುವದೇನೆಂದರೆ:—

ಮೈಸೂರ್ ರಿಟ್ರೆಂಡ್ ಕೆಡ್ಡಾ ಸೂಪರಿಂಟೆಂಡೆಂಟ್ ವೆಂ॥ ಕೆ. ಶಾಮೈಯಂಗಾರ್ಯರವರು ಕೆಲವರಿಗೆ ಜಾವಿನಾಗಿ ಹಣ್ಣಾರ ಸಾಲವನ್ನು ಅಂಟುವಮಾಡಿಕೊಂಡು ಇದ್ದದರಿಂದ ಸನ್ಮ ಮೈನಾಬಟ್ಟೀಕಾಲದಲ್ಲಿ ಈ ಕೆಳಗೆ ಸಮುಖಾಗುವ ಪಿಟ್ಯರ್ಪೆತವಾಜ ಆಸ್ತಿಗಳನ್ನು ವೆಂ॥ ಎಸ್. ಶಾಮುಣ್ಣನವರಲ್ಲಿ ಸಾಲಮಾಡಿ, ಅವರಿಗೆ ಆಧಾರಮಾಡಿ, ಡಿಟೋ ಎಸ್. ರಾಮುಣ್ಣನವರು ಇವರ ಮೇಲೆ ಫ್ರಿಫ್ ಕೋರ್ಟ್ ಸಲ್ಲಿ ಡಿಕ್ರಿಪಡೆದು ಏಪ್ರಿಡಿಕ್ರಿ ಜಾರಿಗಾಗಿ ಡಿಟೋ ಆಸ್ತಿಗಳನ್ನು ಕೋರ್ಟು ಮೂಲಕ ಹರಾಜುಮಾಡಿಸುವದಾಗಿಯೂ, ಅಕ್ಷವಾ ಸೈ ವೆಟ್ಟನಲ್ಲಿ ವಿಲ್ಕ್ರಯ ಮಾಡುವದಾಗಿ ಕೇಳುತ್ತೇವೆ. ಈ ಆಸ್ತಿಗಳಿಗೆ ವೆಂ॥ ಕೆ. ಶಾಮೈಯಂಗಾರ್ಯರವರು ಒಬ್ಬರೇ ಶಕ್ಯದಾರರಲ್ಲ. ಇದರಲ್ಲಿ ಸನ್ಮ ವ ಹ್ತು ಇತರರ ಹಕ್ಕು ಇರುತ್ತೆ. ಈ ಆಸ್ತಿಗಳಲ್ಲಿ ವೆಂ॥ ಶಾಮೈಯಂಗಾರ್ಯವರಿಗೆ ಹಸ್ಸೆಯುಂಟೇ ವಿನಹ ಪೂರಾ ಬಾಧ್ಯತೆಯಿಲ್ಲವು. ಇವುಗಳನ್ನು ತರಾಜಿನಲ್ಲಿ ಅಥವಾ ಪ್ರೈವೇಟ್ ವಿಕ್ರಯದಲ್ಲಿ ತೆಗೆದುಕೊಳ್ಳುವವರು ಸಮ್ಮ ದಾವೆಗೆ ಜವಾಬ್ದಾರರಾಗುವವರಾಗಿಯೂ ಈ ಹಕ್ಕಿನ ವಿಷಯದಲ್ಲಿ ನಾವು ಕೊಟ್ಟ ದಾವೆ ಸಾಹುವದರಿಂದ ಆಸ್ತಿ ಬಾಕಾ ಕೊಳಬೇಕಾದಿತಾಗಿ ತಿಳಿಸಿದೇವೆ.

ಆಸ್ತಿಗಳ ವಿವರ.—(೧) ಬೆಂಗಳೂರಲ್ಲಿ ಕಿಬ್ಬೀಳ್ಪೆಯಲ್ಲಿ ಆರ್ಯ ಬಾಳಿಕಾ ಪಾಠಶಾಲೆ ಇಟ್ಟಿರುವ ಖಂಗರೆ, ಅದರ ಶಾಂಪ್‌ಂಡು ; (೨) ಮೈಸೂರು ತಾಲ್ಲೂಕು ನಾಗಸಂದ್ರೆಯಲ್ಲಿ ಕಾವೇರಿ ನಾಲಾ ಆಸರೆ ಗದ್ದೆ ೨೮ ಎಕರೆ ; (೩) ಕೃಷ್ಣರಾಜಪೇಟ್ಟೆತಾಲ್ಲೂಕು ಬೋಮ್ಮೂರಿನಲ್ಲಿ ಕಾವೇರೀ ನಾಲಾ ಆಸರೆ ಗದ್ದೆ ; (೪) ಡಿಟೋ ಹಾಲ್ಲೂರು ಹೆಂಗರಳ್ಳಿ ನಾಲಾ ಆಸರೆ ಗದ್ದೆ ; (೫) ಸೂಳಿಕೆರೆ ಎಸ್ಟೇಟು ಸುಪಾರು ೧,೦೦೦ ಎಕರೆ.

ಬೆಂಗಳೂರು, ೧೦—೭—೧೯೦೪. | K. T. SUMPATHA IYENGAR, K. KRISHNA MOORTHY.

ಚೇಂಬರ್ಲಿನ್ ಯನರು ಮಾಡಿದ ನೋವುಪರ ಔಷಧವು.

28



ಈ ಔಷಧವು ಪ್ರತಿ ಮನೆಯವರಿಗೂ ಆಗಾಗ್ಯೆ ಬೇಕಾಗುತ್ತಲೇ ಇರುವದು. ಇದು ಎಲ್ಲಾ ವಿಷಯಗಳಿಗೂ ತುಂಬಾ ಅನುಕೂಲವಾಗಿರುವದು. ಶರೀರಕ್ಕೆ ನುಸಿಗು ಏಟು ಬಿದ್ದರೂ ಚಮರಿಯುಂಡ ಗಾಯವಾಗಿರಲಿ ಕೂಡಲೇ ಅಂಥಾ ಕಡೆಗೆ ಈ ಔಷಧವನ್ನು ಹಚ್ಚಿದರೆ ತಕ್ಷಣ ಗುಣ ಕೊಡುವದು. ಮತ್ತು ತಲೆನೋವು, ಹಲ್ಲುನೋವು, ಮುಖನೋವು ಇದನ್ನು ಹಚ್ಚುವದರಿಂದ ಪಾಸಿಯಾಗುತ್ತೆ. ಈ ಔಷಧವನ್ನು ಹಾಕಿ ಉಜ್ಜಿದರೆ ಬೆನ್ನುನೋವು, ಪಕ್ಕನೋವು, ಎದೆನೋವು ನಿವಾರಣೆಯಾಗುವದು. ಇದರಿಂದ ವಾಯುನೋವು ಜನ್ಮಾಗಿ ಬಿಟ್ಟುಹೋದೀತು. ಆದಕಾರಣ ಪ್ರತಿ ಮನೆಯವರೂ ಚೇಂಬರ್ಲಿನ್ ನೋವೌಷಧವೆಂಬೀ ಔಷಧದ ಒಂದು ಬಾಟ್ಲಿಯನ್ನು ಅಗತ್ಯ ತರಿಸಿ ಇಟ್ಟುಕೊಂಡಿರತಕ್ಕದ್ದು. ಒಂದಾವರ್ತಿ ಹಚ್ಚುವದರಿಂದಲೇ ಬಹಳ ಗುಣ ಕೊಡುತ್ತದೆ. ಇದನ್ನು ಯಾರೂ ಮರೆಯಬಾರದು. ಕ್ರಯ ಬಾಟ್ಲಿ ೧ಕ್ಕೆ ೦ ರೂ. ; ೨ ರೂ. ಮೈಸೂರು ಮತ್ತು ಬೆಂಗಳೂರುಗಳಲ್ಲಿ ಔಷಧ ಮಾರತಕ್ಕವರೆಲ್ಲೆಲ್ಲಾ ಈ ಔಷಧ ಸಿಕ್ಕುವದು. ಇನ್ನಷ್ಟು ಬರೆಯುವಷ್ಟು ಸಂಗತಿಗಳನ್ನೂ ತನ್ಮ ವಿಳಾಸವನ್ನೂ ಚನ್ನಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಇಷ್ಟಲ್ಲದೆ ಕೆಳಗಿನ ವಿಳಾಸದಾರರಲ್ಲೂ ಸಿಕ್ಕುವದು:—

ಡಬ್ಲ್ಯೂ. ಇ. ಸ್ಮಿತ್ ಅಂಡ್ ಕಂಪೆನಿ,

ಮೌಂಟ್ ರೋಡ್,

ಮದರಾಸ್.

ನೋಟು ಕಳುವಾಗಿದೆ.—೦ ರೂ. ಬಹುಮಾನ.

ಇದೇ ಜುಲೈ ೯ರಲ್ಲಿ ನಂಜನಗೂಡಿನಲ್ಲಿ ನನ್ನ ಬಾಬತು ನೂರು ರೂಪಾಯಿನ ಪಿ. ಎ. ೫—೧೩೬೬೯ನ ಮೆಪರಾಸ್ ಪೂರಾ ನೋಟು ಸೈರಿಜೆ ಆಗಿದೆ. ಪತ್ತೆಮಾಡಿ ಕೊಡುವವರಿಗೆ ೦ ರೂ. ಬಹುಮಾನ ಕೊಡುವೆನು.

ವಿಳಾಸ:—ಬಿಸ್ಲ್ಯ ಸುಬ್ಬಾರಾವ ಕಟ್ಟಿ, ಜನಿಲ್ ಅಂಗಡಿ, ಚಾಮರಾಜನಗರ.

ವೃತ್ತಾಂತ ಪತ್ರಿಕೆ.

:o:

ಸರ್ ೧೯೦೫ನೇ ಇಸವಿ ಜುಲೈ ತಾ ೨೦ನೇ ಗುರುವಾರ.

ಪಾಲ್ ಕ್ರೂಗರ್ ಯನರ ಮರಣವು.

ಟ್ರಾನ್ಸ್‌ವಾಲ್ ಪ್ರಾಜ್ ಪ್ರೆಸಿಡೆಂಟ್ ವೆಂ॥ ಪಾಲ್ ಕ್ರೂಗರ್ ಯನರು ಸ್ವಿಟ್ಜರ್‌ಲೆಂಡ್ ರಾಜ್ಯಕ್ಕೆ ಸೇರಿನ ಕ್ಲಾರೆನ್ಸ್ ಪಟ್ಟಣದಲ್ಲಿ ಕಾಲವಾದರೆಂದು ಕಳವ ಪಕ್ರವಾರ ಲಂಡನ್ ನಗರದಿಂದ ತಂತೀ ವರ್ತಮಾನ ಬಂದಿದೆ. ಇವರ ಪವಸ್ಸನ್ನು ಟ್ರಾನ್ಸ್‌ವಾಲಿನಲ್ಲಿ ಅವರ ಸಹೋದರಿಯವರ ಗೋರಿಯ ಬಳಿ ಸಮಾಧಿಮಾಡುವುದಕ್ಕೆ ಆಪ್ಪಣೆ ಕೊಡಬೇಕೆಂದು ಅವರ ಸಂಬಂಧೀಕರು ಇಂಗ್ಲಾ ಗವರ್ನರ್ ಮೆಂಟಿನವರನ್ನು ಕೇಳಿಕೊಂಡರು ಗವರ್ನರ್‌ಮೆಂಟಿನವರು ಅವರಂತೆ ಒಪ್ಪಿಕೊಂಡಿರುತ್ತಾರೆ.

ವೆಂ॥ ಕ್ರೂಗರ್ ಯನರು ಕೇಪ್ ಕಾಲನಿಗೆ ಸೇರಿದ ರುಸ್ಟೆಂಬರ್ಗಿನಲ್ಲಿ ೧೮೨೫ನೇ ಅಕ್ಟೋಬರ್ ೧೦ ರಲ್ಲಿ ಜನಿಸಿದವರು. ಚಿಕ್ಕಂದಿನಿಂದಲೂ ಇವರು ಸ್ವಾರ್ಥಪರರಾಗಿದ್ದುಕೊಂಡು, ಟ್ರಾನ್ಸ್‌ವಾಲಿನ ಕ್ಷೇಮ ಜೆಂತಸಯನ್ನು ನೋಡದೆ, ಇಂಗ್ಲಿಷರನ್ನು ದ್ವೇಷಿಸುತ್ತಾ ಬಂದರು. ೧೮೯೯ನೆ ಅಕ್ಟೋಬರಿನಲ್ಲಿ ಆಂಗ್ಲಿಷರ ಮೇಲೆ ಪಟಾ ಟೋಪ ಮಾಡಿ ಯುದ್ಧವನ್ನು ಪ್ರಾರಂಭಿಸಿ, ಯುದ್ಧ ನಡೆಯುತ್ತಿರುವಾಗಲೇ ೧೯೦೦ನೆ ಸೆಪ್ಟೆಂಬರಿನಲ್ಲಿ ಟ್ರಾನ್ಸ್‌ವಾಲನ್ನೂ ಬೆಂಡರು ಮುಕ್ಕಳನ್ನೂ ಬಿಟ್ಟು, ಯೂರೊಪ್ಯಗೆ ಬಿಡಿಸೋಗರು. ಅವರು ಪ್ರಾರಂಭ ಮಾಡಿದ ಆ ಯುದ್ಧವು ೧೯೦೨ನೆ ಮೇ ೩೧ರ ವರೆಗೆ ನಡೆಯುದೂ ಅನಂತರ ಕರಾರಾವುನೂ ನಮ್ಮ ವಾಚಕರಿಗೆ ತಿಳಿಯೇ ಇದೆ. ಇವರು ಹೀಗೆ ಸೈನ್ಯಯೋಜನವನ್ನು ಮಾಡುಕ, ಇಂಗ್ಲಿಷರ ಮೇಲೆ ದಂಡು ಕಟ್ಟಿದೆ ಹೋಗಿದ್ದರೆ ಕೀರ್ತಿವಂತರಾಗಿ ತಮ್ಮ ಜನಗಳ ಮಧ್ಯೆ ಪ್ರಾಣ ಪಿಡೆಬಹುದಾಗಿದ್ದಿತು. ಈ ದೇಶಭ್ರಷ್ಟತೆಯನ್ನೂ ಆಪಮಾನವನ್ನೂ ಅವರು ತಪ್ಪಿಂದ ತಾವೇ ಸಂಪಾದಿಸಿಕೊಂಡರಾದುದರಿಂದ ಅವರ ಈ ಅಂತ್ಯವನ್ನು ಕೇಳಿ ಯಾರೂ ವ್ಯಸನಪಡಲಾರರು.

ಬಳಬೇಕದ ವೃತ್ತಾಂತಗಳು.

ಕೋಲಾರಂಕ್ಕೆ ಸೇರಿದ ಉರಿಗಡ ರೈಲ್ವೆ ಸ್ಟೇಷನ್ ಬಳಿ ಸ್ಟೀಮ್ ಉಪಯೋಗವನ್ನು ಪ್ರಾರಂಭವಾಗಿ ಪಸರನ್ನು ಚಡರಿಸಿಬಿಟ್ಟಿದೆ.

ರಾಜಧಾನಿಯ ಸಿಟಿ ಇಂಪ್ರೂವ್‌ಮೆಂಟ್ ಕಮಿಟಿಯವರು ಪುರಾಭಿವೃದ್ಧಿ ಕಾರ್ಯಗಳನ್ನು ಎಷ್ಟುಮಟ್ಟಿಗೆ ಮಾಡಿಸಿರುತ್ತಾರೆಂಬುದನ್ನು ಕ್ರಿಮ್ಮ ಮುನಿರಾಜಪ್ಪನವರು ಕಳೆದ ವಾರ ದಯಮಾಡಿಸಿ ಪರಾಂಬರಿಸಿ ಬಂದರು.

ಪೂನೆಯು ಆಕಿ ಕಲೆಕ್ಟರ್‌ಸಾಹೆ ಮೆಸ್ಸರ್ಸ್ ಎಫ್‌ವರ್ಸ್ ಯವರು ಜೈವಿನಿ ಭೂಕರಣವನ್ನು ಇಂಗ್ಲಿಷಿನಲ್ಲಿ ಬಾಷಾಂತರ ಮಾಡಿರುವುದಕ್ಕೆ ಮೈಸೂರು ಸರ್ಕಾರದವರು ಅವರನ್ನು ಬ್ರೂಟು ಮಾಡಿಸುವುದಕ್ಕೆ ಆಗುವ ಖರ್ಚನ್ನು ಕೊಪುವೆದಾಗಿ ಒಪ್ಪಿಕೊಂಡಿರುವರು.

****

ಬನ್ನೂರಿನ ಬಳಿ ಉಳ್ಳಲಗೆರೆ ಜೋಡಿದಾರ್ರು ಸಹೋದರರು ಹೋಗುತ್ತಿದ್ದಾಗ ಕಳ್ಳರು ಅವರನ್ನು ಹೊಡೆದು, ಅವರ ಬಳಿ ಇದ್ದ ೧,೫೦೦ ರೂಪಾಯಿ ಕಿತ್ತುಕೊಂಡರೆಂದೂ, ಈಗ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾರೆಂದೂ ಪ್ರಕಟವಾಗಿದೆ.

****

ನಾಳೆ ಶನಿವಾರ ಮೆ॥ ಟಕರ್ ಯವರು ಬೆಂಗಳೂರಿಗೆ ಬಂದು ಮೈಸೂರು ಸಂಸ್ಥಾನದ ರೆಸಿಡೆಂಟ್ ಕೆಲಸದ ಭಾರ್ಜನ್ನು ವಹಿಸಿಕೊಂಡು, ಕ್ರಿಸ್ಮಸ್ ಮಹಾರಾಜರವರ ಭೇಟ್ಟಿಗಾಗಿ ಬಹುಶಃ ಮುಂದಿನ ಸೋಮವಾರ ರಾಜಧಾನಿಗೆ ಬರುವವರಾಗಿರುತ್ತಾರೆಂದು ಕೇಳ್ವತ್ತೇವೆ.

****

ಆಸ್ಟ್ರೇರುಗಳನ್ನು ಬರೆತೆಗೆದಲ್ಲಿ ಪ್ರಖ್ಯಾತಿ ಪಡೆದಿರುವ ರಾಜರವಿವರ್ಮ ರವರು ತಮ್ಮ ಸಹೋದರರ ಸಂಗಡ ರಾಜಧಾನಿಗೆ ಬಂದಿದ್ದಾರೆ ಹೊಸ ಅರಮನೆಗಾಗಿ ಇವರಿಂದ ಅನೇಕ ಚಿತ್ರಗಳನ್ನು ಸ್ವೀರುಗಳನ್ನೂ ತಮ್ಮ ಮಹಾರಾಜರವರು ಬರಸುವರೆಂದು ಕೇಳ್ವತ್ತೇವೆ.

****

ಮೈಸೂರು ಸಂಸ್ಥಾನಕ್ಕೆ ಸೇರಿದ ಸಮಸ್ತ ನಾಲೆಗಳನ್ನೂ ಕೆರೆಕಾಲಿವೆಗಳನ್ನೂ ಮೇಲುಸ್ತುವಾರಿ ನೋಡಿಕೊಂಡು, ಜವಿಸುವಳಿಗೆ ನೀರು ಬಿಡುವ ವಿಷಯವನ್ನು ನಾಲಾ ಕಾಮುಗಾರಿ ವೆಚ್ಚದ ವಿಚಾರವನ್ನೂ ಸರಿಯಾಗಿ ನೋಡಿಕೊಳ್ಳಲು ಸರ್ಕಾರದವರು ಪ್ರತ್ಯೇಕವಾದ ಒಂದು ಇಲಾಖೆಯನ್ನು ಏರ್ಪಾಡುಮಾಡಿದ್ದಾರೆ.

****

ಕಳೆದ ಮಾರ್ ಆಕ್ಟೋಬರಿಗೆ ಮೈಸೂರು ಸಂಸ್ಥಾನದ ಖಜಾನೆಯಲ್ಲಿ ಒಂದು ಕೋಟಿ ರೂಪಾಯಿ ಶೇಮಕ ಉಳಿದಿದ್ದುದನ್ನು ನೋಡಿ, ದಿವಾನರವರು ಆ ಪೈಕಿ ೫೫ ಲಕ್ಷ ರೂಪಾಯಿಗೆ ಇಂಪೀರಿಯಲ್ ಸರ್ಕಾರದ ಕೇಳಪ್ಪ ೩॥ ಯಂತೆ ಬಡ್ಡಿ ಬರುವ ಪತ್ರಗಳನ್ನು ಕೊಂಡುಕೊಂಡಿದ್ದಾರೆಂದು ಬ್ಯಸ್ ಬಾತ್ಮಿದಾರರು ಮದರಾಸ್ ಮೈಲಿಗೆ ಬರೆದಿದ್ದಾರೆ.

****

ರಾಜಧಾನಿಯಲ್ಲಿ ಪ್ರಕಟವಾಗುವ ವೃತ್ತಾಂತ ಚಿಂತಾಮಣಿ ಎಂಬ ಪತ್ರಿಕೆಯಲ್ಲಿ ತಮಗೆ ಅವಮಾನಕರವಾದ ಸಂಗತಿಯು ಪ್ರಕಟಿಸಿದರೆಂದು ಮೈಸೂರು ಗಳುವಿನ ಅಂಗಡಿ ಮೂಪಪ್ಪನವರು ಆ ಪತ್ರಿಕೆಯ ಎಡಿಟರ್ ಮತ್ತು ಮ್ಯಾನೇಜರ ಮೇಲೆ ಸಿಟಿ ಮಜಿಸ್ಟ್ರೇಟ್ ಕೋರ್ಟಿನಲ್ಲಿ ಧಿರ್ಯಾದು ಮಾಡಿದ್ದಾರೆ. ಈ ಮೊಕದ್ದಮೆ ಆಗಿಷ್ಟು ಜಿಕ್ಕೆ ವಿಚಾರಣೆ ಆಗುವುದು.

****

ರಾಜಧಾನಿಯಲ್ಲಿ ಬಹು ಕಾಲ ಹೆಲ್ತ್ ಆಫಿಸರಾಗಿದ್ದು, ಈಗ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ಡಾಕ್ಟರಾಗಿ ವರ್ಗವಾಗಿರುವ ಮೆ॥ ಕೋದಂಡಪಾಣಿ ಮೊದಲಿಯಾರ್‌ಗೆ ಸಿಲ್ವರ್ (ಬೆಳ್ಳಿ) ಮೆಡಲಿನ ಅಪಿಶ್ವೆಂಟ್ ಹೆಲ್ತ್ ಆಫಿಸರ ಕೆಲಸವಾಯಿತೆಂತಲೂ, ಆ ಕೆಲಸಕ್ಕೆ ಅವರು ಅಲ್ಲಿಗೆ ಪ್ರಯಾಣ ಮಾಡುವವರಾಗಿದ್ದಾರೆಂಬ ಸಮಾಚಾರ ಕೇಳುತ್ತೇವೆ.

****

ದಕ್ಷಿಣ ಮರಾಟಾ ರೈಲ್ವೆ ಕಂಪನಿಯವರು ಬಲವಾದ ಹೊಸ ಎಸ್‌ಜೆ ಗಾಡಿಗಳನ್ನು ತರಿಸುವುದರಲ್ಲಿಯೂ ಮತ್ತು ಹುಬ್ಬಳ್ಳಿಯಲ್ಲಿ ತಮ್ಮ ಕಾರ್ಖಾನೆಯೊಳಗೆ ಆರು ಹೊಸ ಎಂಜಿನ್, ಎಂಟೆ ತರಗತಿಯ ಗಾಡಿಗಳನ್ನು ತಯಾರ್ಮಾಡಿಸುತ್ತಿರುವುದೂ ಇವುಗಳಲ್ಲಿ ಪ್ರಯಾಣಿಕರು ಉಟವಾಡುವುದಕ್ಕೂ ಅನುಕೂಲ ಏರ್ಪಡಿಸುತ್ತಾರೆ. ಪೂನೆಯಿಂದ ಮೈಸೂರಿಗೆ ಬಂದು ಹೋಗುವ ಸ್ಪೆಶಲ್ ಗಾಡಿಗಳಿಗೆ ಆ ಹೊಸ ಎಂಜಿನ್‌ಗಳನ್ನೂ ಈ ಹೊಸ ಗಾಡಿಗಳನ್ನೂ ತಗಲಿಸಿಕಾಕಿ, ಪ್ರಯಾಣಿಕರಿಗೆ ಸೌಕರ್ಯ ಕಲ್ಪಿಸಿಕೊಡುವರು.

ಆರ್ಮ್ ಬಾಲ ಸಮಾಜವು.

ಎಂಟನೆಯ ವಾರ್ಷಿಕೋತ್ಸವ.

ರಾಜಧಾನಿಯಲ್ಲಿರುವ ಸ್ಕೂಲ್ ವಿದ್ಯಾರ್ಥಿಗಳು ವಿದ್ಯೆ ಬುದ್ಧಿ ವಿಶೇಷಜ್ಞಾನಶಕ್ತಿಗಳನ್ನು ಅಭಿವೃದ್ಧಿಪಡಿಸಿಕೊಳ್ಳುವುದಕ್ಕಾಗಿ ನಿಃ ಸ್ವಾರ್ಥ ಬುದ್ಧಿಯಿಂದ ಹೆಸರಿನ ಒಂದು ಸಂಘವನ್ನು ಸ್ಥಾಪಿಸಿಕೊಂಡಿರುವರು. ಕಳೆದ ಶುಕ್ರವಾರ ಸಾಯಂಕಾಲ ಈ ಸಂಘದ ಬಾಲಕರು ಟೌನ್‌ಹಾಲ್ ಮೈದಾನಗಳಲ್ಲಿ ಎಂಟನೆಯ ವಾರ್ಷಿಕೋತ್ಸವವನ್ನು ವಿಶೇಷ ಆಡಂಬರವಾಗಿ ನೆರವೇರಿಸಿದರು. ಅರಮನೆಯ ಅಂಬ್ಯುಲೆನ್ಸ್ ಮೇಜರ್ ವಿ. ಎಚ್. ಸದಸುಂಡಯ್ಯಂಗಾರ್ಯರು ಆ ಸಭೆಯ ಅಗ್ರಾಸನವನ್ನು ವಹಿಸಿದ್ದರು. ಸುಮಾರಾಂಗಿ ರಾಜಧಾನಿಯಲ್ಲಿರುವ ಸಮಸ್ತ ವಿದ್ಯಾ ಸಂಸ್ಥೆಗಳ ಅಧಿಕಾರಿಗಳೂ ಸ್ಕೂಲ್ ಬಾಲಕರೂ ಹಾಜರಾಗಿದ್ದರೆಂದು ಹೇಳಬೇಕಾಗಿಲ್ಲವಷ್ಟೆ. ಟೌನ್ ಹಾಲ್ ಬಂಗಲೆಯು ಕೆಳಗೂ ಮೇಲಿನಿಂದ ರೋಲೆ ಗ್ಯಾಲರಿಗಳಲ್ಲೂ ಜನಜಂಗುಳಿಯಾಗಿ ನೋಟಕರು ತುಂಬಿ, ಮೇಳ್ಕಂಡ ಉತ್ಸವವನ್ನು ನೋಡಿ ಸಂತೋಷಪಟ್ಟರು.

ಪ್ರಾರ್ಥನೆ.

ಈ ಉತ್ಸವವನ್ನು ಆರಂಭಮಾಡುವಲ್ಲಿ ಸಂಘದ ಕೆಲವು ಮಂಬಟುಗಳು ಮುಂದೆ ಬಂದು ದೇವರ ಪ್ರಾರ್ಥನೆ ಸಾಡಿದರು.

ವೀಣೆ ಜಲತರಂಗು.

ನೈಜೇರಿಯಾಮಾಣಿಗಳಾದ ಮಿ॥ ರೇವಸ್ಟಾನಸೆರು ಸ್ವಲ್ಪಹೊತ್ತು ವೀಣೆತರಂಗಿನಲ್ಲಿ ಇಂಗ್ಲಿಷ್ ನೋಟುಗಳನ್ನೂ ಕೈತಿಗಳನ್ನೂ ಬಾರಿಸಿ ಇರುವಾಯ ವೀಣೆಯ ಮೇಲೆ ರಾಗ ಕೃತಿ ಪದಗಳನ್ನು ನುಡಿಸಿ, ಸಭಾಸದರ ಕಿವಿಗಳನ್ನು ತನ್ನ ಅಪ್ರತಿಮವಾದ ಕರ್ಣಾಯಂದ ಕೀಲಾಯಮಾನ ಮಾಡಿಸಿದರು.

ಸಂಸ್ಕೃತ.

ತರುವಾಯ ಸಿ. ಆರ್. ನರಸಿಂಹಶಾಸ್ತ್ರಿಗಳು ವಿಷ್ಣುಶ್ರವಣಾ ದಿಂದ ಪ್ರಸ್ಥಾನವು ತನ್ನ ಸಹಪಾಟಿಗಳಾದ ವಿದ್ಯಾರ್ಥಿಗಳಿಗೆ ಉಪ ನ್ಯಾಸವಾಡಿ ಬೋಧಿಸಿದ ವಿಷಯವನ್ನು ಬರೆದುತಂದು ಓದಿದರು.

ಹಿಂದುಗಳ ಸ್ಥಿತಿ—ಉಪನ್ಯಾಸ.

ಎಸ್. ಸುಬ್ರಹ್ಮಣ್ಯಯ್ಯರವರು ಹಿಂದುಗಳ ಪ್ರಾಚೀನ ಕಾಲದ ಮತ್ತು ಈಗಿನ ಸ್ಥಿತಿಗತಿಗಳನ್ನು ಕುರಿತು ಇಂಗ್ಲೀಷಿನಲ್ಲಿ ಒಂದು ಉಪನ್ಯಾಸವನ್ನು ಬರೆದು ಓದಿದರು. ಜಾತಿ ಪದ್ಧತಿ, ಮೂಢ ಭಕ್ತಿ, ಹಿರಿಯರಿಂದ ಬಂದ ಆಚಾರ ಸಂಪ್ರದಾಯಗಳು, ಈ ಮೊದ ಲಾದ ಸಂಗತಿಗಳನ್ನು ಚರ್ಚಿಸಿ ಬರೆದಿದ್ದರು. ಹಿಂದುಸ್ಥಾನವು ಅಭಿವೃದ್ಧಿಗೆ ಬರಬೇಕಾಗಿದ್ದ ಪಕ್ಷದಲ್ಲಿ ಪ್ರಜೆಗಳು ಪರಸ್ಪರ ಪ್ರೀತಿ ಯಿಂದಿರಲಿ ಜಾತ್ಯಭಿಮಾನವನ್ನೂ ಮೂಢಭಕ್ತಿಯನ್ನೂ ತ್ಯಜಿಸಿರಬೇಕೆಂತಲೂ, ಆಚಾರ ವ್ಯವಹಾರಗಳನ್ನು ಕಾಲಕ್ಕೆ ತಕ್ಕಂತೆ ಬದಲಾ ಯಿಸಿಕೊಳ್ಳುತ್ತಾ ಬರಬೇಕೆಂತಲೂ ಬರೆದಿದ್ದರು.

ವೇದಾಂತ ವಿಚಾರ—ಉಪನ್ಯಾಸ.

ಪಂಡಿತ ನಾರಾಯಣ ಶಾಸ್ತ್ರಿಗಳು ಉಪನಿಷತ್ತುಗಳಲ್ಲಿ ಕೇಳ್ಪಡುವ ವೇದಾಂತ ವಿಚಾರವನ್ನು ಕುರಿತು ಕನ್ನಡದಲ್ಲಿ ಒಂದು ಉಪ ನ್ಯಾಸವನ್ನು ಬರೆದುತಂದು ಓದಿದರು. ಮನುಷ್ಯನಲ್ಲಿರುವ ಆತ್ಮ ದೇ ಮನುಷ್ಯನ ಸಮಸ್ತವಾದ ಸಹಜ ಸಂತೋಷ ದುಃಖಾದಿಗಳಿಗೆ ಮೂಲಕಾರಣವಾದುದರಿಂದಲೂ ಪ್ರಾಪಂಚಿಕವಾದ ಸಮಸ್ತ ವಿಷ ಯಗಳೂ ಅನ್ಯರಿಗಾದುದರಿಂದಲೂ ಮನುಷ್ಯನು ಮೋಕ್ಷ ಸಾಧನ ಪರಿಪ್ರೇಷ್ಟನು ತ್ಯಜಿಸಿ. ಪರಸಾರ್ಥಿಕವಾದ ಸಾತ್ವತವೂ ಆದ ಪರ ಮಾತ್ಮ ಸುಖವನ್ನು ಪಡೆಕುವವನಾಗಬೇಕೆಂಬುದಾಗಿ ತಿಳಿಸಿದರು.

ಸಂಘದ ರಿಪೋರ್ಟು—ಉಪನ್ಯಾಸ.

ಆರ್ಮ್‌ಬಾಲಸಮಾಜದ ಸೆಕ್ರೆಟರಿ ಎಂ. ರಾಮಸ್ವಾಮ್ಯೆಯನವರು ಆ ಸಂಸ್ಥೆಯಲ್ಲಿ ನಡೆವ ಕಾರ್ಯಗಳು, ಮೆಂಬರುಗಳ ಸಂಖ್ಯೆ, ಜಮಾಖರ್ಚು, ಪುಸ್ತಕಭಂಡಾರ, ವಿದ್ಯಾವಂತರುಗಳಿಂದ ಸಂಘಕ್ಕೆ ದೊರೆಯುತ್ತಿರುವ ಸಹಾಯ ಪ್ರೋತ್ಸಾಹ ಉತ್ತೇಜನ, ಈ ಮೊದ ಲಾದ ವಿಷಯಗಳನ್ನು ಕುರಿತ ವಾರ್ಷಿಕರಿಪೋರ್ಟನ್ನು ಓದಿದರು.

ನಾರಾಯಣ ಮೂರ್ತಿಯೆಂಬ ವಿದ್ಯಾರ್ಥಿಯು ಆಂಗ್ಲೇಯ ಕವಿಶ್ರೇಷ್ಠನಾದ ಟೆನಿಸನ್‌ನಿಂದ ರಚಿತವಾದ ಒಂದು ಕವನವನ್ನು ಕಂಠಪಾಠಮಾಡಿ, ಸಭಾಸದರ ಮನಮುಟ್ಟುವಂತೆ ಪೇಳಿದನು. ತರುವಾಯ ರಾಮಚಂದ್ರನೆಂಬ ಬಾಲಕನು ಎರಡು ಮೂರು ಪದಗ ಳನ್ನು ಹಾಡಿ ಸಕಲರನ್ನೂ ಆನಂದವಡಿಸಿದನು.

ಸಭಾಧ್ಯಕ್ಷರ ಉಪನ್ಯಾಸ.

ಮೇ॥ ವಿ. ಎಚ್. ನರಸುಂಹಯ್ಯಂಗಾರ್ಯರು ಎದ್ದು—ನಾನು ಸ್ವತಂತ್ರನಲ್ಲವಾದರೂ ಈ ಸಮಾಜಪ್ರವರ್ಧಿಗಳಲ್ಲಿ ನನಗೆ ಅಭಿಮಾನವಿರು ವುದರಿಂದ ಈ ದಿನ ಸ್ವಲ್ಪ ಅವಕಾಶಮಾಡಿಕೊಂಡು ಬಂದಿರುತ್ತೇನೆ. ಟೆಸ್ಕಂಪನಿಯಲ್ಲಿ ನಾನೂ ಇಂಥಾ ಸಂಘಕ್ಕೆ ಸೇರಿ, ಅದರಿಂದ ತುಂಬಾ ಪ್ರಯೋಜನವನ್ನು ಹೊಂದಿರುವೆನು. ನನ್ನ ಹಿರಿಯರ ಸಂಪ್ರದಾ ಯಗಳನ್ನು ಈಗ ನಾವು ವಿವೇಚನೆಯಾವದನ್ನೆ ಅಣ್ಣಾ ಮುಚ್ಚಿಕೊಂಡು ಅನುಸರಿಸುತ್ತಾ ಬರುವುದು ತರವಲ್ಲ. ಆವೆಗಳಲ್ಲಿ ಒಳ್ಳೆಯವೂ ಹಾಮಗೆ ಈಗಿನ ಕಾಲಕ್ಕೆ ತಕ್ಕವುಗಳೂ ಒಳ್ಳೆಯವಗಳನ್ನೇ ನಿಂಗ ತಿಸಿಕೊಂಡು ಉಳಿದವುಗಳನ್ನೆಲ್ಲಾ ಬಿಟ್ಟುಬಿಡಬೇಕು. ಮತ್ತು ಇತರ ಜನಾಂಗಗಳಲ್ಲೂ ಹೊಸ ನಮಗೆ ಯಾವ ಪದ್ಧತಿ ಆಚಾರ ಅಭಿಪ್ರಾಯಗಳು ಒಳ್ಳೆಯವುಗಳೆಂದು ಕಂಡುಬರುವೆವೋ ಅಂಥವನ್ನೆ ನಾವು ಕಲಿತುಕೊಂಡು ನಮ್ಮ ಆಚಾರಗಳಿಗೆಯನ್ನಿಲ್ಲಾ ಕೊಳ್ಳಬೇಕು. ಹಿಂದೂ ಮತವೆಂದು ಹೇಳುವುದರಲ್ಲಿ ಅದರ ಅರ್ಥ ವೇನೋ ನನಗೆ ತಿಳಿಯದಿಲ್ಲ. ದ್ವೈತ, ಅದ್ವೈತ, ವಿಶಿಷ್ಟಾದ್ವೈತಗ ಳೆಂಬ ಮೂರು ಮತಗಳಿರುತ್ತವೆ. ಈ ಮೂರೂ ಒಂದಕ್ಕೊಂದು ಒಪ್ಪುವುದಿಲ್ಲ. ಆತ್ಮಲಿಂಗ ಜಾತಿ ಎಂಬುದು ಮತ ಹೌದೇ ಅಲ್ಲವೇ ಎಂದು ಅನೇಕರು ಚರ್ಚಿಸುತ್ತಿರುವರು. ನಾನಾದರೋ ಜಾತಿಯು ದಿನಗಳ ವ್ಯತ್ಯಾಸಗಳಿಗನುಸಾರವಾಗಿ ಹೊಸರು ಆದು ಮತವೆನ್ನಿಸಿ ಕೊಳ್ಳಲಾರದೆಂದು ಅಭಿಪ್ರಾಯಪಡುತ್ತೇನೆ. ಜಾತಿಯೇ ಮತ ವೆನ್ನಬಹುದು ಜಾತಿಶಬ್ದಗಳಿಗರ್ಥವನ್ನು ವಿಸ್ತರಿಸಿದರೆಂದರೆ ಅದು ಮತ ವಾಹುದೆಂದು ಎಣಿಸುವುದು ಸಹಜವೆಂದು ಹೇಳಲಾಗದು. ಬ್ರಾಹ್ಮಣ ರೂ ಬ್ರಾಹ್ಮಣೇತರರಾದ ಹಿಂದುಗಳೂ ಮುಸಲ್ಮಾನರ ಗೋರಿ ಗಳಿಗೆ ಹೋಗಿ ಪೂಜೆಮಾಡುವುದನ್ನೂ ಭೂತಿಯಾ ಕೊಯುವುದನ್ನೂ ಹರಿಕೆ ಸಲ್ಲಿಸುವುದನ್ನೂ ನೋಡಿದ್ದೇನೆ. ಇದೂ ಹಿಂದೂ ಮತವೋ ಎಂಬುದಾಗಿದ್ದೇಳ್ಳಿ ಕುಳಿತುಕೊಂದರು.

ಅನಂತರ ಸಭಾಧ್ಯಕ್ಷರಿಗೂ ಸಭಾಸದರಿಗೂ ಹಾರ ತಾಂಬೂಲ ಗಳನ್ನು ಸಂಘದ ಮೆಂಬರುಗಳು ಒಪ್ಪಿಸಿ, ಸಭೆಯನ್ನು ಮುಕ್ತಾ ಯವು ಮಾಡಿದರು.

ರಷ್ಯಾ ಜಪಾನ್ ಯುದ್ಧವು.

ಕಳೆದ ವಾರದ ಮುಖ್ಯ ತಂತೀ ವರ್ತಮಾನಗಳು.

ಲಂಡನ್, ಜುಲೈ ೧೧.—ಜರ್ಮನರು' ಕುರೋಪಾಟ್ಕಿನ್‌ರವರು ರಿಪೋರ್ಟ್ ಕೊಟ್ಟರುವುದೇನೆಂದರೆ—ಕೈಪಿಂಗಿನ ಮುತ್ತಿಗೆಯು ನೆನೇ ತಾರೀಖು ಪ್ರಾರಂಭಕಾಲಕ್ಕೆ ಪ್ರಾರಂಭವಾಯಿತು. ೬ ಗಂ ಟೆಯ ಹೊತ್ತಿಗೆ ಹಿಮ್ಮೆಟ್ಟಿದೆವು. ಜರ್ಮನ್ ಕಾಮಂಡರ್ ಸೈನ್ಯವು ನಮ್ಮ ಬೆನ್ನು ಹತ್ತಿ ಬಂದಿತು ನಮ್ಮ ಕಡೆ ಇಪ್ಪತ್ತೇ ಸಪ್ಪತ್ತಾವಾಯಿತೆಂದು ಇನ್ನೂ ಹೇಳುವುದಕ್ಕಾಗದು. ೧೪೦ ಜನರಿಗಿಂತ ಜಾಸ್ತಿಗಿ ಸಪ್ಪ ವಾಗಲಿಲ್ಲ. ಕತ್ತುಗಳ ಕಡೆ ೩ ಡಿವಿಜ್ ಕಾಲ್ಬಲವೂ ಒಂದು ಬ್ರಿಗೇಡ್ ಖುದುರೆ ಸೈನ್ಯವೂ ಬಂದು, ನಮ್ಮ ಮೇಲೆ ಯುದ್ಧ ಮಾಡಿದವು.

ಜರ್ಮನರವರು ಹೇಳುವ ಪ್ರಕಾರ ಅವರು ಎಂಟು ದಿನಗಳ ತನಕ ಬಹು ತರೀವಾಗಿ ಯುದ್ಧವನ್ನು ಮಾಡಿ, ತರುವಾಯ ಅವರು ಕೈಪಿಂಗನ್ನು ಗೆದ್ದುಕೊಂಡರು. ಈ ಯುದ್ಧದಲ್ಲಿ ಉಭಯರ ಪಕ್ಷದಲ್ಲೂ ಬಹು ಮಂದಿ ಸಪ್ಪ ಹೊಂದಿದರು.

ತಾ॥ ೬ ರಲ್ಲಿ ಜರ್ಮನರವರು ಸೈನಾತ್ಸೈಯಿಂದ ೩೦ ಮೈಲಿ ಹೊರಪಲ್ಲಿರುವ ಸಿಯರ್ ಬಾಂಗನ್ನು ಆಕ್ರಮಿಸಿಕೊಂಡಿರುತ್ತಾರೆ.

ಪೋರ್ಟ್ ಆರ್ಥರಿನ ಮುತ್ತಿಗೆ.

ಶುಕ್ರವಾರ ರಾತ್ರಿ ಮುಳೆ ಸುರಿಯುತ್ತಿದ್ದ ಸಮಯವನ್ನು ನೋಡಿ ಜಪಾನ್‌ದವರು ಪೋರ್ಟ್‌ಆರ್ಥರಿನ ಮೇಲೆ ನುಗ್ಗಿಹೋದರು. ಅವರ ಹಡಗುಗಳಿಗೂ ರಷ್ಯಾದವರ ಜಹಜುಗಳಿಗೂ ಯುದ್ಧವಾ ಯಿತು. ಫಲಿತಾಂಶವೆ ಇನ್ನೂ ಖಚಿತವಾಗಲಿಲ್ಲ.

ಪೋರ್ಟ್ ಆರ್ಥರಿನ ಸುತ್ತಮುತ್ತಿನಲ್ಲಿ ಕೆಲವು ದಿನಗಳಿಂ ದಲೂ ಯುದ್ಧ ನಡೆಯುತ್ತಲೇ ಇದೆ. ಒಂದು ವರ್ತಮಾನದ ಪ್ರಕಾರ ರಷ್ಯಾದವರು ಏನೇ ತಾರೀಖಿನ ಒಂದು ಯುದ್ಧದಲ್ಲಿ ೧,೨೦೦ ಮಂದಿಯನ್ನು ಕಳೆದುಕೊಂಡರೆಂದು ತಿಳಿದುಬರುವುದು. ಆದರೆ ಈ ವಿಷಯವಾಗಿ ಯಾವ ಪಕ್ಷದವರೂ ವಿವರಣೆಯನ್ನು ಪ್ರಕಟಿಸಿ ಇಲ್ಲವು.

ಪೋರ್ಟ್ ಆರ್ಥರಿನಲ್ಲಿರುವ ರಷ್ಯಾ ಜಹಜುಗಳು ಜರ್ಮನ್ ನವರ ಜಹಜುಗಳ ಮೇಲೆ ನುಗ್ಗಿ ಬಂದು ಪಿರಂಗಿಗಳನ್ನು ಹೊಡೆದು ಯುದ್ಧಮಾಡಿದವೆಂದು ಅಲ್ಲಿನ ಒಂದು ಪತ್ರಿಕೆಯು ತಿಳಿಸುವುದು.

ರಷ್ಯಾದವರ ವೀಟ್‌ಹೆರ್ಡ್ ಎಂಬ ರಿಜಿಮಿಟ್ ಕಾಲ್ಬಲವೆ ಯುದ್ಧಭೂಮಿಗೆ ಪ್ರಯಾಣವಾಡಿತು. ಈ ಸೈನಿಕರ ಮೇಲೆ ಜರ್ಮನಿ ಚಕ್ರವರ್ತಿಯವರಿಗೆ ಕವ್ಯಾಂಡರೆಂಬ ಬಿರೀ ಬಿರುದು ಮತ್ತು ಇರುವೆದು. ಇದಕ್ಕಾಗಿ ಆ ಚಕ್ರವರ್ತಿಯವರು ಆ ಸೈನಿಕರಿಗೆಲ್ಲಾ ಒಂದು ತಂತೀ ವರ್ತಮಾನವನ್ನು ಕಳುಹಿಸಿಕೊಟ್ಟಿರು. ಏನೆಂ ದರೆ—ನನ್ನ ಪುಟ್ಟಿಗೆ ಸೇರಿದ ನಿಮ್ಮ ರಿಜಿಮಿಟು ಯುದ್ಧಭೂಮಿಗೆ ಹೋಗುವುದೆಂದು ಕೇಳಿ ನಾನು ಸಂತೋಷಪಡುತ್ತೆನೆ. ನೀವು ರಷ್ಯಾ ಚಕ್ರವರ್ತಿಯವರಿಗೋಸ್ಕರಲೂ ನಿಮ್ಮ ಜನ್ಮಭೂಮಿಗೋಸ್ಕರ ಲೂ ಜರ್ಮನರವರ ಮೇಲೆ ಬಹಳ ಪರಾಕ್ರಮದಿಂದ ಯುದ್ಧ ನಾಡಿರೆಂದು ನಾನು ನಂಬಿ ಆಹಂಕಾರ ಪಡುತ್ತಿದ್ದೇನೆ. ನಿಮಗೆ ಜಯವಾಗಲೆಂತೂ, ದೇವರು ನಿಮ್ಮ ಬಾವುಟವನ್ನು ಆರ್ಭಟದಿಸಲೆಂದೂ ಪ್ರಾರ್ಥಿಸುವೆನು ಎಂಬುದೇ.

ಲಂಡನ್, ಜುಲೈ ೧೦.—ಕೈಪಿಂಗಿನಲ್ಲಿ ೫, ೬, ೭ನೇ ತಾ. ಗಳಲ್ಲಿ ನಡೆದ ಯುದ್ಧಗಳೊಳಗೆ ಜರ್ಮನರವರ ಕಡೆ ೩೫ ಮಂದಿ ಸಪ್ಪಜೊಂದಿದರೆಂದು ಜರ್ಮನರ' ಒಕ್ಕೂಯವರು ತಿಳಿಸುತ್ತಾರೆ. ೮ನೆ, ೯ನೆಯ ತಾರೀಖುಗಳಲ್ಲಿ ನಡೆದ ಯುದ್ಧಗಳಲ್ಲಿ ಎಷ್ಟು ಮಂದಿ ಸಪ್ಪಜೊಂದಿದರೋ ತಿಳಿಯಬಿಲ್ಲ. ತಾ. ೯ರಲ್ಲಿ ರಷ್ಯಾದವರ ರ ಕಡೆ ೨೫,೦೦೦ ಸೈನಿಕರು ಕೈಪಿಂಗಿನ ಬಳಿ ಜಮಾಯಿಸಿದ್ದರೆಂದು ಆಲ್ಲಿನವರು ಹೇಳುತ್ತಾರೆ. ತಾ. ೯ರಲ್ಲಿ ಜರ್ಮನರವರ ಮೇಜರ್ ಜನರಲ್' ಕೊಯಾಡ್ ಸೂಮಿಯರವರಿಗೆ ತೊಡೆಯಲ್ಲಿ ಗುಂಡಿನೇಟು ಬಿದ್ದು ಗಾಯವಾಗಿದೆ.

ಪೋರ್ಟ್ ಆರ್ಥರಿನ ಮುತ್ತಿಗೆ.

ನೆನ್ನೆ ಸಾಯಂಕಾಲ ಪೋರ್ಟ್ ಆರ್ಥರಿನಲ್ಲಿ ಏನೋ ಒಡೆದು ಹೋದಂತೆ ಎರಡಾವರ್ತಿ ದೊಡ್ಡ ಶಬ್ದ ಕೇಳಿಬಂತು ಎಂದು ಫಿಲ್ಲೋ ದಿಂದ ಸದಾಚಾರ ಬಂದಿದೆ.

ರಷ್ಯಾದವರ ಭಾರೀ ಸೂಲ.

ಸುಮಾರು ಮೂರು ವಾರಗಳ ಕೆಳಗೆ ರಷ್ಯಾ ಗವರ್ನಮೆಂಟು ನವರು ಜರ್ಮನಿಯ ಮೂರು ಬ್ಯಾಂಕುಗಳಿಂದ ಈ ಲಕ್ಷ ಪೌಂ ಡುಗಳನ್ನು ಬೇಡಾ ೫ ರಂತೆ ಬಡ್ಡಿಗೆ ಸಾಲವಾಡಿರುತ್ತಾರೆ.

ಜರ್ಮನಿ ಚಕ್ರವರ್ತಿಯವರ ತಂತೀ ವರ್ತಮಾನ.

ಜರ್ಮನಿ ಚಕ್ರವರ್ತಿಯವರು ಜರ್ಮನರವರ ಸೈನ್ಯಕ್ಕಾಗಿ ರಷ್ಯಾ ಸೈನಿಕರಿಗೆ ತಂತೀ ವರ್ತಮಾನ ಕೊಡಲಿಲ್ಲವೆಂಬಲೂ, ತಾವು ಆ ರಿಜಿಮಿಟನ ಕರ್ನಲ್‌ರಾಗಿದ್ದರಿಂದ ಅವರಿಗೆ ಕುಶ ವಾದಸನವನ್ನು ತಿಳಿಸಿದರೆಂತಲೂ ಇವೇ ಮೊದಲಿನ ವರ್ತಮಾನ ಪತ್ರಿಕೆ ಗಳು ಸಮಜಾಯಿಷಿ ಕೊಟ್ಟಿವೆ.

ಪೋರ್ಟ್ ಆರ್ಥರಿನ ಮುತ್ತಿಗೆ.

ಲಂಡನ್, ಜುಲೈ ೧೩.—ಜರ್ಮನರವರು ೧೯ನೆಯ ತಾರೀಖು ರಾತ್ರಿ "ಪೋರ್ಟ್ ಆರ್ಥರಿನಮೇಲೆ ಹುಗ್ಗಿಲುಬದ್ಧವಾಗಿದರೆಂತಲೂ, ಅವರ ಉದ್ದೇಶವೆ ಸಫಲವಾಗದೆ ವಿವರಿಸುವುದಕ್ಕಾಗದಷ್ಟು ಸೈನ್ಯ ವನ್ನು ಕಳೆದುಕೊಂಡು ಸೋತು ಓಮ್ಮೆಟ್ಟಿದರೆಂತಲೂ, ಜರ್ಮನ ಪಕ್ಷದಲ್ಲಿ ೩೦,೦೦೦ ಸೈನಿಕರು ಸಪ್ಪವಾಗಿರಬಹುದೆಂತಲೂ ರಷ್ಯಾ ರಾಜಧಾನಿಯಲ್ಲಿ ಪ್ರಕಟವಾಗಿದೆ. ರಷ್ಯಾದವರು ಮುದ್ದನ್ನು ಭೂಮಿ ಯೊಳಗೆ ಆಡಗಿಸಿಟ್ಟಿದ್ದು ಅದಕ್ಕೆ ಬೇಕಾ ತಿಪ್ಪಿ ಸಾರಿಸಿದ್ದರಿಂದ ಅಷ್ಟುಜನ ಜರ್ಮನರು ಸಪ್ಪವಾದರೆಂದು ವರ್ತಮಾನವಿದೆ.

ಲಂಡನ್, ಜುಲೈ ೧೪.—ಈ ದಿನ ಪೋರ್ಟ್ ಆರ್ಥರಿನ ಬಳಿ ಕತ್ತುಗಳು ಸಮುದ್ರದ ಮೇಲೆ ಯುದ್ಧ ಮಾಡಿದರು.

ಪೋರ್ಟ್ ಆರ್ಥರಿನ ಹತ್ತರ ಲುಗಾಯಾಂ ಬೆಟ್ಟದಲ್ಲಿ ಎತ್ತರ ವಾದ ಸ್ಥಳಗಳನ್ನು ಆಕ್ರಮಿಸಿಕೊಳ್ಳಬೇಕೆಂದು ಜರ್ಮನವರು ೩ನೆ, ೫ನೆ ತಾ. ಗಳಲ್ಲಿ ಯುದ್ಧ ಮಾಡಿ ಸೋತುಹೋದರು. ರಷ್ಯಾ ದವರೇ ಆ ಸ್ಥಳಗಳನ್ನು ಗೆದ್ದು ಆಕ್ರಮಿಸಿಕೊಂಡರು. ರಷ್ಯಾದವ ರಲ್ಲಿ ೨೪೪ ಮಂದಿಯೂ ಜರ್ಮನರವರಲ್ಲಿ ೩,೦೦೦ ಮಂದಿಯೂ ಈ ಯುದ್ಧದಲ್ಲಿ ಸಪ್ಪವಾಗಿದಾರೆ.

೧೦ನೇ ತಾ. ರಾತ್ರಿ ಪೋರ್ಟ್ ಆರ್ಥರಿನ ಬಳಿ ದೊಡ್ಡ ಯುದ್ಧ ವಾಗಲೇ ಇಲ್ಲವೆಂತಲೂ, ಜರ್ಮನರವರ ಕಡೆ ೨೫,೦೦೦ ಮಂದಿ ಸಪ್ಪಬಿದ್ದರೆಂಬ ಸುದ್ದಿ ನಿಜವಲ್ಲವೆಂತಲೂ ಜರ್ಮನ್ ಸರ್ಕಾರದವರು ಸರ್ಕಾರಿಯಾಗಿ ಪ್ರಕಟಿಸಿರುತ್ತಾರೆ.

ಟುಮೆಬಾಸ್ಸೋ ಬಳಿಯಲ್ಲಿ ರಷ್ಯಾ ಜರ್ಮನ್ ಸೈನ್ಯಗಳು ಬಹಳ ಪಾಗಿ ಸೇರುತ್ತಿವೆ. ಅಲ್ಲಿ ಬಹು ಕಠೋರವಾದ ಯುದ್ಧ ನಡೆಯುವು ದೆಂದು ಹೇಳುವರು.

ಪಾರ್ಟಿಯಲ್ಲಿ ಜರ್ಮನರವರು ಆಗಾಧವಾದ ಕೋಟೆ ಕೊತ್ತಲು ಗಳ ಕಾವಲುಗಾರಿ ಮಾಡಿಸುತ್ತಲೂ, ೫೦,೦೦೦ ಹೊಸ ಸೈನ್ಯವಕ್ಕೂ ೨೦—೩೦ ಪಿರಂಗಿಗಳನ್ನೂ ತಂದು ಇಳಿಸುತ್ತಲೂ ಇವರೆ.

ಭಕ್ತಿ ವಿಜಯ.

[ಕಳೆದವಾರದ ಪೆಸ]

ಇಷಭಕ್ತಿಕಟ್ಟೆಯು ಕೇಳಿದ ಪ್ರಶ್ನೆಗೆ ನವರತ್ನಂ ಕೃಷ್ಣರಾಯರು ನೇಳಿದ ಪ್ರತ್ಯುತ್ತರವನ್ನು ಕೇಳಿ ಎಲ್ಲರೂ ಮೆಚ್ಚಿ, ಇದಕ್ಕೆ ಯಾರಾದರೂ ಆಕ್ಷೇಪಣೆಮಾತಲು ಧೈರ್ಯಗೊಳ್ಳಲಾರರೆಂದು ಗ್ರಹಿಸಿದಲ್ಲದೆ, ಇಷಭಕ್ತಿಕಟ್ಟೆಯು ಬಾಬುಜಿ ಳಳೆಯನ್ನು ಇಳಿಸಿದಲ ದಯಪ್ಪನೂ ಕೋರಿಕೆ ಗೆಡನೂ ಇನ್ನು ಮುಂದೆ ಮುಂದೆ ಹೋಗುತ್ತಿರುವುದನ್ನು ಕಂಪು, ಅವನಾದರೂ ಇದಕ್ಕೆ ಬದಲು ಮಾತು ಬೇಳಲಾರರೆಂದು ಭಾವಿಸಿ, ಅವರಿಗೆ ಇದನ್ನು ತಿಳಿಸಿ ಅಭಿಪ್ರಾಯವನ್ನು ಕೇಳಬೇಕೆಂದು ದೃಢಮಾಡಿಕೊಂಡು ಪ್ರಶ್ನೆಯನ್ನು ಇಷಭಕ್ತಿಕಟ್ಟೆಯು ಮುಖಾಂತರ ಕೇಳಿಸಿದರೆ ಅವರ ಹಿಂದಣ ಕೋನವು ತಲೆದೋರಿತೆಂದು ಕಂಠಿಸಿ, ವೃದ್ಧನೂ ವಿಚಾರದರನೂ ಆಗಿರುವ ಪ್ರಧಂಜ ಪ್ರಮಥಾಸ್ತ್ರಾಯ ಬಾಯಿಂದ ಕೇಳಿಸಿದರು

ಜಯಪ್ಪನು ಪ್ರಶ್ನೆಯನ್ನು ಕೇಳಿ ಸುಮನಸ್ಕನು, ಇದೊಂದು ಅಸಾಧ್ಯವಾದ ಪ್ರಶ್ನೆಯೇ ? ಇದರ ತಪ್ಪನ್ನು ಒಬ್ಬ ಚಿಕ್ಕಹುಡುಗನು ಸಹ ತೋರಿಸಿಕೊಡಬಲ್ಲನು ಆಜಾರದ ಆಳಿಗೋಸ್ಕರ ಯೇ ಸುಸ್ವಾಮಿಯನ್ನು ಹಿಂಬಾಲಿಸಿಕೊಂಡು ಹೋಥ ಆ ಜನಗಳನ್ನು ನೋಡಿ, ಸ್ವಾಮಿಯು ಆಜ್ಞಾಪಿಸಿದ್ದೇ ಆಪರೆ ಲೌಕಿಕ ಸುಖಭೋಗಗಳನ್ನು ಅನುಭವಿಸುವದಕ್ಕೋಸ್ಕರ ಆ ಸ್ವಾಮಿಯು ನೇವೆಯನ್ನು ನಿವಿತ್ತವಾಗಿ ಮಾಡಿಕೊಳ್ಳುತ್ತಿದು ಎಷ್ಟು ಹೇಯವಾದ ದ್ರೋಹಕೃತ್ಯವು ? ಇದನ್ನು ಅಜ್ಞಾನರೂ, ಕಪಟಿಗಳೂ, ಸದವೈರಿಯಾದ ಪರಂಚಸಂಥ ದುರಾತ್ಮರೂ ಮಾಡುವ ಲೆಲಸ ! ದ್ರವ್ಯಾರ್ಜನೆಯಿಂದ ಮಾತಾ ವಲಂಬನೆ ಮಾಡುವನು ಅದೇ ದ್ರವ್ಯಾರ್ಜನೆಯ ದೆಸೆಯಿಂದಲೆ ಕಾಲಾ ನುಕಾಲದಲ್ಲಿ ಆ ನುತನನ್ನು ಪರಿತ್ಯಾಗ ಮಾಡುವನಲ್ಲವೇ ? ಇದಕ್ಕೆ ಗುರುದ್ರೋಹವೂ ಯೂದನೆಂಬನ ಸಂಗತಿಯೊಂದೇ ಸಾಕಾಗಿದೆ ಯೂಕೂಬನ ಮಗಳ ನೇಲಣ ಪುರಾರಯಂದ ಅವನ ಮತನನ್ನವಲಂಬಿಸಿದ ಆ ಅಜ್ಞಾನರಿಗೆ ಯಾವ ಗತಿ ಬಂದಿತು, ತಿಳಿಯದೇ ? ಉತ್ತತ್ತಿಕಾಂಡದ ಮೂಲವೆನ್ನುನೇ ಆಧ್ಯಾಯವನ್ನು ಚನ್ನಾಗಿ ಓದಿನೋಡಿರಿ ಕ್ರೀಸ್ತಸ್ವಾಮಿಯು ಕಾಲದ ಫರಿಸಿಂಯರೂ ದ್ರವ್ಯಾರ್ಜನೆಯನ್ನೇ ಮುಖ್ಯೋದ್ದೇಶವಾಗಿ ಮಾಡಿಕೊಂಡು, ದೀರ್ಘವಾದ ನೇವರ ಪ್ರಾರ್ಥನೆ ಉರವಾಸ ಮೊದಲಾದ ನೇವಾಗ ಳಲ್ಲಿ ಅತ್ಯಾಸಕ್ತರಾಗಿ ಕಪಟ ಬ್ರಾಹ್ಮಣಿಗಳೆಂದು ಹೆಸರು ಪಡೆಯು ಲಿಲ್ಲವೇ ? ಮಂತ್ರಮಂದಿರವಾದ ನೀರೋನನು ಅಪೊಸ್ತಲರ ಅಭ್ಯಾತ ಶಕ್ತಿಯನ್ನು ನೋಡಿ ಭ್ರಮಿಸಿ, ಅದರಿಂದ ತಾನೂ ಹೇರಳವಾಗಿ ಧನಾರ್ಜನೆಯನ್ನು ಮಾಡಬಹುದೆಂಬ ದುರಾಲೋಚನೆಯಿಂದ ಆ ಶಕ್ತಿಯನ್ನು ಕೊಂಡುಕೊಳ್ಳಬೇಕೆಂದು ಪ್ರಯತ್ನಿಸಿ, ಪೇತ್ರನ ಶಾಪವನ್ನು ಹೊತ್ತುಕೊಳ್ಳಲಿಲ್ಲವೇ ? ಇಷ್ಟೆಲ್ಲಾ ನಿದರ್ಶನಗಳಿದ್ದರೂ ವಿವೇಕ ಕೊನ್ಯರಾಗಿ ಇಂಥ ಪ್ರಶ್ನೆಯನ್ನು ಕೇಳಬಹುದೇ ?

ಹೀಗೆಂದು ಜಯಪ್ಪನು ಉತ್ತರವನ್ನು ಕೊಡಲು, ಆ ಸಾಲ್ಕು ಮಂದಿ ಸಂಖನ್ಯರು ಪ್ರತ್ಯುತ್ತರವನ್ನು ಕೊಡಲಾರದವರಾಗಿ ಸ್ತಂಭೀ ಭೂತರಾದರು ಒಬ್ಬರನ್ನೊಬ್ಬರು ನೋಡಿಕೊಂಡು ನಿಂತರು ತ ರುವಾಯ ಸ್ವಲ್ಪ ಚೇತರಿಸಿಕೊಂಡು, ಜಯಪ್ಪನನ್ನೂ ಅವನ ಸಂಗಡಿ ಗನನ್ನೂ ಮುಂದೆ ನಡೆಯಬಿಟ್ಟು, ತಾವೆ ಲ್ಲವೆನ್ನೆಲ್ಲಗೆ ಹಿಂದೆ ಸರಿದರು. ಜಯಪ್ಪನು ಜೈತಗಾರನಿಗೆ—ಇವರು ನುನುವ್ಯರ ನ್ಯಾಯತೀರ್ಪಿಗೇ ನಿಲ್ಲಲಾರದವರಾದರೆ ನೇವರ ನ್ಯಾಯತೀರ್ಪಿನ ಮುಂದೆ ನಿಲ್ಲಲಾಪರೇ ? ಎಂದನು.

೮ ನಿರಾಕಾರುರನ ಕೋಟಿ

ತರುವಾಯ ಯಾತ್ರಿಕರಿಬ್ಬರೂ ಪಯಣಗತಿಯಿಂದ "ದೇವ ನದಿ" ಎನಿಸಿಕೊಳ್ಳುವ ನದಿಯ ತೀರಕ್ಕೆ ಬಂದರು. ಇದಕ್ಕೆ ಈ ಹೆಸರನ್ನು ಜಾನೀದನೆಂಬ ರಾಜರ್ಷಿಯು ಇಟ್ಟನು. ಕ್ರೀಸ್ತ ಸ್ವಾಮಿಯು ಪ್ರೇಮಪಾತ್ರ ಪ್ರೇಷಿತನಾದ ಯೋಹಾನನು ಇದಕ್ಕೆ "ಜೀವ ಜಲದ ನದಿ" ಎಂದು ಹೆಸರಿಟ್ಟಿದ್ದನು ಜಯಪ್ಪನೂ ಕೋರಿಕೆ ಗೆಡನೂ ಹೋಗಬೇಕಾಗಿದ್ದ ಪಯಣದ ದಾರಿಯು ಈ ನದಿಯ ತೀರದಲ್ಲಿ ಹೋಗುತ್ತಿದ್ದುದರಿಂದ ಅವರ ಪ್ರಯಾಣವು ಅತ್ಯಂತ ಸ ವ್ಯವಾಗಿದ್ದಿತ್ತೆಂದು ಹೇಳಬೇಕಾಪುದಿಲ್ಲ. ಇಷಲ್ಲದೆ ಪಯಣ ಗತಿಯಿಂದ ಅವರು ಬಹು ಬಳಲಿದವರಾಗಿದ್ದುದರಿಂದ ಆ ನದಿಯ ನೀರನ್ನು ಕುಡಿದು ದಣುವಾರಿಸಿಕೊಂಡರು ನದಿಯ ಇಸ್ಪಡೆಗಳ ಲ್ಲಿಯೂ ವಿಧವಿಧವಾದ ಫಲಗಳಿಂಪ ತುಂಬಿ ತೂಗಾಡುತ್ತಿದ್ದ ಅನೇಕ ಜಾತಿಯ ಮಧಗಳು ನಿರಂತರವೂ ಹಸುರಾಗಿ ಕಂಗೊಳಿಸುತ್ತ ರನು ಣೀಯನಾಗಿದ್ದುವು ಬಹುಕಾಲ ಪಯಣ ಮಾಡುವುದರಿಂದ ದೇಹ ಪಲ್ಲಿ ಉಷ್ಣವು ಹೆಚ್ಚಿ ನಾನಾತರವಾದ ರೋಗಗಳು ಹುಟ್ಟುವುವಪ್ಪೆ, ಇಂಥಾ ರೋಗಗಳಿಗೆ ಈ ಮಧಗಳ ಎಲೆಗಳು ಬಹು ಒಳ್ಳೇ ಔಷಧವಾಗಿದ್ದುವು. ನದಿಯ ಉಭಯ ಪಾರ್ಶ್ವಗಳಲ್ಲಿ ನಾನಾತರವಾದ ಹೂ ಗಿಡಗಳಿಂದ ತುಂಬಿದ ಹಸುರು ಗಾವಲುಗಳೂ ಇದ್ದುವು ಇವು ವರ್ಷವೆಲ್ಲವೂ ಹಸುರಾಗಿಯೇ ಇರುತ್ತಿದ್ದುವು ಇಂಥಾ ರವಣೀಯವಾದ ಪ್ರದೇಶದಲ್ಲಿ ಯಾತ್ರಿಕರು ಕೆಲವು ಕಾಲ ವಿಶ್ರಮಿಸಿಕೊಂಡಿದ್ದು, ತರುವಾಯ ಬೇಕಾದಷ್ಟು ಫಲಹಾರವನ್ನು ಮಾಡಿಕೊಂಡು, ಪು ಪ್ರಕಾರ ಆ ನದಿಯ ತೀರದಲ್ಲಿ ಹಲವು ದಿನಗಳನ್ನು ಕಳೆದರು

ಅನಂತರ ಅವರು ಪಯಣವನ್ನು ಬೆಳೆಸಿ, ನದಿಯ ಪಕ್ಕದಲ್ಲಿ ಸ್ವಲ್ಪ ದೂರ ಹೋಗಲು ಅವರು ಹಿಡಿದಿರುವ ದಾರಿಯು ನದಿಯಂತ ದೂರವಾಗುತ್ತ ಹೋಯಿತು ಇದರಿಂದ ಯಾತ್ರಿಕರಿಗೆ ಉಲ್ಲಾ ಸವು ಬಹು ಕಡಮೆಯಾಯಿತು. ಅದರೂ ಅವರು ದಾರಿಯನ್ನು ಬಿಟ್ಟು ಸುಖವಾಗಿ ತೋರುವಂಥ ನದಿಯ ಪಕ್ಕದ ಹುದಿಯನ್ನೇ ಹಿಂಬಾಲಿಸಿ ಹೋಗುವಷ್ಟಕ್ಕೆ ಧೈರ್ಯಪಡಲಿಲ್ಲ. ಈಗ ಅವರು ಹಿಡಿದಿದ್ದ ದಾರಿಯಾದರೋ ಬಹು ಕೆಟ್ಟಕಲ್ಲಾಗಿತ್ತು. ಅವರು ಬಹು ಹೂರ ವಯಣಮಾಡಿದವರಾದ್ದರಿಂದ ಅವರ ಕಾಲು ಬಹು ನುಗ್ಗು ವಾಗಿದ್ದುವು. ಕಾಲಿಗೆ ಕಲ್ಲು ಸೊಕಿದರೆ ಬಹು ನೋವಾಗುತ್ತಿ ದ್ದಿತು ಆದುದರಿಂದ ಜಾಬುದ್ದನೂ ಅವನ ಸಂಗಡಿಗನೂ ಬಹು ನೊಂದುಹೋದರು ಇದಕ್ಕಿಂತ ಸುಖಕರವಾದ ಬೇರೆ ದಾರಿಯೂ ದರೂ ಸಿಕ್ಕಲಾರದೇ ಎಂದು ಹಂಬಲಿಸುತ್ತಾ ನಡೆಯುತ್ತಿರುವಷ್ಟಿ ಆ ರಾಜ ಮಾರ್ಗದ ಎಡಗಡೆಯಲ್ಲಿ ಒಂದು ಬೈಲು ತೋರ ಬಂತು ಅದಕ್ಕೆ ಹೋಗುವಂಥ ಒಂದು ಪಾದಿಯೂ ಸವಿಾಪದಲ್ಲೆ ನೋರಿತು. ಆ ಬೈಲಿಗೆ ಕಾಪು ದಾರಿಯು ಫೈಜಾನೆಂಬ ಹೆಸರು ಬಯಸುವು ಆ ಸೀಳು ದಾರಿಯು ಒಡೆಯುವ ಸಂಳದ ಬಳಿಗೆ ಬಂದು ಅವರ ಮಗ್ಗುಲಲ್ಲಿ ಚಿನ್ನಾಗಿ ಪರೀಕ್ಷಿಸಿ ನೋಡಿ, ಆದು ಆ ರಾಜಮಾರ್ಗ ದ ಆಚೆ ದಕ್ಕನಾಗಿ ಹೋಗುತ್ತ ಇರುವದನ್ನು ಗೊತ್ತುಮಾಡಿಕೊಂ ಡು, "ನಾನು ಆಪೇಕ್ಷಿಸಿದ ಪ್ರಕಾರವೇ ಇವೆ, ಬನ್ನಿ, ಬನ್ನಿ, ಕೋರಿಕೆ ಗೆಡರೇ ದಾರಿಯೂ ಸಡಿಯುವುಷ್ಟಕ್ಕೆ ಬಹು ಅನುಕೂಲವಾಗಿದೆ" ಎಂದು ಕರೆದು ಹೇಳಿದನು

ಕೋರಿಕೆ—ದಾರಿಯೇನೋ ಅನುಕೂಲವಾಗಿರುವಂತೆ ತೋ ರುತ್ತಿದೆ, ಆದರೆ ರಾಜಮಾರ್ಗದಿಂದ ತಪ್ಪಿಸಿ, ಅಲ್ಲಿ ಮಾರ್ಗಕ್ಕೆ ತಕ್ಕ್ಯಾಂಡು ಹೋದರೆ ಸ್ಯಾಗೆ ?

ಜಯ—ಜಾಗುಂಟೇ ? ದಾರಿ ತಪ್ಪಿಸಲಾರದು, ನಮ್ಮೆ ರಂಜ ಮಾರ್ಗದ ಮಗ್ಗುಲಲ್ಲೆ ಹೋಗುವುದನ್ನು ಕಾಣಿರಾ ?

ಈ ಪ್ರಕಾರ ಯಾತ್ರಿಕರಿಬ್ಬರೂ ಈಪ್ಪಭೀತವಾದ ರಾಜ ಮಾರ್ಗವನ್ನು ಬಿಟ್ಟು, ಸಂಕವನ್ನು ದಾಟಿ ಆಚೆ ಕಾಲಿಟ್ಟು ಸೊತಲೆ ಆಸಿಗೆ ಪಯಣವು ಬಹು ಉಲ್ಲಾಸಕರವಾಗಿ ಸಾಗಿತು ಹೀಗೆ ಕೆಲವೆ ದೂರ ಹೋಗುವಲ್ಲಿ ಮುಂದೆ ವ್ಯಕ್ತ ಸಂಬಳಿಯೊಂಬಿಟ್ಟ ಭೂಮಿಯು ನಡೆದು ಹೋಗುತ್ತಿರುವುದನ್ನು ಕಂಡು, ಅವನ್ನು ಕೂಗಿ ಕರೆದು—ಅಯ್ಯಾ, ಈ ದಾರಿ ಎಲ್ಲಿಗೆ ಹೋಗುತ್ತೆ ? ಎಂದು ಕೇಳಲು, ಅವನು ಹಿಂದಕ್ಕೂ ತಿರುಗಿ ನೋಡಿ—ದೇವಪುರಕ್ಕೆ ಎಂದು ಹೇಳಿದನು. ಆಗ ಜಯಪ್ಪನು ಸಂಗಡಿಗನಿಗೆ—ನೋಬಿರಾ, ನಾನು ಬೇಳಲಿಲ್ಲವೇ ? ಎಂದುಕೊಂಡು ಹಿಗ್ಗಿದನು ಈ ರೀತಿ ಯಲ್ಲಿ ಆ ಸಂಬಿಕಪ್ಪನು ಮುಂದೆಮುಂದೆ ಯಾತ್ರಿಕರು ಹಿಂಗೆಯೂ ನಡೆದು ಹೋಗುತ್ತಾ ಸಾಯಂಕಾಲವಾಯಿತು ಕ್ರಮೇಣ ರಾತ್ರಿ ಯೂ ಆಯಿತು. ಕತ್ತಲು ಮುಸುಕಿತು ಮುಂದೆ ಹೋಗುವದನು ಯಾವ ದಾರಿಯಲ್ಲಿ ಹೋಗುತ್ತಾನೋ ಎಂಬ ತಿಳಿಯದೆ ಹೋಯಿ ತು. ಆ ಪ್ರೆದಿನಲ್ಲಾದರೋ ಆಗಂಧವಾದ ಹುಲ್ಲಗಳು ತುಂಬಿದ್ದುವೆ. ವ್ಯರ್ಥ ನಂಬಿಕಪ್ಪನು ನೆಲ್ಲುಮರೆತೂ ಕತ್ತಲಿನಿಂದ ಕಣ್ಣೂ ಕಾಣದೆ ಒಂದು ಹಳ್ಳದಲ್ಲಿ ಬಿದ್ದು ನೆನು ಮುಖುಳೋವರು. ಅವನು ಬಿಳಿಲುವ ಶಬ್ದವು ಯಾತ್ರಿಕರಿಗೆ ಕೇಳ ಬಂದು ಅವರು ಅನನನ್ನು ಕೂಗಿ ಕರೆಪ, ಏನಾಯಿತದ್ದು ಎಂದು ಕೇಳಲು, ಸರಳಾದುವ ಶಬ್ದವು ಕೇಳಿತೇ ಹೊರತು ವ್ಯತ್ಯುತ್ತರವೇನೂ ಬರಲಿಲ್ಲ ಆಗ ಕೋರಿಕೆ ಗೆಡನು ಜಯಪ್ಪನನ್ನು ನೋರಿ—ಎಂಥ ದಾರಿಗೆ ಬಂದು ಬಿಟ್ಟೆವಪ್ಪಾ ಎಂದು ಪರಿತಾಪಡಲು, ಜಯಪ್ಪನು ತನ್ನಿಂದಲೆ ದಾರಿ ತಪ್ಪುವುದಕ್ಕೆ ಕಾರಣವಾಯಿತೆಂದು ತಿಳಿದು, ವ್ಯಸನಪಡಬೇಡವೆಂದು ಸಂತೈಸಿ, ಸಿಡಿಲೂ ಮಿಂಚೂ ಭಯಂಕರವಾಗಿ ಕಾಣಿಸಿಕೊಂಡ ಪ್ರ ಪ್ರವಾಹವೆ ಬರುತ್ತ ಬರುತ್ತ ಹೆಚ್ಚಿತು

ಕೋರಿಕೆ—ಅಯ್ಯಾ, ನಾನು ವಿವೇಕಶೂನ್ಯನಾದೆನಲ್ಲ ! ದಾರಿಬಿಟ್ಟು ಹೋಗಬಾರದಾಗಿತ್ತಲ್ಲ ಎಂದು ಹಂಬಲಿಸಿದನು

ಜಯ—ಈ ಸೀಳುದಾರಿಯು ಹೀಗೆ ನವ್ಮನ್ನು ರಾಜಮಾರ್ಗ ದೀಂದ ದೂರವಾಗಿ ತಕ್ಕೊಂಡು ಹೋಗುವದೆಂದು ಯಾರಾದರೆ ಯೋಚಿಸಿದ್ದರು' ಎಂಬು ಸ್ವಲ್ಪ ಸುದುಸಿನಿಂದ ಹೇಳಿದನು

ಕೋರಿಕೆ—ಈ ದಾರಿಯಲ್ಲಿ ನಡೆದರೆ ರಾಜಮಾರ್ಗದಿಂದ ದೂರ ಹೋದೇನೇನೋ ಎಂಬ ಅನುಮಾನವಲ್ಲ ತಪ್ಪುದಾರಿಂದಲೆ ನಾನು ಆರಂಬದಲ್ಲಿಯೇ ಎಚ್ಚರಿಕೆ ಕೊಟ್ಟೆನು ನೀವು ನನಗಿಂತ ಹಿರಿಯರಾದಕಾರಣ ನಾನು ಒತ್ತಿ ಹೇಳಲಿಲ್ಲ.

ಜಯ—ಪ್ರಿಯರೇ, ಕೋಪ ಕೆಲಸನಿಲ್ಲ, ನಾನಂ ಕೆಟ್ಟಿದ್ದಲ್ಲಪ್ಪಿ ನಿವ್ಮನ್ನೂ ದಾರಿತಪ್ಪಿಸಿದೆನು. ಇದು ನನಗೆ ನೊದಲು ತಿಳಿಯಲಿಲ್ಲ, ಕ್ಷಮಿಸಬೇಕು.

ಕೋರಿಕೆ—ಸಹೋದರರೇ, ಚಿಂತೆ ಪಡಬೇಡಿರಿ, ಸಂತೋಷವಾಗಿ ಪ್ರಯಿಸುತ್ತೇನೆ. ಈ ಕಷ್ಟಕ್ಕೆ ಸಿಕ್ಕಿದುದೂ ಒಳ್ಳೇದೇ ಎಂದು ಸಂಬದ್ದೇನೆ.

ಜಯ—ನಿವ್ಮ ಕ್ಷಮಾಗುಣಕ್ಕೆ ತುಂಬಾ ಸಂತೋಷಪಡುತ್ತೇನೆ. ಇಂಥ ಸತ್ಸಂಗ ದೊರಕಿದುದು ನೆನಗೆ ಬಲು ಮೇಲಾಯಿತು. ಮುಂದಿನ ಮಾತೇನಂದರೆ—ನಾವು ಇಲ್ಲಿ ಪ್ರಜ್ಞಮಾತ್ರವಾದರೂ ನಿಲ್ಲಬಾರದು. ಬಂಪ ದಾದಿಹಿಂದಿದು ಹಿಂದಕ್ಕೆ ಹೋಗುವುದೇ ಯುಕ್ತವೆಂದು ತೋರುತ್ತೆ.

ಕೋರಿಕೆ—ಅವ್ಪಹೆಯಪರೆ, ನಾವು ಮುಂದಾಗಿ ನಡೆಯು ತ್ತೇನೆ.

ಜಯ—ಅಪಾಗದು, ನಾನು ಮುಂದಾಗಿ ಹೋಗಲುಳ್ಳವನು, ನಾನು ದಾರಿತಪ್ಪಿದವನಾತ್ಕಾರಣ ಅಪಾಯವೇನಾದರೂ ಸಂಭವಿಸಿದರೆ, ನಾನೇ ಅವಕ್ಕೆ ಮೊದಲು ಗುರಿಯಾಗಲು ಬಾಧ್ಯತು.

ಕೋರಿಕೆ—ನಾನೆಂದಿಗೂ ಒಪ್ಪೆನು. ನಿವ್ಮ ಮಾತನ್ನು ಈಗ ಸ್ವಲ್ಪ ಬೆದರಿದೆ! ಪುರಃ ದಾರಿತಪ್ಪಿಸರೆ ಏನುಗತಿ!

